12 August 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸೋಲು ಮತ್ತು ಅಪಮಾನ ಇವು ಯಾವಾಗಲೂ ನೆನಪಿನಲ್ಲಿ ಉಳಿಯುವಂತಹ ವಿಷಯಗಳು!

-ಸ್ನೇಹಾ ಆನಂದ್

info.varthaman@gmail.com



ಬಹುತೇಕರಿಗೆ ಗುಣಮಟ್ಟದಲ್ಲಿ ವಿದ್ಯೆ ಸಿಗುತ್ತಿಲ್ಲ: ಬಂಜಗೆರೆ ಜಯಪ್ರಕಾಶ್ ಪುಟ ಸಂ. 2



ಎಲ್ಲಾ ಸಮಸ್ಯೆಗಳಿಗೂ ಬೌದ್ಧ ಧರ್ಮ ಔಷಧ: ಶಾಸಕ: ಕೃಷ್ಣಮೂರ್ತಿ ಪುಟ ಸಂ. 3



ವಿವಿಧ ಬಗೆಯ ಪುಷ್ಪಗಳಿಂದ ಮಿನುಗಿದ ಮಲೆ ಮಹದೇಶ್ವರ ಸ್ವಾಮಿ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 247 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3



## ಸಚಿವ ಸ್ಥಾನ ವಂಚಿತ ಮೈಸೂರಿನ ಮೂವರು ಮಾಜಿ ಸಚಿವರ ಗೌಪ್ಯ ಸಭೆ

**ಮೈಸೂರು:** ಡಿಕೆಶಿ ಸಂಪುಟದಲ್ಲಿ ಸಚಿವ ಸ್ಥಾನ ಕೈತಪ್ಪಿದ ಬೆನ್ನಲ್ಲೇ ಮೈಸೂರಿನ ಮೂವರು ಮಾಜಿ ಸಚಿವರು ಮಂಗಳವಾರ ಒಟ್ಟಿಗೆ ಸಭೆ ನಡೆಸಿರುವುದು ಕುತೂಹಲ ಮೂಡಿಸಿದೆ.

ಶಾಸಕರು ಹಾಗೂ ಮಾಜಿ ಸಚಿವರೂ ಆದ ಡಾ. ಎಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್ ಹಾಗೂ ತನ್ವೀರ್ ಸೇಠ್ ಅವರು ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಗೌಪ್ಯ ಮಾತುಕತೆ ನಡೆಸಿದರು. ಈ ವಿಷಯ ತಿಳಿದು ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಸಹ ಪುಟ 2ಕ್ಕೆ

## ಮುಂದೆ ತನ್ವೀರ್ ಸೇಠ್‌ಗೆ ಅವಕಾಶ: ಯು.ಟಿ.ಖಾದರ್

**ಮೈಸೂರು:** ಕಾಂಗ್ರೆಸ್ ಪಕ್ಷ ಸದ್ಯ ರಾಜ್ಯದಲ್ಲಿ ನನ್ನನ್ನೂ ಒಳಗೊಂಡು ನಾಲ್ವರು ಅಲ್ಪಸಂಖ್ಯಾತ ನಾಯಕರಿಗೆ ಅವಕಾಶ ನೀಡಿದೆ. ಮುಂದೆ ತನ್ವೀರ್ ಸೇಠ್ ಅವರಿಗೂ ಖಂಡಿತ ಅವಕಾಶ ಸಿಗಲಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿದರು.

ನಗರದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಆರು ಬಾರಿ ಶಾಸಕರಾಗಿ ಆಯ್ಕೆ ಆಗಿರುವ ತನ್ವೀರ್ ಸೇಠ್ ಖಂಡಿತ ಸಚಿವ ಸ್ಥಾನಕ್ಕೆ ಅರ್ಹರಿದ್ದಾರೆ. ಭವಿಷ್ಯದಲ್ಲಿ ಅವರಿಗೆ ಪಕ್ಷವು ಸೂಕ್ತ ಸ್ಥಾನಮಾನ ನೀಡಲಿದೆ ಎಂದರು. ಪುಟ 2ಕ್ಕೆ



# ತುರ್ತು ಪರಿಸ್ಥಿತಿ ಮಾದರಿ ಕೆಲಸ

## ಅಧಿಕಾರಿಗಳಿಗೆ ಡಿಸಿಎಂ ಪರಮೇಶ್ವರ್ ಸೂಚನೆ


**ಬೆಂಗಳೂರು:** ರಾಜ್ಯದಲ್ಲಿ ಭೀಕರ ಬರಗಾಲ ಆವರಿಸಿದೆ. ರೈತರ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳು ತುರ್ತು ಪರಿಸ್ಥಿತಿ ಮಾದರಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಸೂಚನೆ ನೀಡಿದರು.

ಸರ್ಕಾರಿ ಅಧಿಕಾರಿಗಳೊಂದಿಗೆ ಮಂಗಳವಾರ ಆಯೋಜಿಸಿದ್ದ ವಿಡಿಯೋ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಸೆಪ್ಟೆಂಬರ್ ತಿಂಗಳಲ್ಲಿ ಬರಗಾಲದ ತೀವ್ರತೆ ಇನ್ನಷ್ಟು ಹೆಚ್ಚಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಪ್ರತಿ ಜಿಲ್ಲಾಧಿಕಾರಿ, ಜಿಪಂ ಸಿಇಒ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿರಬೇಕು. ಸಾರ್ವಜನಿಕರ ಅಹವಾಲುಗಳನ್ನು ಆಲಿಸಬೇಕು ಎಂದು ಸೂಚನೆ ನೀಡಿದರು.

ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಲು ಮತ್ತು ನೇರ ಸಂವಾದಕ್ಕಾಗಿ 'ಪ್ರಜಾಸೇವೆ' ಇಲಾಖೆಯನ್ನು ಸರ್ಕಾರ ಆರಂಭಿಸಿದೆ. ಸರ್ಕಾರದ ಯೋಜನೆಗಳು ಹಾಗೂ ಪರಿಹಾರ ಕ್ರಮಗಳು ಪುಟ 2ಕ್ಕೆ

### 164 ತಾಲ್ಲೂಕುಗಳಲ್ಲಿ ಬರ

ರಾಜ್ಯದ ಒಟ್ಟು 240 ತಾಲ್ಲೂಕುಗಳ ಪೈಕಿ 164 ತಾಲ್ಲೂಕುಗಳಲ್ಲಿ ತೀವ್ರ ಮಳೆ ಕೊರತೆಯಿಂದಾಗಿ ಬರಗಾಲ ಆವರಿಸಿದೆ. ರೈತರು ಬೆಳೆ ನಷ್ಟದಿಂದ ತೀವ್ರ ಸಂಕಷ್ಟದಲ್ಲಿದ್ದಾರೆ. ಅಂತರ್ಜಲ ಮಟ್ಟ ಕುಸಿದಿದೆ. ಕುಡಿ ಪುಟ 2ಕ್ಕೆ



# ಜಿಲೆಟಿನ್ ಕಡ್ಡಿ ಸ್ಫೋಟ: ಇಬ್ಬರು ಸಾವು, ನಾಲ್ವರು ಗಂಭೀರ ಸ್ಥಿತಿ

## ಪತ್ನಿ ಮೇಲಿನ ಅನುಮಾನದಿಂದ ಸ್ಫೋಟಿಸಿದ ವ್ಯಕ್ತಿಯೂ ಸಾವು

**ಕಲಬುರಗಿ:** ಪತ್ನಿ ಮೇಲಿನ ಅನುಮಾನದಿಂದ ವ್ಯಕ್ತಿಯೊಬ್ಬ ಮನೆಯೊಳಗೆ ಜಿಲೆಟಿನ್ ಕಡ್ಡಿ ಬ್ಲಾಸ್ಟ್ ಮಾಡಿದ ಘಟನೆ ಆಳಂದ ತಾಲೂಕಿನ ಮಟಕಿ ತಾಂಡದಲ್ಲಿ ನಡೆದಿದೆ. ಸ್ಫೋಟ ಮಾಡಿದ ವ್ಯಕ್ತಿ ಹಾಗೂ ಆತನ ಮಗಳು ಸಾವನ್ನಪ್ಪಿದ್ದಾರೆ. ಆತನ ಪತ್ನಿ ಹಾಗೂ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಶಿವಲಾಲ್ ಬಳಿರಾಮ್ ರಾಠೋಡ್ (50) ಹಾಗೂ ಮೀರಾ (15) ಸಾವನ್ನಪ್ಪಿದವರು. ಶಿವಲಾಲ್ ತನ್ನ ಹೆಂಡತಿ ಮೇಲೆ ಅನುಮಾನ ಪಡುತ್ತಿದ್ದ. ಇದರಿಂದ ತಾನು ಕೆಲಸ ಮಾಡುತ್ತಿದ್ದ ಕಲ್ಲು ಕ್ವಾರಿಯಿಂದ ಜಿಲೇಟಿನ್ ಕಡ್ಡಿ ಮನೆಗೆ ತಂದು ಮಂಗಳವಾರ ಬೆಳಗ್ಗೆ ಎಲ್ಲರೂ ಇರುವಾಗಲೇ ಬ್ಲಾಸ್ಟ್ ಮಾಡಿದ್ದಾನೆ.

ಸ್ಫೋಟದಲ್ಲಿ ತಾನೂ ಸಾವನ್ನಪ್ಪಿದ್ದಾನೆ. ಆತನ ಪತ್ನಿ ಸವಿತಾ ಹಾಗೂ ಮನೆಯಲ್ಲಿದ್ದ ಪ್ರಕಾಶ್, ಸುರೇಖಾ ಹಾಗೂ ವಿವೇಕ್ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಜಿಮ್ಸ್ ಪುಟ 2ಕ್ಕೆ



## ತ.ನಾಡಿಗೆ ನಿತ್ಯ 12 ಸಾವಿರ ಕ್ಯೂಸೆಕ್ ನೀರು ಹರಿಸಲು ಸೂಚನೆ

# ಕರ್ನಾಟಕಕ್ಕೆ ಮತ್ತೆ ಜಲಾಘಾತ


## 15 ದಿನ ನೀರು ಹರಿಸಿ: ಸಿಡಬ್ಲ್ಯೂ ಆರ್‌ಸಿ ಆದೇಶ ಎತ್ತಿ ಹಿಡಿದ ಸಿಡಬ್ಲ್ಯೂಎಂಎ

**ನವದೆಹಲಿ:** ತಮಿಳುನಾಡಿಗೆ ನಿತ್ಯ 12 ಸಾವಿರ ಕ್ಯೂಸೆಕ್ ನೀರು ಹರಿಸಬೇಕು ಎನ್ನುವ ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಎತ್ತಿಹಿಡಿದಿದೆ.

ನಾಳೆಯಿಂದಲೇ (ಆಗಸ್ಟ್ 12ರಿಂದ) ಪ್ರತಿ ದಿನ 12 ಸಾವಿರ ಕ್ಯುಸೆಕ್ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಬೇಕು ಎಂದು ನಿರ್ದೇಶಿಸಿದೆ. 15 ದಿನಗಳಲ್ಲಿ15.50 ಟಿಎಂಸಿ ನೀರು ಹರಿಸಬೇಕು ಎಂದು ಪ್ರಾಧಿಕಾರ ಕರ್ನಾಟಕಕ್ಕೆ ನಿರ್ದೇಶಿಸಿದೆ. 36 ಟಿಎಂಸಿ ನೀರು ಹರಿಸಬೇಕು ಎಂದು ತಮಿಳುನಾಡು ಪಟ್ಟು ಹಿಡಿದಿತ್ತು.

ಕಾವೇರಿ ನೀರು ಹಂಚಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯೂಆರ್‌ಸಿ) ಮಂಗಳವಾರ ಬೆಳಗ್ಗೆ ಸಭೆ ನಡೆಸಿ ಮುಂದಿನ 15 ದಿನಗಳ ಕಾಲ ತಮಿಳುನಾಡಿಗೆ ನಿತ್ಯ 12,000 ಕ್ಯೂಸೆಕ್ ನೀರು ಹರಿಸುವಂತೆ ಕರ್ನಾಟಕಕ್ಕೆ ಸೂಚಿಸಿತ್ತು.

ದೆಹಲಿಯ ಕಚೇರಿಯಲ್ಲಿ ಬೆಳಗ್ಗೆ ಅಧ್ಯಕ್ಷ ವಿನೀತ್ ಗುಪ್ತಾ ನೇತೃತ್ವದಲ್ಲಿ ಪ್ರಮುಖರ ಸಭೆ ನಡೆಯಿತು. ಕರ್ನಾಟಕದ ಪರವಾಗಿ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಹಾಜರಿದ್ದು ರಾಜ್ಯದಲ್ಲಿನ ಜಲಾಶಯಗಳ ನೀರಿನ ಮಟ್ಟ ಹಾಗೂ ವಸ್ತುಸ್ಥಿತಿಯನ್ನು ಪ್ರಾಧಿಕಾರದ ಪುಟ 2ಕ್ಕೆ



### ಕಬಿನಿಯಿಂದ ಹೆಚ್ಚಿನ ನೀರು

**ಮೈಸೂರು:** ಕೇರಳದಲ್ಲಿ ಮಳೆ ಆಗುತ್ತಿರುವ ಹಿನ್ನೆಲೆಯಲ್ಲಿ ಕಬಿನಿ ಜಲಾಶಯಕ್ಕೆ ಸುಮಾರು 10 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಜಲಾಶಯದಿಂದ ಸುಮಾರು ನದಿಗೆ ಈಗಲೂ 12 ಸಾವಿರ ಕ್ಯೂಸೆಕ್ ನೀರನ್ನು ಹೊರ ಪುಟ 2ಕ್ಕೆ

### ಕಾವೇರಿ: ಚರ್ಚಿಸಿ ನಿರ್ಧಾರ

#### ಇಂದು ಸಚಿವರು, ನಾಯಕರ ಸಭೆ: ಸಿಎಂ ಡಿಕೆಶಿ

**ಬೆಂಗಳೂರು:** ತಮಿಳುನಾಡಿಗೆ 12 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದ ಬಗ್ಗೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ನಮ್ಮ ಜಲಾಶಯಗಳ ಒಳಹರಿವು ಎಷ್ಟಿದೆ ಎಂದು ನೋಡ್ತಾ ಇದ್ದೀನಿ. ನಮ್ಮ ಪರಿಸ್ಥಿತಿ ನೋಡಿಕೊಂಡು ನಮ್ಮ ರೈತರನ್ನು ಕಾಪಾಡೋ ಕರ್ತವ್ಯ ಇದೆ. ರೈತರನ್ನು ಕಾಪಾಡಬೇಕು. ಕೋರ್ಟ್ ಆದೇಶ ಕೂಡಾ ಪಾಲನೆ ಪುಟ 2ಕ್ಕೆ

| ಜಲಾಶಯಗಳ ನೀರಿನ ಮಟ್ಟ | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 109.39 ಅಡಿ |
| ಒಳಹರಿವು | 7285 ಕ್ಯುಸೆಕ್ |
| ಹೊರ ಹರಿವು | 2294 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2282.76 ಅಡಿ |
| ಒಳಹರಿವು | 9660 ಕ್ಯುಸೆಕ್ |
| ಹೊರ ಹರಿವು | 11583 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2858.15 ಅಡಿ |
| ಒಳಹರಿವು | 5000 ಕ್ಯುಸೆಕ್ |
| ಹೊರ ಹರಿವು | 5000 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2915.43 ಅಡಿ |
| ಒಳಹರಿವು | 3117 ಕ್ಯುಸೆಕ್ |
| ಹೊರಹರಿವು | 500 ಕ್ಯುಸೆಕ್ |

## ಅಲೆಮಾರಿ ಅಭಿವೃದ್ಧಿ ಆಯೋಗ ರಚನೆ: ಡಿಕೆಶಿ

**ಬೆಂಗಳೂರು:** ಒಂದು ತಿಂಗಳೊಳಗೆ ಅಲೆಮಾರಿ, ಆದಿವಾಸಿ ಅಭಿವೃದ್ಧಿ ಆಯೋಗವನ್ನು ರಚನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.



ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾ ಮತ್ತು ರಾಜ್ಯ ಪಂಚ ಬುಡಕಟ್ಟು ಸಂರಕ್ಷಣಾ ಸಮಿತಿಯಿಂದ ಮಂಗಳವಾರ ಏರ್ಪಡಿಸಿದ್ದ ವಿಶ್ವ ಆದಿವಾಸಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪಕ್ಷದ ಚುನಾವಣೆ ಪ್ರಣಾಳಿಕೆಯಲ್ಲೂ ಆಯೋಗ ರಚಿಸುವುದಾಗಿ ಭರವಸೆ ನೀಡಲಾಗಿತ್ತು. ಅದನ್ನು ಸರ್ಕಾರ ಈಡೇರಿಸಲಿದೆ ಎಂದು ಹೇಳಿದರು.

ಆದಿವಾಸಿ ಸಮುದಾಯದ ಮಕ್ಕಳಿಗೆ ಶಿಕ್ಷಣ, ಉದ್ಯೋಗ, ಆಹಾರ ಸೇರಿ ಎಲ್ಲ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವುದು. ಯಾರು ಕೂಡ ಕಾಡು, ಪ್ರಕೃತಿಯಿಂದ ದೂರ ಬರಬೇಡಿ. ಬೇರಿದ್ದರೆ ಪುಟ 2ಕ್ಕೆ

## ಕಬಿನಿಯಿಂದ ತ.ನಾಡಿಗೆ ಹರಿದ 16 ಟಿಎಂಸಿ ನೀರು


**ಬೆಂಗಳೂರು:** ಕಾವೇರಿ ಕೊಳ್ಳದಿಂದ ತಮಿಳುನಾಡಿಗೆ ನಿತ್ಯ 12 ಸಾವಿರ ಕ್ಯೂಸೆಕ್ ನೀರು ಹರಿಸಬೇಕು ಎಂದು ಕಾವೇರಿ ನೀರು ಮೇಲುಸ್ತುವಾರಿ ಸಮಿತಿ ಸೂಚನೆ ನೀಡಿರುವ ನಡುವೆಯೇ ಆಗಸ್ಟ್ ತಿಂಗಳಿನಲ್ಲಿ ಮೈಸೂರು ಜಿಲ್ಲೆಯ ಕಬಿನಿ ಜಲಾಶಯದಿಂದ ಹೆಚ್ಚಿನ ನೀರು ಹರಿದು ಹೋಗಿದೆ.

ಸುಮಾರು 15 ದಿನದವರೆಗೂ ಸತತ 3500 ಕ್ಯೂಸೆಕ್‌ನಂತೆ 4.50 ಟಿಎಂಸಿ ನೀರು ಹರಿಸಬೇಕು ಎಂದು ಸಮಿತಿ ಕಳೆದ ತಿಂಗಳು ತಿಳಿಸಿತ್ತು. ಅದರಂತೆ ಕಬಿನಿ ಜಲಾಶಯದಿಂದ ನಿರಂತರವಾಗಿ ನೀರು ಹರಿಸಲಾಗಿದೆ.

ಸಮಿತಿ ಹಿಂದೆ ಸೂಚನೆ ನೀಡಿದ ನಂತರವೇ ಸುಮಾರು 16 ಟಿಎಂಸಿ ನೀರು ಕಬಿನಿ ಜಲಾಶಯದಿಂದ ಹರಿದು ಹೋಗಿದೆ. ಅದರಲ್ಲೂ ಆಗಸ್ಟ್ ತಿಂಗಳ 10 ದಿನದಲ್ಲೇ ಅಂದಾಜು 13 ಟಿಎಂಸಿ ನೀರು ಹರಿಬಿಡಲಾಗಿದೆ.

ಕೆಲವೊಂದು ದಿನ 11 ಸಾವಿರ ಕ್ಯೂಸೆಕ್ ನೀರು ಹೊರ ಹೋಗಿದೆ. ಕೆಲವು ದಿನ ಒಳಹರಿವು ಅಧಿಕವಾಗಿದ್ದಾಗ 27 ಸಾವಿರ ಕ್ಯೂಸೆಕ್ ನೀರು ನದಿ ಮೂಲಕ ಹರಿದು ಹೋಗಿದೆ. ಸದ್ಯ 10 ಸಾವಿರ ಕ್ಯೂಸೆಕ್ ನೀರು ಜಲಾಶಯಕ್ಕೆ ಹರಿದು ಬರುತ್ತಿದೆ. ಅಷ್ಟೇ ಪ್ರಮಾಣದಲ್ಲಿ ಹೊರಬಿಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ತಿಂಗಳ ಅಂತ್ಯದವರೆಗೆ ಕಬಿನಿ ನದಿ ಪಾತ್ರದ ಪ್ರದೇಶಗಳಲ್ಲಿ ಮಳೆಯಾಗುವ ಮುನ್ಸೂಚನೆಯಿದೆ. ಅದರಲ್ಲೂ ಕೇರಳದ ವಯನಾಡು ಭಾಗದಲ್ಲಿ ಮಳೆಯಾಗಬಹುದು ಎಂದು ತಿಳಿಸಲಾಗಿದೆ. ಓಣಂವರೆಗೂ ಮಳೆಯಾಗುವ ಸೂಚನೆ ಇರುವುದರಿಂದ ಕಬಿನಿ ಜಲಾಶಯಕ್ಕೆ ಇನ್ನೂ ಕೆಲವು ದಿನ ಒಳಹರಿವು ಇರಲಿದೆ. ಜಲಾಶಯ ಭರ್ತಿಯಾಗಿರುವುದರಿಂದ ಸುರಕ್ಷತೆ ದೃಷ್ಟಿಯಿಂದ ಹೆಚ್ಚಿನ ನೀರನ್ನು ಹೊರ ಹರಿಸಬೇಕಾಗುತ್ತದೆ ಎನ್ನಲಾಗಿದೆ.



ಕಬಿನಿ ಜಲಾಶಯದಿಂದ ಹೊರ ಬಿಡುತ್ತಿರುವ ನೀರಿನ ಪ್ರಮಾಣದಲ್ಲಿ ನಿತ್ಯ 2 ಸಾವಿರ ಕ್ಯೂಸೆಕ್ ನೀರನ್ನು ಕೆರೆಗಳನ್ನು ತುಂಬಿಸಲು ಹಾಗೂ ಕುಡಿಯುವ ನೀರಿಗಾಗಿ ಬಳಸಲಾಗುತ್ತಿದೆ. ಉಳಿಕೆ ನೀರು ನದಿ ಮೂಲಕ ತಮಿಳುನಾಡಿಗೆ ಹೋಗಿರಬಹುದು. ಪುಟ 2ಕ್ಕೆ

## 13ರಂದು ಬಂದ್ ಖಚಿತ: ವಾಟಾಳ್ ಖಡಕ್ ಹೇಳಿಕೆ

**ಬೆಂಗಳೂರು:** ಕಾವೇರಿ ನೀರಿನ ವಿಚಾರದಲ್ಲಿ ಯಾರು ಬೆಂಬಲ ನೀಡಲಿ, ಬಿಡಲಿ ಬಂದ್ ಮಾಡೇ ಮಾಡುತ್ತೇವೆ ಎಂದು ವಾಟಾಳ್ ನಾಗರಾಜ್ ಖಡಕ್ ಆಗಿ ಹೇಳಿದ್ದಾರೆ.



ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದ ಹಿನ್ನೆಲೆಯಲ್ಲಿ ಆ.13ರಂದು ರಾಜ್ಯ ಬಂದ್‌ಗೆ ಕನ್ನಡ ಪರ ಪುಟ 2ಕ್ಕೆ

## ಭ್ರಷ್ಟಾಚಾರಿಗಳ ಬಡಿದು ಹಾಕುವೆ

### ಅಧಿಕಾರಿಗಳಿಗೆ ಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ

**ಬೆಂಗಳೂರು:** ಭ್ರಷ್ಟಾಚಾರ ವಿಚಾರದಲ್ಲಿ ರಾಜಿ ಆಗುವುದಿಲ್ಲ. ಡಬಲ್ ಬಿಲ್, ನಕಲಿ ಬಿಲ್ ಮಾಡುವವರನ್ನು ಬಡಿದು ಹಾಕುವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸರ್ಕಾರಿ ನೌಕರರಿಗೆ ಎಚ್ಚರಿಕೆ ನೀಡಿದರು.

ಮಂಗಳವಾರ ರಾಜ್ಯ ಸರ್ಕಾರಿ ನೌಕರರ ಜತೆಗಿನ ವಿಡಿಯೊ ಸಂವಾದದಲ್ಲಿ ಅವರು ಮಾತನಾಡಿದರು. ಭ್ರಷ್ಟಾಚಾರ ವಿಚಾರದಲ್ಲಿ ಅಧಿಕಾರಿಗಳ ಪ್ರತಿ ಪುಟ 2ಕ್ಕೆ

# ಉಪ ಮುಖ್ಯಮಂತ್ರಿ ಸ್ಥಾನ ಚರ್ಚೆ ಸತ್ಯ

## ನನಗೆ, ಎಂ.ಬಿ.ಪಾಟೀಲ್ ಸಾಧ್ಯತೆ: ಜಾರಕಿಹೊಳಿ ಹೇಳಿಕೆ

**ಬೆಳಗಾವಿ:** ನನಗೆ ಹಾಗೂ ಸಚಿವ ಎಂ.ಬಿ.ಪಾಟೀಲ್ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವ ಕುರಿತು ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ನಡೆದಿರುವುದು ಸತ್ಯ. ಸಮಯ ಬಂದಾಗ ಈ ವಿಷಯವಾಗಿ ಮಾತನಾಡುವೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಹಿತದೃಷ್ಟಿಯಿಂದ ಉಪಮುಖ್ಯಮಂತ್ರಿ ಸ್ಥಾನ ನೀಡುವ ವಿಚಾರ ಚರ್ಚೆಯಾಗುತ್ತಿತ್ತೇ ಹೊರತು, ನಾವು ಯಾವುದೇ ಸ್ಥಾನಕ್ಕೆ ಬೇಡಿಕೆ ಇಟ್ಟಿಲ್ಲ. ಪಕ್ಷವೇ ನಮ್ಮನ್ನು ಗುರುತಿಸಬೇಕು. ನಾವು ಯಾವುದೇ ರೀತಿಯ ಒತ್ತಡ ಹೇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಅಧಿವೇಶನ ಆರಂಭವಾಗುವ ಹಿನ್ನೆಲೆಯಲ್ಲಿ, ಹೊಸದಾಗಿ ಸಂಪುಟ ಸೇರಿದ 19 ಸಚಿವರಿಗೆ ಇದೇ 13ರೊಳಗೆ ಖಾತೆ ಹಂಚಿಕೆ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದೆ



ಎಂದು ಹೇಳಿದರು.

ನಿಮ್ಮ ಖಾತೆ ಬದಲಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ, ಖಾತೆ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ನಾನೂ ಬೇರೆ ಯಾವುದೇ ಖಾತೆ ಕೇಳಿಲ್ಲ. ಯಾರಿಗೆ ಯಾವ ಖಾತೆ ನೀಡಬೇಕು ಎಂಬುದು ಪಕ್ಷದ ತೀರ್ಮಾನಕ್ಕೆ ಬಿಟ್ಟ ವಿಚಾರ. ಪಕ್ಷ ಕೈಗೊಳ್ಳುವ ನಿರ್ಧಾರವನ್ನು ನಾವು ಗೌರವಿಸುತ್ತೇವೆ. ಸದ್ಯ ನಾನು ನಿರ್ವಹಿಸುತ್ತಿರುವ ಲೋಕೋಪಯೋಗಿ ಖಾತೆಯಲ್ಲೇ ಮುಂದುವರಿಯುವೆ ಎಂದು ಸ್ಪಷ್ಟಪಡಿಸಿದರು.

ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ನನ್ನ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಒಗ್ಗಟ್ಟಿನಿಂದ ಇದ್ದೇವೆ. ಸಿದ್ದರಾಮಯ್ಯ ಜತೆಗೆ ಈ ಹಿಂದೆ ಯಾವ ರೀತಿಯ ಸಂಬಂಧವಿತ್ತೋ, ಮುಂದೆಯೂ ಹಾಗೆಯೇ ಮುಂದುವರಿಯಲಿದೆ. ಅಸಮಾಧಾನವಿದೆ ಎಂಬುದು ಕಪೋಕಲ್ಪಿತ ಸುದ್ದಿ. ಸಿದ್ದರಾಮಯ್ಯ ಅಧಿಕಾರದಲ್ಲಿ ಇರಲಿ ಅಥವಾ ಇಲ್ಲದಿರಲಿ. ಅವರೇ ನಮ್ಮ ನಾಯಕರು. 2028ರಲ್ಲಿ ಅವರ ನಾಯಕತ್ವದಲ್ಲಿ ವಿಧಾನಸಭೆ ಚುನಾವಣೆ ಎದುರಿಸುತ್ತೇವೆ ಎಂದು ಹೇಳಿದರು. ಬಿ.ನಾಗೇಂದ್ರ ಅವರಿಗೆ ಮತ್ತೆ ಸಚಿವ ಸ್ಥಾನ ನೀಡಿರುವುದರಲ್ಲಿ ತಪ್ಪಿಲ್ಲ.

# ಸಿಎಂ ಒತ್ತಡಕ್ಕೆ ಮಣಿದು ರಾಜೀನಾಮೆ

## ಆಸ್ಪತ್ರೆಯಲ್ಲಿದ್ದಾಗಲೂ ಒತ್ತಾಯ: ಬಸವರಾಜ ಹೊರಟ್ಟಿ

**ಹುಬ್ಬಳ್ಳಿ:** ನಾನು ಆಸ್ಪತ್ರೆಯಲ್ಲಿದ್ದಾಗಲೂ ದೂರವಾಣಿ ಮೂಲಕ ಸಂಪರ್ಕಿಸಿ ರಾಜೀನಾಮೆ ನೀಡುವಂತೆ ಮುಖ್ಯಮಂತ್ರಿ ಒತ್ತಾಯಿಸಿದರು. ರಾಜೀನಾಮೆ ಪತ್ರ ಸಿದ್ಧಪಡಿಸುವಂತೆ ನಾನು ಯಾರಿಗೂ ಹೇಳಿರಲಿಲ್ಲ. ಆದರೆ ನನ್ನ ಮುಂದೆಯೇ ರಾಜೀನಾಮೆ ಪತ್ರವನ್ನು ಟೈಪ್ ಮಾಡಿ, ಅದಕ್ಕೆ ಸಹಿ ಹಾಕುವಂತೆ ಒತ್ತಡ ಹೇರಿದರು. ಪರಿಸ್ಥಿತಿಗೆ ಮಣಿದು ರಾಜೀನಾಮೆ ನೀಡಬೇಕಾಯಿತು ಎಂದು ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಆರೋಪಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಭಾಪತಿ ಸ್ಥಾನದಿಂದ ತಮ್ಮನ್ನು ಕೆಳಗಿಳಿಸಿದ ಪ್ರಕ್ರಿಯೆ ಕುರಿತು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುವ ಬಗ್ಗೆ ಮುಖ್ಯಮಂತ್ರಿ ಅವರೊಂದಿಗೆ ಮೊದಲೇ ಮಾತುಕತೆ ನಡೆದಿತ್ತು. ಆ. 14ರಂದು ರಾಜೀನಾಮೆ ನೀಡುವ ಕುರಿತು ಒಪ್ಪಂದವಾಗಿದ್ದರೂ, ಮುಖ್ಯಮಂತ್ರಿ



ಡಿ.ಕೆ.ಶಿವಕುಮಾರ್ ಅವರಿಂದ ನಿರಂತರ ಒತ್ತಡ ಬಂದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಆ.7ರಂದೇ ರಾಜೀನಾಮೆ ನೀಡಬೇಕಾಯಿತು ಎಂದು ಹೊರಟ್ಟಿ ಆರೋಪಿಸಿದರು.

ವಿಧಾನ ಪರಿಷತ್ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿರುವ ನಿದರ್ಶನ 1956ರಿಂದ ಈವರೆಗೆ ನಡೆದಿಲ್ಲ. ರಾಜ್ಯದ ವಿಧಾನ ಪರಿಷತ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಂತಹ ಬೆಳವಣಿಗೆ ನಡೆದಿದೆ. ಸಭಾಪತಿ ಸ್ಥಾನಕ್ಕೆ ಸಂಬಂಧಿಸಿದಂತೆ ಈ ರೀತಿಯ ವರ್ತನೆ ಸರಿಯಲ್ಲ.

# ಬಹುತೇಕರಿಗೆ ಗುಣಮಟ್ಟದಲ್ಲಿ ವಿದ್ಯೆ ಸಿಗುತ್ತಿಲ್ಲ

## ಬಂಜಗೆರೆ ಜಯಪ್ರಕಾಶ್ ಹೇಳಿಕೆ | ಉಚಿತ ತರಬೇತಿ ಮುಂದುವರೆಯಲಿದೆ: ಕೆ.ಶೇಷಾದ್ರಿ

ರಾಮನಗರ: ಬಹುತೇಕರಿಗೆ ವಿದ್ಯೆ ಸಿಗಬೇಕಾದಷ್ಟು ಪ್ರಮಾಣ ಮತ್ತು ಗುಣಮಟ್ಟದಲ್ಲಿ ಸಿಗುತ್ತಿಲ್ಲ ಎಂದು ಸಾಹಿತಿ ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು.

ನಗರಸಭೆ ಸಭಾಂಗಣದಲ್ಲಿ ನಗರಸಭೆ ಕಾರ್ಯಾಲಯ ಹಾಗೂ ಅಕ್ಕಾ ಐಎಎಸ್ ಅಕಾಡೆಮಿ ವತಿಯಿಂದ ಕಳೆದ ಸಾಲಿನಲ್ಲಿ ಅಯೋಜನೆಯಾಗಿದ್ದ ನೀಟ್, ಜೆಇಇ, ಮತ್ತು ಕೆ ಸಿಇಟಿ ಪ್ರವೇಶ ಪರೀಕ್ಷೆಗೆ ತರಬೇತಿ ಪಡೆದು ಸಿಇಟಿ 2026ರ ಪ್ರವೇಶ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ವಿದ್ಯೆ ನಿರ್ವಹಣೆ ಕಷ್ಟ. ವಿದ್ಯೆ ನಿರ್ವಹಣೆಮಾಡಲು ಸಹಕರಿಸುವ ಪ್ರತಿಯೊಬ್ಬರೂ ಪ್ರಾತಃ ಸ್ಮರಣೀಯರು ಎಂದರು.

ಉನ್ನತ ಶಿಕ್ಷಣ ಇಂದು ಬಹುತೇಕ ಯುವ ಸಮುದಾಯಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರಗಳು ಆರ್ಥಿಕವಾಗಿ ಬಡವರು ಸೇರಿದಂತೆ ಎಲ್ಲರಿಗೂ ಉಚಿತವಾಗಿ ಉನ್ನತ ಶಿಕ್ಷಣ ದೊರಕಿಸಿಕೊಡಲು ಮುಂದಾಗಬೇಕು. ರಸ್ತೆ, ಸೇತುವೆ, ಕಟ್ಟಡಗಳ ನಿರ್ಮಾಣ ಮುಖ್ಯ. ಮಾನವ ಸಂಪನ್ಮೂಲ ನಿರ್ಮಾಣ ಸಹ ಅತಿ ಮುಖ್ಯ ಎಂದರು.

ವೃತ್ತಿ ಪರ ಪರೀಕ್ಷೆಗಳಿಗೆ ತರಬೇತಿಯನ್ನು ಶುಲ್ಕ ಪಡೆದು ಪಡೆಯುವುದು ಅನೇಕ ಕುಟುಂಬಗಳಿಗೆ ಸಾಧ್ಯವಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ರಾಮನಗರ ನಗರಸಭೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡಿದ್ದು ಸ್ತುತ್ಯಾರ್ಹ. ನಗರಸಭೆಯ ಮೂಲಕ ವೆಚ್ಚವಾದ ಈ ಹಣ ವ್ಯರ್ಥವಾಗದ ವೆಚ್ಚ ಎಂದು ಶ್ಲಾಘಿಸಿದರು.

ಮಹಿಳೆಯರಿಗೆ ಶಿಕ್ಷಣ ನೀಡಿದರೆ ಅವರು ಜ್ಞಾನಿಗಳಾಗುತ್ತಾರೆ, ಜೊತೆಗೆ ಕುಟುಂಬಕ್ಕೂ ಮಾರ್ಗದರ್ಶಕವಾಗುತ್ತಾರೆ. ಸಾಮಾನ್ಯ ಶಿಕ್ಷಣ ಪಡೆದರೆ ಸಾಲದು ಉನ್ನತ ಶಿಕ್ಷಣ ಪಡೆಯಬೇಕು.

ದೇಶದಲ್ಲಿ ಬಡತನ ನಿರ್ಮೂಲನೆಗೆ ಅನೇಕ ಕಾರ್ಯಕ್ರಮ ರಕಪಿಸುತ್ತಾರೆ. ಆದರೆ ಬಡವರ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಿದರೆ ಅವರ ಬದುಕು ಬದಲಾಗುತ್ತದೆ. ದೇವನೂರು ಮಹದೇವರ ಅವರ ಹೇಳಿಕೆಯಂತೆ ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ ವ್ಯರ್ಥವಾಗುವುದಿಲ್ಲ ಎಂದರು.

ಸಂವಿಧಾನ ರಚಿಸಿದ ಅಂಬೇಡ್ಕರ್ ರವರು ಶಿಕ್ಷಣ ಮತ್ತು ಹೋರಾಟಕ್ಕೆ ಪ್ರಾಮುಖ್ಯತೆ ನೀಡಿದರು. ಯಾರು ಶಿಕ್ಷಣ ಪಡೆಯುತ್ತಾರೊ ಅವರು ಸಾಮಾನ್ಯರಾಗಿ ಉಳಿಯುವುದಿಲ್ಲ ಎಂಬುದು ಅವರ ಅಭಿಪ್ರಾಯ. ಅಹಿಂದ ವರ್ಗಗಳಲ್ಲಿ ಹೂಡ ಬೇಕಾದ ಬಂಡವಾಳ ಅಂದರೆ ಶಿಕ್ಷಣ. ತನ್ಮೂಲಕ ಉದ್ಯೋಗ ಸಿಗುವಂತಾಗಬೇಕು. ಅಲ್ಪಸಂಖ್ಯಾತ ಹೆಣ್ಣು ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ಮಾಡಿದರೆ ಸಾಮಾಜಿಕ ಬದಲಾಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಅಭಿಪ್ರಾಯಪಟ್ಟರು. ಎಲ್ಲ ಸ್ಥಳೀಯ ಸಂಸ್ಥೆಗಳು ಈ ರೀತಿಯ ತರಬೇತಿಗಳನ್ನು ಆಯೋಜನೆ ಮಾಡಬೇಕು. ಇದಕ್ಕೆ ಮನಸ್ಸು ಮತ್ತು ಪ್ರೇರಣೆ ಮುಖ್ಯವಾಗುತ್ತದೆ. ಜಾಗೃತಿ ಸಂವೇದನೆ ಮುಖ್ಯ. ಸಿಕ್ಕಿರುವ ಅಧಿಕಾರ ಸ್ಥಾನವನ್ನು ಈ ವಿಚಾರದಲ್ಲಿ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ಬಾಲಕೀಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಅನ್ಸರ್ ಉಲ್ಲ ಮಾತನಾಡಿದರು. ವೇದಿಕೆಯಲ್ಲಿ ನಗರಸಭೆಯ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಆರೀಫ್, ಸದಸ್ಯರಾದ ಮೋಯಿನ್, ಸಮದ್, ಬಿ.ಸಿ.ಪಾರ್ವತಮ್ಮ, ಆಯಿಷಾ ಬಾನು, ನಾಗಮ್ಮ ಮತ್ತಿತರರು ಉಪಸ್ಥಿತರಿದ್ದರು.



### ಒಳ್ಳೆಯ ಅಂಕ ಪಡೆದಿರುವುದು ವ್ಯರ್ಥವಾಗದಿರಲಿ: ಶಿವಕುಮಾರ್

**ಅಕ್ಕಾ ಐಎಎಸ್ ಅಕಾಡೆಮಿ ನಿರ್ದೇಶಕ ಶಿವಕುಮಾರ್ ಮಾತನಾಡಿ, ಎಸ್.ಎಸ್.ಎಲ್.ಸಿ ಮತ್ತು ಪದವಿ ಪೂರ್ವ ಪರೀಕ್ಷೆಗಳಲ್ಲಿ ಬಾಲಕಿಯರು ಸದಾ ಮುಂದಿರುತ್ತಾರೆ. ಆದರೆ ಐಐಟಿ, ಐಐಎಂ ಮುಂತಾದ ಅತಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವವರ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಶೇ 25ಕ್ಕೂ ಕಡಿಮೆ ಇದೆ ಎಂದು ವಿಷಾಧಿಸಿದರು. ಉನ್ನತ ವಿದ್ಯಾಭ್ಯಾಸ ಪಡೆದು ಉನ್ನತಮಟ್ಟದ ಸ್ಥಾನಗಳಲ್ಲಿ ಮಹಿಳೆಯರು ಇಲ್ಲದಿದ್ದರೇ ಕಾನೂನು ಮಾಡುವುದು ಹೇಗೆ ಎಂದು ಪ್ರಶ್ನಿಸಿದರು. ಒಳ್ಳೆಯ ಅಂಕ ಪಡೆದಿರುವುದು ವ್ಯರ್ಥ ಆಗಬಾರದು. ಈ ವಿಚಾರದಲ್ಲಿ ಪೋಷಕರು ಸಹ ತಮ್ಮ ಮಕ್ಕಳಿಗೆ ಸಹಕಾರ ನೀಡಬೇಕು ಎಂದರು. ಮುಂದಿನ ನಾಲ್ಕೈದು ವರ್ಷ ಶ್ರದ್ದೆಯಿಂದ ವ್ಯಾಸಂಗ ಮಾಡಿ ಉಳಿದ ನಿಮ್ಮ ಬದಕು ನೆಮ್ಮದಿಯಿಂದ ಇರುತ್ತದೆ ಎಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಮುಂದುವರೆದ ಅವರು ಎಷ್ಟೇ ಉನ್ನತ ಹುದ್ದೆ ಅಲಂಕರಿಸಿದರು. ಪೋಷಕರು, ಅಕ್ಷರ ಕಲಿಸಿದ ಶಿಕ್ಷಕರು, ಓದಿದ ವಿದ್ಯಾ ಸಂಸ್ಥೆಗಳು ಮತ್ತು ಉಚಿತ ತರಬೇತಿ ನೀಡಿದ ನಗರಸಭೆಗೆ ಸದಾ ಕೃತಜ್ಞರಾಗಿರಿ ಎಂದರು.**

### ಉಚಿತ ತರಬೇತಿ ಮುಂದುವರೆಯಲಿದೆ: ಕೆ.ಶೇಷಾದ್ರಿ

**ಸಮಾರಂಭದ ಅಧ್ಯಕ್ಷತೆವಹಿಸಿದ್ದ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮಾತನಾಡಿ, ನೀಟ್, ಕೆ-ಸೆಟ್, ಜೆಇಇ ಮುಂತಾದ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಲಕ್ಷಾಂತರ ರೂ ವೆಚ್ಚವಾಗುತ್ತದೆ. ಅನೇಕ ಕುಟುಂಬಗಳಿಗೆ ಈ ಮೊತ್ತವನ್ನು ಕ್ರೂಢೀಕರಿಸುವುದು ಅಸಾಧ್ಯ. ಹೀಗಾಗಿ ಪ್ರತಿಭಾವಂತ ಮಕ್ಕಳ ಕನಸು ಸಹ ಕಮರಿ ಹೋಗುತ್ತಿದೆ. ಇಂತಹ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದಲೇ ನಗರಸಭೆ ತನ್ನ ಆಯವ್ಯಯದಲ್ಲಿ ಹಣವನ್ನು ಮೀಸಲಿಟ್ಟಿತ್ತು. ಅಕ್ಕಾ ಐಎಎಸ್ ಅಕಾಡೆಮಿ ಸಹಕಾರದಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ಕೊಡಿಸಲಾಗಿತ್ತು. ಈ ಪೈಕಿ 27 ಮಂದಿ ವಿದ್ಯಾರ್ಥಿಗಳು ವಿವಿಧ ಕೋರ್ಸುಗಳಿಗೆ ಆಯ್ಕೆಯಾಗಿದ್ದಾರೆ. ಇದು ಹೆಮ್ಮೆಯ ಮತ್ತು ಸಾರ್ಥಕ ವಿಚಾರ. ವಿದ್ಯಾರ್ಥಿಗಳು ತಮ್ಮ ಭವಿಷ್ಯದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿ ಎಂದು ಹಾರೈಸಿದರು. ಪ್ರಸಕ್ತ ಸಾಲಿಗೂ ಇದೇ ಕಾರ್ಯಕ್ರಮವನ್ನು ಮುಂದುವರೆಸಲು ವ್ಯವಸ್ಥೆಗಳನ್ನು ಮಾಡಿಕೊಂಡಿದ್ದೇವೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾರ್ಗದರ್ಶನ ಮತ್ತು ತರಬೇತಿ ನೀಡುವ ವಿಚಾರದಲ್ಲಿಯೂ ಚಿಂತನೆ ನಡೆಯುತ್ತಿದೆ. ನಗರಸಭಾ ಸದಸ್ಯರ ಸಂಪೂರ್ಣ ಸಹಕಾರ ದೊರೆಯುತ್ತಿದೆ ಎಂದರು.**

### ಹೂವಿನ ಮಳೆಗರೆದು ವಿದ್ಯಾರ್ಥಿಗಳಿಗೆ ಸ್ವಾಗತ

**ಮಂಗಳವಾರ ಸಂಜೆ ನಗರಸಭೆಯ ಆವರಣದಲ್ಲಿ ವಿಶೇಷತೆ ತುಂಬಿತ್ತು. ನಗರಸಭೆಯ ಮೂಲಕ ಉಚಿತ ತರಬೇತಿ ಪಡೆದು ಕೆ.ಸೆಟ್ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಹೀಗೆ ಅತಿ ಹೆಚ್ಚು ಅಂಕ ಪಡೆದು ವಿವಿಧ ಕೋರ್ಸುಗಳಿಗೆ ಆಯ್ಕೆಯಾದ 27 ವಿದ್ಯಾರ್ಥಿಗಳನ್ನು ನಗರಸಭಾಧ್ಯಕ್ಷರು ಮತ್ತು ಸದಸ್ಯರು ತಾವೇ ಸ್ವತಃ ಹೂವಿನ ಮಳೆಗರೆದು ವಿದ್ಯಾರ್ಥಿಗಳನ್ನು ಬರಮಾಡಿಕೊಂಡಿದ್ದು ವಿಶೇಷವಾಗಿತ್ತು. ಈ ವೇಳೆ ಜಾನಪದ ಡೊಳ್ಳು ಮೇಳ ಇಡೀ ವಾತಾವರಣವನ್ನು ಮತ್ತಷ್ಟು ಕಳೆ ತಂದುಕೊಟ್ಟಿತು.**

---

ಮೊದಲ ಪುಟದಿಂದ

### ಸ್ಥಾನ ಚರ್ಚೆ ಸತ್ಯ

ಲೋಕಾಯುಕ್ತ ಮತ್ತು ಎಸ್‌ಐಟಿಯವರು ಕ್ಲೀನ್‌ಚಿಟ್ ನೀಡಿದ ನಂತರವೇ, ಅಳೆದು-ತೂಗಿ ಪಕ್ಷದ ಹೈಕಮಾಂಡ್ ಈ ತೀರ್ಮಾನ ಕೈಗೊಂಡಿದೆ. ಅವರನ್ನು ಸಚಿವ ಸ್ಥಾನದಿಂದ ತೆಗೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು. ಬರ ಪರಿಸ್ಥಿತಿಯನ್ನು ರಾಜ್ಯ ಸರ್ಕಾರ ನಿರ್ಲಕ್ಷಿಸುತ್ತಿದೆ ಎಂಬ ಬಿಜೆಪಿಯವರ ಆರೋಪಕ್ಕೆ ಪ್ರತಿಕ್ರಿಯಿಸಿದ ಸತೀಶ, ಬರ ಪರಿಸ್ಥಿತಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಬರ ಪರಿಸ್ಥಿತಿ ಪರಿಶೀಲಿಸಲು ರಾಜ್ಯದಾದ್ಯಂತ ಸಚಿವರು ಪ್ರವಾಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

### ಕಾವೇರಿ: ಚರ್ಚಿಸಿ ನಿರ್ಧಾರ

ಮಾಡಬೇಕು. ಇವೆರಡನ್ನು ಗಮನದಲ್ಲಿಟ್ಟುಕೊಂಡು ನಮ್ಮ ನೀರಾವರಿ ಸಚಿವರು ಮಾತಾಡ್ತೀವಿ ಎಂದು ಹೇಳಿದರು. ಈಗಾಗಲೇ ಹೇಳಿದ್ದೇವೆ. ಬೆಳೆಗೂ ತೊಂದರೆ ಆಗಬಾರದು. ಕಾವೇರಿ ಮಾತ್ರವಲ್ಲ ಎಲ್ಲಾ ಡ್ಯಾಂ ನೀರು ಗಮನದಲ್ಲಿಟ್ಟುಕೊಂಡು ಬೆಳೆ ಬಗ್ಗೆ ತೀರ್ಮಾನ ಮಾಡಿ ಅಂತ ಹೇಳಿದ್ದೇನೆ ಎಂದು ತಿಳಿಸಿದರು.

### ಕರ್ನಾಟಕಕ್ಕೆ ಮತ್ತೆ ಜಲಾಘಾತ

ಮುಂದಿಟ್ಟಿದ್ದರು. ತಮಿಳುನಾಡು ರಾಜ್ಯದ ಹಿರಿಯ ಅಧಿಕಾರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದರು. ಸುಮಾರು ಒಂದೂವರೆ ಗಂಟೆಗಳ ನಡೆದ ಸಭೆಯಲ್ಲಿ ಭವಿಷ್ಯದ ಮಳೆ, ಈಗ ಜಲಾಶಯದಲ್ಲಿರುವ ನೀರಿನ ಸಂಗ್ರಹ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಈ ಶಿಫಾರಸು ಮಾಡಿದೆ. ಆನಂತರ ಈ ಕುರಿತು ಮಂಗಳವಾರ ಮಧ್ಯಾಹ್ನ ನಡೆದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿಯೂ ಸಿಡಬ್ಲೂಆರ್‌ಸಿ ಆದೇಶವನ್ನು ಪಾಲಿಸುವಂತೆ ಕರ್ನಾಟಕ ಸರ್ಕಾರಕ್ಕೆ ಸೂಚಿಸಲಾಯಿತು. ಆಗಸ್ಟ್ 10ರ ವರೆಗೆ ತಮಿಳುನಾಡು ಗಡಿಯಾದ ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ಈಗಾಗಲೇ 9 ಟಿಎಂಸಿ ನೀರು ಹರಿದು ಹೋಗಿರುವುದು ದಾಖಲಾಗಿದೆ. ಹೊಸ ಶಿಫಾರಸಿನಂತೆ ಮುಂದಿನ 15 ದಿನಗಳ ಕಾಲ ದಿನಕ್ಕೆ 12,000 ಕ್ಯೂಸೆಕ್‌ನಂತೆ ನೀರು ಹರಿಸಿದರೆ ತಮಿಳುನಾಡಿಗೆ ಹರಿಯುವ ಒಟ್ಟು ನೀರಿನ ಪ್ರಮಾಣ 16 ಟಿಎಂಸಿಗೆ ತಲುಪಲಿದೆ.

### ಮಾಜಿ ಸಚಿವರ ಗೌಪ್ಯ ಸಭೆ

ಅತಿಥಿಗೃಹಕ್ಕೆ ಧಾವಿಸಿ ಈ ಮೂವರು ಶಾಸಕರೊಂದಿಗೆ ಮಾತುಕತೆ ನಡೆಸಿದರು. ಈ ಸಂದರ್ಭ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಶಾಸಕ ತನ್ವೀರ್ ಸೇಠ್, ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇದೆ ಎಂದು ಹೇಳುವುದಿಲ್ಲ. ನಮಗೆ ಅನ್ಯಾಯವಾಗಿದೆ. ಮೂವರು ಒಟ್ಟಾಗಿದ್ದೇವೆ. ನಮಗೆ ಯಾಕೆ ಅವಕಾಶ ಕೈತಪ್ಪಿತು ಎಂಬ ಬಗ್ಗೆ ಪಕ್ಷದ ಹೈಕಮಾಂಡ್ ಜೊತೆ ಮಾತನಾಡುತ್ತೇವೆ ಎಂದು ಹೇಳಿದರು.

### ಜಿಲೆಟಿನ್ ಕಡ್ಡಿ ಸ್ಫೋಟ

ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಸ್ಥಿತಿ ಗಂಭೀರವಾಗಿದೆ. ಕಲ್ಲು ಕ್ವಾರಿಯಲ್ಲಿ ಕೆಲಸ ಮಾಡುತ್ತಿದ್ದ ಶಿವಲಾಲ್, ಅಲ್ಲಿಂದ ಜಿಲೆಟಿನ್ ಕಡ್ಡಿಗಳನ್ನು ತಂದು ಮನೆಯಲ್ಲಿ ಬಚ್ಚಿಟ್ಟಿದ್ದ ಎನ್ನಲಾಗಿದೆ. ಪತ್ನಿಯ ನಡತೆ ಶಂಕಿಸಿ ಪದೇಪದೇ ಜಗಳವಾಡುತ್ತಿದ್ದ. ಮಂಗಳವಾರ ಬೆಳಗ್ಗೆ ಕುಟುಂಬ ಸದಸ್ಯರೊಂದಿಗೆ ಶಿವಲಾಲ್ ಜಗಳವಾಡಿದ ಬಳಿಕ, ಜಿಲೆಟಿನ್ ಕಡ್ಡಿಗಳಿಗೆ ಬೆಂಕಿ ಹಚ್ಚಿ ಸ್ಫೋಟಿಸಿದ್ದಾನೆ. ಕ್ಷಣಾರ್ಧದಲ್ಲಿ ಸಂಭವಿಸಿದ ಸ್ಫೋಟದ ತೀವ್ರತೆಗೆ ಮನೆಯ ಒಂದು ಭಾಗ ಸಂಪೂರ್ಣವಾಗಿ ಹಾನಿಗೊಳಗಾಗಿದೆ. ಆಳಂದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಜಿಲೆಟಿನ್ ಕಡ್ಡಿಗಳು ಶಿವಲಾಲ್‌ಗೆ ಹೇಗೆ ಲಭ್ಯವಾದವು ಹಾಗೂ ಅವುಗಳನ್ನು ಕ್ವಾರಿಯಿಂದ ಮನೆಯಲ್ಲಿ ಬಚ್ಚಿಟ್ಟಿದ್ದರೇ ಎಂಬ ಕುರಿತು ಪೊಲೀಸರು ತನಿಖೆ ಕೈಗೊಂಡಿದ್ದಾರೆ

## ಮೀಸಲಾತಿ ದುರುಪಯೋಗ ತಪ್ಪಿಸಲು ಆರ್ಥಿಕ ಮಾನದಂಡ ಇರಲಿ

ಮೈಸೂರು: ಮೀಸಲಾತಿ ದುರುಪಯೋಗ ತಪ್ಪಿಸಲು ಆರ್ಥಿಕ ಮಾನದಂಡ ಮುಖ್ಯವಾಗಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಮತ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ತಾಲೂಕು ಘಟಕವು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ 'ಸಾರ್ವತ್ರಿಕ ಚುನಾವಣೆ ಯಲ್ಲಿ ಮಹಿಳಾ ಮೀಸಲಾತಿ' ಕುರಿತ ವಿಚಾರ ಸಂಕಿರ ಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರಪತಿ ಮಕ್ಕಳಿಗೆ, ನ್ಯಾಯಾಧೀಶರ ಮಕ್ಕಳಿಗೆ ಮೀಸಲಾತಿ ಬೇಕಾ? ಎಂದು ಪ್ರಶ್ನಿಸಿದರು. ಪ್ರಸ್ತುತ ಮೀಸಲಾತಿಯಲ್ಲಿ ಶೇ.75 ರಷ್ಟು ಆರ್ಥಿಕವಾಗಿ ಸಬಲರಾಗಿರುವವರೇ ಪಡೆಯುತ್ತಿದ್ದಾರೆ. ಇದು ತಪ್ಪಿ, ಆಯಾ ಜಾತಿಯಲ್ಲಿರುವ ಆರ್ಥಿಕವಾಗಿ ಹಿಂದುಳಿದ ವರಿಗೆ ಈ ಸೌಲಭ್ಯ ಸಿಗಬೇಕು. ಸಮಾಜದಲ್ಲಿ ತಾರತಮ್ಯ ಇರಬಾರದು. ಯಾವುದೇ ಮೀಸಲಾತಿ ಇಲ್ಲದೇ ಮಹಿಳೆಯೊಬ್ಬರು 16 ವರ್ಷ ಪ್ರಧಾನಿಯಾಗಿ ದೇಶ ವನ್ನು ಆಳಿದ್ದಾರೆ. ಆದರೂ ಮಹಿಳೆಯರಿಗೆ ಸಿಗಬೇಕಾದ ಅವಕಾಶಗಳನ್ನು ನೀಡಬೇಕು ಎಂದು ಹೇಳಿದರು.



ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಮಹಿಳೆಯರಿಗೆ ಮೀಸಲಾತಿ ನೀಡಿದರೆ ಆಡಳಿತ ದಲ್ಲಿ ಭ್ರಷ್ಟಾಚಾರ ಕಡಿಮೆಯಾಗಬಹುದು. ರಾಜಕೀಯ ಮೀಸಲಾತಿ ಇಲ್ಲದಿದ್ದರೆ ಯಾವುದೇ ಪುರುಷರು ಮಹಿಳೆಯರನ್ನು ಚುನಾವಣೆಗೆ ಸ್ಪರ್ಧಿಸಲು ಬಿಡುವುದಿಲ್ಲ. ಆದ್ದರಿಂದ ಮೀಸಲಾತಿ ಮೂಲಕವೇ ಅವರಿಗೆ ಅವಕಾಶ ನೀಡಬೇಕು ಎಂದರು. ಮಹಾರಾಣಿ ಮಹಿಳಾ ಕಲಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಕಾವ್ಯಶ್ರೀ ವಿಚಾರ ಮಂಡಿಸಿ ಮಾತನಾಡಿ, ಮಹಿಳೆಯರಿಗೆ ಅವಕಾಶಮತ್ತು ಅರ್ಹತೆ ಸಿಗಬೇಕಾದರೆ ಮೀಸಲಾತಿ ಬೇಕು ಎಂದರು.

ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶು ಪಾಲೆ ಪ್ರೊ.ಎಂ.ಎಸ್. ಅನಿತಾ ಮಾತನಾಡಿದರು. ಕಸಾಪ ಮೈಸೂರು ತಾ.ಅಧ್ಯಕ್ಷ ಎ.ಸಿ. ಮಂಜುನಾಥ್, ಜಿಲ್ಲಾ ಉಪಾಧ್ಯಕ್ಷ ಡೈರಿ ವೆಂಕಟೇಶ್ ವೇದಿಕೆಯಲ್ಲಿದ್ದರು. ಚಿನ್ಮಯಿ ಪ್ರಾರ್ಥಿಸಿದರು. ಕಸಾಪ ಜಿಲ್ಲಾ ಉಪಾಧ್ಯಕ್ಷ ಜಾಕೀರ್ ಹುಸೇನ್ ಸ್ವಾಗತಿಸಿದರು. ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಆಶಯ ಭಾಷಣ ಮಾಡಿದರು. ಜೀವಿತಾ ಕಾರ್ಯಕ್ರಮ ನಿರೂಪಿಸಿದರು. ಸಂತೋಷ್ ಹೆಗ್ಡೆ ಅವರನ್ನು ಸಾಂಸ್ಕೃತಿಕ ಸಮಿತಿ ಸಂಚಾಲಕ ಸುಂದರೇಶ್ ಪರಿಚಯಿಸಿದರು. ಜಿಲ್ಲಾ ಕಸಾಪ ಕೋಶಾಧ್ಯಕ್ಷ ಸಂಘಟನಾ ಕಾರ್ಯದರ್ಶಿಗಳಾದ ಪ್ರಶಾಂತ್ ಆರ್ಯ, ರದಿವುಲ್ಲಾ ಖಾನ್, ತಾ. ಅಧ್ಯಕ್ಷರಾದ ಸಾಲಿಗ್ರಾಮದ ಮಧುಚಂದ್ರ, ನಂಜನಗೂಡಿನ ಲತಾ ಮುದ್ದುಮೋಹನ್ ಮೊದಲಾದವರು ಪಾಲ್ಗೊಂಡಿದ್ದರು.

### ರಾಜೀನಾಮೆ ಒತ್ತಡಕ್ಕೆ

ನಾನು ಏನು ತಪ್ಪು ಮಾಡಿದ್ದೇನೆ? ಭ್ರಷ್ಟಾಚಾರ ಮಾಡಿದ್ದೇನಾ? ಅವ್ಯವಹಾರ ಮಾಡಿದ್ದೇನಾ? ನನ್ನ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಅವರ ಬಳಿ ಯಾವ ವಿಷಯವಿತ್ತು ಎಂದು ಪ್ರಶ್ನಿಸಿದರು. ತಮ್ಮ ರಾಜಕೀಯ ಭವಿಷ್ಯ ಹಾಗೂ ಕಾಂಗ್ರೆಸ್‌ನೊಂದಿಗಿನ ಸಂಬಂಧದ ಕುರಿತು ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಯಾರಿಗೂ ನನ್ನ ಮೇಲೆ ಅಪನಂಬಿಕೆ ಇಲ್ಲ. ಪಕ್ಷದ ನಾಯಕರಲ್ಲಿ ಉತ್ತಮ ಅಭಿಪ್ರಾಯವಿದೆ ಎಂದರು.

### ಬಡಿದು ಹಾಕುವೆ

ಹೆಜ್ಜೆ ಪರಿಶೀಲಿಸುತ್ತೇನೆ. ಯಾವುದೇ ಯೋಜನೆಯ ಫಲಾನುಭವಿಗಳ ಮಾಹಿತಿಯನ್ನು ಇರಿಸಿಕೊಳ್ಳಬೇಕು. ಅವರು ಅದನ್ನು ಹೇಗೆ ಬಳಸಿಕೊಳ್ಳುತ್ತಿದ್ದಾರೆ ಎಂದು ಗಮನ ನೀಡಬೇಕು ಎಂದು ಸೂಚಿಸಿದರು.

ಕೆಲವು ಅಧಿಕಾರಿಗಳು ನಕಲಿ ಬಿಲ್, ಡಬಲ್ ಬಿಲ್ ಮಾಡುತ್ತಿದ್ದಾರೆ. ನಕಲಿ ಡಬಲ್ ಬಿಲ್‌ಗಳಿಗೆ ಅವಕಾಶವೇ ಇಲ್ಲ. ದಾಖಲೆ ತಿದ್ದುವುದನ್ನು ನಿಯಂತ್ರಿಸಲು ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ. ಎಂದರು.

### ಕಬಿನಿಯಿಂದ ಹೆಚ್ಚಿನ ನೀರು

**ಬಿಡಲಾಗುತ್ತಿದೆ. ಜಲಾಶಯದಲ್ಲಿ ಸದ್ಯ ಶೇ.96ರಷ್ಟು ನೀರು ಲಭ್ಯವಿದೆ. ಜಲಾಶಯದ ನೀರಿನ ಮಟ್ಟವು 2282.76 ಅಡಿಯಷ್ಟಿದ್ದು, 19 ಟಿಎಂಸಿ ನೀರು ಸಂಗ್ರಹವಾಗಿದೆ.**

ಮೊದಲ ಪುಟದಿಂದ

### 164 ತಾಲ್ಲೂಕು ಗಳಲ್ಲಿ ಬರ

ಯುವ ನೀರಿನ ಅಭಾವ ಹೆಚ್ಚಾಗಿದೆ. ಅಲ್ಲದೆ ನೆರೆ ರಾಜ್ಯಗಳಲ್ಲೂ ಬೆಳೆ ಇಲ್ಲದ ಕಾರಣ ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕೆಎಂಎಫ್ ಮೂಲಕ ತುಮಕೂರು ಸೇರಿದಂತೆ ವಿವಿಧೆಡೆ 1 ಲಕ್ಷ ಮೇವಿನ ಕಿಟ್‌ಗಳನ್ನು ವಿತರಿಸುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಡಿಸಿಎಂ ಜಿ.ಪರಮೇಶ್ವರ್ ತಿಳಿಸಿದರು. ಗ್ರಾಮೀಣ ಭಾಗದಿಂದ ಜನರು ಗುಳೆ ಹೋಗುವುದನ್ನು ತಡೆಯಲು ಉದ್ಯೋಗ ಖಾತರಿ ಕಾಮಗಾರಿಗಳಿಗೆ ವಿಬಿ ಜಿ ರಾಮ್ ಜಿ ಯೋಜನೆಯಡಿ ಆದ್ಯತೆ ನೀಡಲಾಗುತ್ತಿದೆ. ರಾಜ್ಯದಲ್ಲಿ ಈಗಾಗಲೇ 51,000 ಮಾನವ ದಿನಗಳ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಬೆಳೆ ವಿಮೆ ನೊಂದಣಿ ಸಮಯದಲ್ಲಿ ಆಸಕ್ತಿ ತೋರುವ ಇನ್ಶೂರೆನ್ಸ್ ಕಂಪನಿಗಳು, ರೈತರಿಗೆ ನಷ್ಟ ಪರಿಹಾರ ನೀಡುವಲ್ಲಿ ವಿಳಂಬ ಮಾಡುತ್ತಿರುವ ಬಗ್ಗೆ ಶೀಘ್ರವೇ ಪ್ರತ್ಯೇಕ ಸಭೆ ನಡೆಸಲಾಗುವುದು ಎಂದರು.

### ತನ್ವೀರ್ ಸೇಠ್‌ಗೆ ಅವಕಾಶ

ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ ತಮಗೆ ಒಲಿದು ಬಂದ ಪ್ರಧಾನಿ ಹುದ್ದೆಯನ್ನೇ ಮನಮೋಹನ್ ಸಿಂಗ್ ಅವರಿಗೆ ಬಿಟ್ಟುಕೊಟ್ಟರು. ಮೈಸೂರಿನವರೇ ಆದ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನವನ್ನೇ ತ್ಯಾಗ ಮಾಡಿದ್ದಾರೆ. ಇವರೆಲ್ಲಾ ನಮಗೆ ಮಾದರಿ ಎಂದರು.

### 13ರಂದು ಬಂದ್ ಖಚಿತ: ವಾಟಾಳ್ ಖಡಕ್ ಹೇಳಿಕೆ

ಸಂಘಟನೆಗಳು ಕರೆ ನೀಡಿವೆ. ಕಾವೇರಿ ಮಾತ್ರವಲ್ಲದೆ ಮೇಕೆದಾಟು ಮತ್ತು ಮಹದಾಯಿ ವಿಚಾರಗಳಿಗೂ ನ್ಯಾಯ ಸಿಗಬೇಕು ಎಂದು ವಾಟಾಳ್ ಆಗ್ರಹಿಸಿದ್ದಾರೆ. ಆದರೆ ಬೆಂಗಳೂರು ಸೇರಿದಂತೆ ಹಲವು ಕನ್ನಡಪರ ಸಂಘಟನೆಗಳು, ಖಾಸಗಿ ಶಾಲೆಗಳು ಹಾಗೂ ವ್ಯಾಪಾರ ವಹಿವಾಟುದಾರರು ಬಂದ್‌ಗೆ ಬೆಂಬಲ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಕಾವೇರಿ ನೀರಿನ ವಿಚಾರದಲ್ಲಿ ತಮಿಳುನಾಡಿನ ನಡೆ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಕನ್ನಡಪರ ಸಂಘಟನೆಗಳು ಈ ಹಿಂದೆ ತೀವ್ರ ಹೋರಾಟ ನಡೆಸಿದ್ದವು.

### ಅಲೆಮಾರಿ ಅಭಿವೃದ್ಧಿ ಆಯೋಗ ರಚನೆ: ಡಿಕೆಶಿ

ಮಾತ್ರ ಮರ ಶಕ್ತವಾಗಿರುತ್ತದೆ ಎಂದು ಹೇಳಿದರು.

ಮತದಾರರ ವಿಶೇಷ ಪರಿಷ್ಕರಣೆ ವೇಳೆ ನಿಮ್ಮ ಹೆಸರು ಕೈಬಿಡದಂತೆ ಎಚ್ಚರ ವಹಿಸಿ. ಎಲ್ಲರಿಗೂ ಮೂಲನಿವಾಸಿ ಪತ್ರವನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪ್ರಕೃತಿಯನ್ನು ರಕ್ಷಿಸಿ. ಮೂಲ ಕಸುಬಿನಿಂದ ದೂರ ಹೋಗದಿರಿ. ಶಿಕ್ಷಿತರಾಗಿ. ಮಕ್ಕಳ ಶಿಕ್ಷಣವನ್ನು ಮೊಟಕುಗೊಳಿಸದಿರಿ ಎಂದು ಹೇಳಿದರು.

### ತ.ನಾಡಿಗೆ ಹರಿದ ನೀರು

ಮೊದಲಿನಿಂದಲೂ ತಮಿಳುನಾಡು ವಿವಾದ ಏರ್ಪಟ್ಟಾಗ ಕಬಿನಿ ಜಲಾಶಯದಿಂದಲೇ ಹೆಚ್ಚಿನ ನೀರು ಹರಿಸಲಾಗುತ್ತಿದೆ. ಕೆಲವು ವರ್ಷಗಳಲ್ಲಿ ಉತ್ತಮ ಮಳೆಯಾದಾಗ ಹೆಚ್ಚಿನ ನೀರು ಜಲಾಶಯದಿಂದ ಹರಿದು ಹೋಗಿರುವ ಉದಾಹರಣೆ ಇದೆ. ಈ ವರ್ಷ ಜುಲೈ 15ರವರೆಗೂ ಜಲಾಶಯಕ್ಕೆ ಕಡಿಮೆ ಒಳಹರಿವು ಇತ್ತು. ಆನಂತರ ಕೇರಳದಲ್ಲಿ ಮಳೆ ಹೆಚ್ಚಾಗಿ ಒಳಹರಿವು ಹೆಚ್ಚಿತ್ತು. ಈಗಲೂ ನೀರಿನ ಒಳಹರಿವು ಜಲಾಶಯಕ್ಕೆ ಉತ್ತಮವಾಗಿದೆ. ಜಲಾಶಯ ತುಂಬಿರುವ ಕಾರಣದಿಂದ ಹೆಚ್ಚುವರಿ ನೀರು ನದಿ ಮೂಲಕ ಹರಿದು ಹೋಗುತ್ತಿದೆ.

### ಮಾದರಿ ಕೆಲಸ

ತಳಮಟ್ಟದ ಜನ ರಿಗೆ ತಲುಪಬೇಕು ಎಂಬ ಉದ್ದೇ ಶದಿಂದ ಜಾರಿಗೊಳಿಸಲಾಗಿದೆ ಎಂದು ಪ್ರತಿಪಾದಿಸಿದರು. ಗ್ರಾಮೀಣ ಭಾಗದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಭಾವೈಕ್ಯತೆಯನ್ನು ಮೂಡಿಸಲು ಪ್ರತಿಯೊಂದು ಪಂಚಾಯಿತಿ ಯಲ್ಲಿ 'ಭಾರತ್ ಜೋಡೋ' ಸಂಘಗಳನ್ನು ರಚಿಸಿ, ಪ್ರತಿ ಸಂಘಕ್ಕೆ ವರ್ಷಕ್ಕೆ 10 ಲಕ್ಷ ಅನುದಾನ ನೀಡುವ ವಿನೂ ತನ ಯೋಜ ನೆಗೆ ಚಾಲನೆ ನೀಡಲಾಗು ತ್ತಿದೆ ಎಂದರು.

---

.ರೈತರ ಸಮಸ್ಯೆಗಳಿಗಾಗಿ ಹೋರಾಟ ನಡೆಸುತ್ತಿರುವ ಸಂಘದ ಮುಖಂಡರನ್ನು ರಾಜಕೀಯ ಪಕ್ಷದ ಏಜೆಂಟ್‌ಗಳೆಂದು ಕರೆಯುವುದು ಸರಿಯಲ್ಲ

## ರೈತರ ಬಗ್ಗೆ ಶಾಸಕರು ಗೌರವದಿಂದ ಮಾತನಾಡಲಿ: ಶಣ್ಮುಗ ಸ್ವಾಮಿ

ಗುಂಡ್ಲುಪೇಟೆ: ರೈತರನ್ನು ಹಾಗೂ ರೈತ ಸಂಘದ ಮುಖಂಡರನ್ನು ಅವಹೇಳನ ಮಾಡುವ ರೀತಿಯಲ್ಲಿ ಮಾತನಾಡಿರುವ ಶಾಸಕ ಎಚ್.ಎಂ. ಗಣೇಶಪ್ರಸಾದ್ ಅವರು ತಮ್ಮ ಹೇಳಿಕೆಯನ್ನು ಹಿಂಪಡೆದು ಕ್ಷಮೆಯಾಚಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಅಧ್ಯಕ್ಷ ಶಣ್ಮುಗಸ್ವಾಮಿ ಆಗ್ರಹಿಸಿದರು.

ಪಟ್ಟಣದ ಹೊಸ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರೈತರ ಬಗ್ಗೆ ಗೌರವದಿಂದ ಮಾತನಾಡಬೇಕು. ರೈತರ ಸಮಸ್ಯೆಗಳಿಗಾಗಿ ಹೋರಾಟ ನಡೆಸುತ್ತಿರುವ ಸಂಘದ ಮುಖಂಡರನ್ನು ರಾಜಕೀಯ ಪಕ್ಷದ ಏಜೆಂಟ್‌ಗಳೆಂದು ಕರೆಯುವುದು ಸರಿಯಲ್ಲ. ರೈತ ಸಂಘವು ರೈತರ ಹಕ್ಕುಗಳು ಹಾಗೂ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ನಡೆಸುತ್ತಿದ್ದು, ಯಾವುದೇ ರಾಜಕೀಯ ಪಕ್ಷದ ಪರವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಶಾಸಕ ಎಚ್.ಎಂ. ಗಣೇಶಪ್ರಸಾದ್ ಅವರು ರೈತ ಸಂಘದ ಮುಖಂಡರ ಕುರಿತು ನೀಡಿರುವ ಹೇಳಿಕೆ ರೈತರ ಭಾವನೆಗಳಿಗೆ ಧಕ್ಕೆ ತಂದಿದೆ. ಆದ್ದರಿಂದ ಕೂಡಲೇ ರೈತರ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಸಂಘದ ವತಿಯಿಂದ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.



#### ಆಗಸ್ಟ್ 15ರಂದು ಧ್ವಜಾರೋಹಣಕ್ಕೆ ಅವಕಾಶ ನೀಡುವುದಿಲ್ಲ

ರೈತರ ಬಗ್ಗೆ ನೀಡಿರುವ ಹೇಳಿಕೆಗೆ ಸಂಬಂಧಿಸಿದವರು ಕ್ಷಮೆಯಾಚಿಸದಿದ್ದರೆ ಆಗಸ್ಟ್ 15ರಂದು ನಡೆಯುವ ಧ್ವಜಾರೋಹಣ ಕಾರ್ಯಕ್ರಮಕ್ಕೆ ಅವಕಾಶ ನೀಡುವುದಿಲ್ಲ ಎಂದು ಶಣ್ಮುಗಸ್ವಾಮಿ ಎಚ್ಚರಿಕೆ ನೀಡಿದರು.

#### ಗ್ರಾಮಗಳ ಮೂಲಭೂತ ಸಮಸ್ಯೆ ಆಲಿಸಿ: ಬರಗಿ ಮಹೇಶ್

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡ ಬರಗಿ ಮಹೇಶ್ ಮಾತನಾಡಿ, ಶಾಸಕ ಎಚ್.ಎಂ. ಗಣೇಶಪ್ರಸಾದ್ ಅವರು 'ನಾನು ಇಲ್ಲಿ ರಸ್ತೆ ಅಭಿವೃದ್ಧಿ ಮಾಡಿದ್ದೇನೆ, ಅಲ್ಲಿ ಅಭಿವೃದ್ಧಿ ಮಾಡಿದ್ದೇನೆ' ಎಂದು ಹೇಳಿಕೊಳ್ಳುತ್ತಾರೆ. ಆದರೆ ತಾಲೂಕಿನ ಗ್ರಾಮೀಣ ಪ್ರದೇಶಗಳ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿದರೆ ಹಲವು ಗ್ರಾಮಗಳಲ್ಲಿ ಇಂದಿಗೂ ಮೂಲಭೂತ ಸೌಕರ್ಯಗಳ ಕೊರತೆ ಇದೆ ಎಂದು ಹೇಳಿದರು. ಕೆಲವು ಹಳ್ಳಿಗಳಿಗೆ ಸರಿಯಾದ ರಸ್ತೆ ಸೌಲಭ್ಯವಿಲ್ಲ. ಇನ್ನೂ ಕೆಲವರಿಗೆ ರೇಷನ್ ಕಾರ್ಡ್ ಸಿಗದೆ ಸಮಸ್ಯೆಯಾಗಿದೆ. ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿಗೂ ತೊಂದರೆ ಇದೆ. ಹಳ್ಳಿಗಳಲ್ಲಿನ ಇಂತಹ ಸಮಸ್ಯೆಗಳ ಬಗ್ಗೆ ಶಾಸಕರು ಏಕೆ ಗಮನಹರಿಸುತ್ತಿಲ್ಲ ಎಂದು ಪ್ರಶ್ನಿಸಿದರು.

ತಾಲೂಕಿನ ಎಲ್ಲ ರೈತರನ್ನು ಕರೆಸಿ ಸಭೆ ನಡೆಸಿ ಅವರ ಸಮಸ್ಯೆಗಳನ್ನು ಆಲಿಸಿದ್ದರೆ, ರೈತರು ಎದುರಿಸುತ್ತಿರುವ ನೈಜ ಸಮಸ್ಯೆಗಳು ತಿಳಿಯುತ್ತಿದ್ದವು. ಯಾರು ರೈತರ ಪರವಾಗಿ ಹೋರಾಟ ಮಾಡುತ್ತಿದ್ದಾರೆ, ಯಾರು ಹೋರಾಟ ಮಾಡುತ್ತಿಲ್ಲ ಎಂಬುದೂ ಆಗ ಸ್ಪಷ್ಟವಾಗುತ್ತಿತ್ತು. ಆದರೆ ರೈತರೊಂದಿಗೆ ಸಭೆ ನಡೆಸದೆ, ವೈಯಕ್ತಿಕ ಪ್ರತಿಷ್ಠೆಗಾಗಿ ರೈತರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರ ಸಮಸ್ಯೆಗಳಿಗಾಗಿ ಹೋರಾಟ ನಡೆಸುತ್ತಿರುವವರನ್ನು 'ಬಿಜೆಪಿ ಏಜೆಂಟ್‌ಗಳು' ಎಂದು ಕರೆಯುವುದು ಸರಿಯಲ್ಲ. ರೈತರ ಬಗ್ಗೆ ಗೌರವದಿಂದ ಮಾತನಾಡಬೇಕು. ಜನಪ್ರತಿನಿಧಿಯಾಗಿ ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಪರಿಹಾರ ಕಲ್ಪಿಸುವ ಕೆಲಸ ಮಾಡಬೇಕು ಎಂದು ಬರಗಿ ಮಹೇಶ್ ಒತ್ತಾಯಿಸಿದರು. ರಾಜು ಭೀಮನಭೀಡು, ಪಾಪಣ್ಣ, ಮಹದೇವಪ್ರಸಾದ್, ವಿನೋದ್, ಹರೀಶ್, ಸ್ವಾಮಿ, ಪ್ರವೀಣ್, ಸಿದ್ದಪ್ಪ, ಮಾದಪ್ಪ, ಸೋಮೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಕಲೆ-ಕ್ರೀಡೆಯೊಂದಿಗೆ ವ್ಯಕ್ತಿತ್ವ ವಿಕಸನ ಅಗತ್ಯ: ಜಿ.ಮಲ್ಲೇಶ್

### ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಲಿ



**ಗುಂಡ್ಲುಪೇಟೆ:** ವಿದ್ಯಾರ್ಥಿಗಳು ಪಠ್ಯಾಭ್ಯಾಸಕ್ಕೆ ಸೀಮಿತರಾಗದೆ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಕ್ರೀಡಾ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡು ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು ಎಂದು ಚಾಮರಾಜನಗರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಜಿ.ಮಲ್ಲೇಶ್ ಹೇಳಿದರು.

ಪಟ್ಟಣದ ಜೆಎಸ್ಎಸ್ ಅನುಭವ ಮಂಟಪದಲ್ಲಿ ಜೆಎಸ್ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನ ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಚಾಮರಾಜನಗರ ಜಿಲ್ಲೆ ಜನಪದ ಕಲೆ ಮತ್ತು ಸಂಸ್ಕೃತಿಯ ತವರೂರಾಗಿದೆ. ಮಲೆಮಹದೇಶ್ವರ, ಸಿದ್ದಪ್ಪಾಜಿ, ಮಂಟೇಸ್ವಾಮಿ ಸೇರಿದಂತೆ ಅನೇಕ ಮಹನೀಯರ ಪರಂಪರೆ ಹೊಂದಿರುವ ಜಿಲ್ಲೆಯಲ್ಲಿ ವರನಟ ಡಾ.ರಾಜ್‌ಕುಮಾರ್ ಹಾಗೂ 'ರತ್ನನ ಪದಗಳು' ಖ್ಯಾತಿಯ ಜಿ.ಪಿ.ರಾಜರತ್ನಂ ಅವರಂತಹ ಸಾಧಕರು ಹುಟ್ಟಿದ್ದಾರೆ. ವಿದ್ಯಾರ್ಥಿಗಳು ಜಿಲ್ಲೆಯ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳು ಆತ್ಮವಿಶ್ವಾಸ ಬೆಳೆಸಿಕೊಂಡು ದೈಹಿಕ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು. ಕ್ರೀಡಾ ಕ್ಷೇತ್ರದಲ್ಲಿರುವ ಅವಕಾಶಗಳನ್ನು ಬಳಸಿಕೊಂಡು ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಡಾ.ಪಿ.ಮಹದೇವಮ್ಮ ಮಾತನಾಡಿದರು. ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಂಚಾಲಕಿ ಜೀವಿತ, ದೈಹಿಕ ಶಿಕ್ಷಣ ನಿರ್ದೇಶಕ ಮಲ್ಲುಸ್ವಾಮಿ, ಕಾರ್ಯದರ್ಶಿಗಳಾದ ಮಾರಿಯಖಾನಂ, ಸಂಜನಮಲ್ಲೇಶ್, ಸಹಾಯಕ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಇದ್ದರು.

# ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಿರಿ

### ರಾಮಚಂದ್ರ ಹೇಳಿಕೆ। ತಾಲೂಕು ನಾಯಕ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ



**ಚಾಮರಾಜನಗರ:** ನಾಯಕ ಸಮುದಾಯದ ವಿದ್ಯಾರ್ಥಿಗಳು ವೈದ್ಯಕೀಯ, ತಾಂತ್ರಿಕದಂತಹ ಉನ್ನತ ಶಿಕ್ಷಣವನ್ನು ಪಡೆದು ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಕಿವಿಮಾತು ಹೇಳಿದರು.

ನಗರದ ಶ್ರೀಮಹರ್ಷಿ ವಾಲ್ಮೀಕಿ ಭವನದಲ್ಲಿ ತಾಲೂಕು ನಾಯಕ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘ, ನಾಯಕ ನೌಕರರ ಸ್ನೇಹ ಬಳಗ ಹಾಗೂ ಮಹರ್ಷಿ ಶ್ರೀ ವಾಲ್ಮೀಕಿ ನೌಕರರ ಸೌಹಾರ್ದ ಸಹಕಾರ ನಿಯಮಿತ ಸಹಯೋಗದಲ್ಲಿ ನಡೆದ ಸಂಘದ 13ನೇ ವಾರ್ಷಿಕೋತ್ಸವ, ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅವರು ಮಾತನಾಡಿದರು.

ನಾಯಕ ಜನಾಂಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ವಿಪುಲವಾದ ಅವಕಾಶಗಳಿವೆ. ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಭವಿಷ್ಯವನ್ನು ಉಜ್ವಲಗೊಳಿಸುವ ನಿಟ್ಟಿನಲ್ಲಿ ಎಲ್ಲರು ಶ್ರಮಿಸೋಣ. ಅಲ್ಲದೇ ನಾಯಕ ಸಮಾಜದ ಮಕ್ಕಳು ಎಎಲ್‌ಸಿ ಮತ್ತು ಪಿಯುಸಿಗೆ ಶಿಕ್ಷಣವನ್ನು ಮೊಟಕುಗೊಳಿಸಬಾರದು, ಉನ್ನತ ಶಿಕ್ಷಣ ಪಡೆದು ಸ್ವಾವಲಂಬನೆಯಿಂದ ಬದುಕು ಕಟ್ಟಿಕೊಳ್ಳಲು ಮುಂದಾಗಬೇಕು. ಗ್ರಾಮೀಣ ಪ್ರದೇಶದಲ್ಲಿ ಜನಾಂಗದ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ಜನಾಂಗದ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ನಾಯಕ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘವು 13 ವರ್ಷದಿಂದ ನಿರಂತರವಾಗಿ ಜನಾಂಗದ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಿ ಪ್ರೋತ್ಸಾಹ ನೀಡುತ್ತಾ ಬಂದಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಭಾರತದಲ್ಲಿ ಶಿಕ್ಷಣ ವ್ಯವಸ್ಥೆ ಶತಮಾನಗಳಿಂದಲ್ಲೂ ಕೂಡ ವಿಶ್ವಕ್ಕೂ ಮೊದಲು ಸ್ಥಾಪನೆಯಾಗಿ ನಡೆದುಕೊಂಡು ಬಂದಿದೆ. ನಮ್ಮ ಸಮಾಜದ ಮೂಲಪುರುಷ ಶ್ರೀ ಮಹರ್ಷಿ ವಾಲ್ಮೀಕಿ ಅವರು ಪುಸ್ತಕಗಳನ್ನು ಓದಿದಾಗ ಅವರು ಆಶ್ರಮ ಶಾಲೆ ತೆರೆದು ಶಿಕ್ಷಣ ಕೊಡುವ ಕೆಲಸವನ್ನು ಮಾಡಿದ್ದಾರೆ ಎಂಬುವುದನ್ನು ಕಾಣಬಹುದು ಎಂದರು.

ಕೋಚಿಂಗ್ ಸೆಂಟರ್ ತೆರೆಯಿರಿ: ಪಂಚ ಗ್ಯಾರಂಟಿ ಯೋಜನೆಗಳ ಸಮಿತಿ ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು ಮಾತನಾಡಿ, ಸಮುದಾಯ ಹಾಗೂ ನೌಕರರು ಜೊತೆಗೂಡಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಬೇಕು. ಇಂದಿನ ಸ್ಪರ್ಧಾತ್ಮಕ ಯುಗಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಪಡೆಯಬೇಕು. ಆ ನಿಟ್ಟಿನಲ್ಲಿ ನೌಕರರ ಸಂಘವು ಮುಂದಿನ ವರ್ಷಗಳಲ್ಲಿ ಕೋಚಿಂಗ್ ಸೆಂಟರ್ ಆರಂಭಿಸಿ ಸಮುದಾಯದ ವಿದ್ಯಾರ್ಥಿಗಳ ನೀಟ್, ಸಿಇಟಿ, ಜೆಇಇ, ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲ ಮಾಡಿಕೊಡಬೇಕು. ನಾನು ಕೂಡ ವೈಯಕ್ತಿಕವಾಗಿ 25 ಸಾವಿರ ಕೊಡುತ್ತೇನೆ. ಎಲ್ಲ ರೀತಿಯ ಸಹಕಾರ ನೀಡುತ್ತೇನೆ ಎಂದರು

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಎಂ.ಶಿವಕುಮಾರ್ ಮಾತನಾಡಿ, ಪ್ರತಿವರ್ಷದಂತೆ ಈ ಬಾರಿಯೂ ಸಮುದಾಯದ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಿ ಪ್ರೋತ್ಸಾಹಿಸಲಾಗುತ್ತದೆ. ನಿವೃತ್ತ ನೌಕರರನ್ನು ಸನ್ಮಾನಿಸಿ ಗೌರವಿಸಲಾಯಿತು ಎಂದರು.

ಶಿಕ್ಷಕ ಮಹೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ಶಿಕ್ಷಕ ಕೆಂಪನಪುರ ಸಿದ್ದರಾಜು ಸ್ಪರ್ಧಾತ್ಮಕ ಪರೀಕ್ಷೆ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಸುರೇಶ್, ಜಿ.ಪಂ.ಮಾಜಿ ಸದಸ್ಯರಾದ ಎಸ್.ಸೋಮನಾಯಕ, ರಮೇಶ್, ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್.ಸುಂದರ್ , ಮುಖಂಡ ಪು.ಶ್ರೀನಿವಾಸನಾಯಕ, ಮೈಸೂರು ಜಿಲ್ಲಾ ಎಸ್ ಟಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್, ಪ್ರೊ.ದೇವೇಂದ್ರ ಕುಮಾರ್, ಶಿಕ್ಷಕ ಲಿಂಗರಾಜು, ರೇವಣ್ಣ, ರಾಮಮೂರ್ತಿ, ಎಂ.ಶಿವಕುಮಾರ್, ಆರ್.ಮಹದೇಶ , ಬಿ. ಶಿವರಾಮು ಆರ್.ಚಂದ್ರು, ಜಿ. ರಾಜೇಶ್ ಹೆಚ್. ಕರಿಯಪ್ಪ , ಎಸ್.ಎಂ.ಮಹೇಶ್ , ಕೆ.ಆರ್. ನಾಗರಾಜು, ಕೃಷ್ಣನಾಯಕ, ಜಗದೀಶ್, ಜಿ. ಶಿವಕುಮಾರ್ ಮೊದಲಾದವರು ಇದ್ದರು.

## ಅಧ್ಯಕ್ಷರು ಆಡಳಿತದಲ್ಲಿ ಹಿಡಿತ ಹೊಂದಿರಲಿ

### ತಾಲೂಕಿನ ಡೇರಿ ಅಧ್ಯಕ್ಷರಿಗೆ ಆಡಳಿತ ನಿರ್ವಹಣೆ ಕುರಿತು ಕಾರ್ಯಾಗಾರ

**ಚಾಮರಾಜನಗರ:** ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿರುವ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿಯ ನಿರ್ದೇಶಕರ ಸಹಕಾರಿ ಕಾಯ್ದೆಗಳ ಬಗ್ಗೆ ಅರಿವು ಪಡೆದುಕೊಂಡು ಉತ್ತಮವಾಗಿ ಆಡಳಿತ ನಿರ್ವಹಣೆ ಮಾಡಿದರೆ ಅಭಿವೃದ್ಧಿ ಹೊಂದಲು ಸಾಧ್ಯವಿದೆ ಎಂದು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಚ್.ಎಸ್. ನಂಜುಂಡಪ್ರಸಾದ್ ತಿಳಿಸಿದರು.

ನಗರದ ಲ್ಯಾಂಪ್ ಸೊಸೈಟಿ ಸಭಾಂಗಣದಲ್ಲಿ ಸಹಕಾರ ಮಹಾ ಮಂಡಲ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಜಿಲ್ಲಾ ಹಾಲು ಒಕ್ಕೂಟದ ಸಹಯೋಗದಲ್ಲಿ ತಾಲೂಕು ಡೇರಿ ಅಧ್ಯಕ್ಷರಿಗೆ ಆಡಳಿತ ನಿರ್ವಹಣೆ ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚಾಮರಾಜನಗರ ಜಿಲ್ಲೆಯಲ್ಲಿ ಪ್ರತ್ಯೇಕ ಹಾಲು ಒಕ್ಕೂಟ ರಚನೆಯಾದ ಬಳಿಕ ಜಿಲ್ಲೆಯಿಂದಲೇ ಹೆಚ್ಚಿನ ಹಾಲು ಸಂಗ್ರಹವಾಗುತ್ತಿದೆ. ಜೊತೆಗೆ ಸಹಕಾರ ಸಂಘಗಳ ಸಂಖ್ಯೆಯು ಸಹ ಹೆಚ್ಚಳವಾಗಿದೆ. ಸಂಘದ ಆಡಳಿತ ಮಂಡಲಿ ಉತ್ತಮವಾಗಿ ನಿರ್ವಹಣೆಯಾದರೆ, ಹಾಗೂ ನೌಕರರೊಂದಿಗ ಉತ್ತಮ ಭಾಂದವ್ಯವನ್ನು ಹೊಂದಿ ಸರಿಯಾದ ರೀತಿಯಲ್ಲಿ ಹಾಲು ಶೇಖರಣೆ ಮತ್ತು ಮಾರಾಟ ಮಾಡಿದರೆ, ಮಾದರಿ ಸಹಕಾರ ಸಂಘ ಮಾಡಲು ಹೆಚ್ಚಿನ ಅವಕಾಶ ಇದೆ ಎಂದರು.

ಕಾರ್ಯಕ್ರಮದಲ್ಲಿ ಒಕ್ಕೂಟದ ಮುಖ್ಯ ಕಾರ್ಯನಿರ್ವಾವಣೆ ಅಧಿಕಾರಿ ಮನುಜ, ವ್ಯವಸ್ಥಾಪಕ ಮಲ್ಲಿಕಾರ್ಜುನಸ್ವಾಮಿ, ಚಾಮುಲ್ ವಿಸ್ತರಣಾಧಿಕಾರಿ ಭಾಗ್ಯರಾಜ್, ನಾಗೇಶ್, ಒಕ್ಕೂಟದ ಮಲ್ಲೇಶ್, ಕೆಂಡಗಣ್ಣ, ಡೇರಿ ಅಧ್ಯಕ್ಷರು, ಕಾರ್ಯನಿರ್ವಾಹಕ ಅಧಿಕಾರಿಗಳು ಹಾಜರಿದ್ದರು.



## ಆದಿವಾಸಿಗಳ ಸೇವೆಯೇ ನನಗೆ ಸಂತೃಪ್ತಿ: ನವೀನ್ ಕುಮಾರ್



**ಗುಂಡ್ಲುಪೇಟೆ:** ಅರಣ್ಯ ಮತ್ತು ಆದಿವಾಸಿಗಳ ಸೇವೆಯೇ ನನಗೆ ಸಂತೃಪ್ತಿ ನೀಡುತ್ತದೆ ಎಂದು ವನ್ಯಜೀವಿಗಳ ಪರಿಪಾಲಕ ಸಮಿತಿಯ ಮಾಜಿ ಅಧ್ಯಕ್ಷ ಎನ್.ಎಂ. ನವೀನ್ ಕುಮಾರ್ ಹೇಳಿದರು.

ಪಟ್ಟಣದ ಸಾಂಸ್ಕೃತಿಕ ಭವನದಲ್ಲಿ ತಾಲ್ಲೂಕು ಗಿರಿಜನ ಶ್ರೇಯೋಭಿವೃದ್ಧಿ ಸಂಘ, ತಾಲ್ಲೂಕು ಆದಿವಾಸಿ ಮಹಿಳಾ ಸಂಘ, ಶ್ರೀ ಸಾಯಿ ಗಿರಿಜನ ಪ್ರಗತಿ ಫೌಂಡೇಶನ್ ಹಾಗೂ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಿದ್ದ 32ನೇ ಅಂತರರಾಷ್ಟ್ರೀಯ ಆದಿವಾಸಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಬ್ರಿಟಿಷರ ವಿರುದ್ಧ ಹೋರಾಡಿ ಹುತಾತ್ಮರಾದ ಆದಿವಾಸಿ ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡಾ ಅವರ ತ್ಯಾಗದ ಇತಿಹಾಸವನ್ನು ಯುವಜನರು ತಿಳಿದುಕೊಳ್ಳಬೇಕು. ಆದಿವಾಸಿ ಸಮುದಾಯದಲ್ಲಿ ಅಪಾರ ಜ್ಞಾನ ಸಂಪತ್ತಿದ್ದು, ಪ್ರತಿಯೊಬ್ಬರ ಬದುಕಿನಲ್ಲಿ ಶಿಕ್ಷಣ ಹಾಗೂ ಹೋರಾಟದ ಮನೋಭಾವ ಅಗತ್ಯವಾಗಿದೆ. ಕಳೆದ 13 ವರ್ಷಗಳಿಂದ ಆದಿವಾಸಿಗಳೊಂದಿಗೆ ಬೆರೆತು ಸೇವೆ ಸಲ್ಲಿಸುತ್ತಿದ್ದು, ವಿದ್ಯಾರ್ಥಿಗಳು ಮತ್ತು ಯುವಜನರನ್ನು ಈ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಹೆಚ್ಚಿನ ಪ್ರಯತ್ನ ಮಾಡಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಸಾಯಿ ಗಿರಿಜನ ಪ್ರಗತಿ ಫೌಂಡೇಶನ್ ಅಧ್ಯಕ್ಷೆ ಹಾಗೂ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪುರಸ್ಕೃತೆ ಡಾ. ರತ್ನಮ್ಮ ಮಾತನಾಡಿ, ಆದಿವಾಸಿ ಸಮುದಾಯಗಳಿಗೆ ಅಂತರರಾಷ್ಟ್ರೀಯ ಆದಿವಾಸಿ ದಿನ ಸಂಭ್ರಮದ ದಿನವಾಗಿದೆ. ಆದಿವಾಸಿ ಮಹಿಳೆಯರಿಗೆ, ವಿಶೇಷವಾಗಿ ಗರ್ಭಿಣಿ ಮತ್ತು ಪ್ರಸೂತಿ ಸಂದರ್ಭಗಳಲ್ಲಿ ಸೂಕ್ತ ವೈದ್ಯಕೀಯ ಸೇವೆ ಒದಗಿಸುವುದು ಮುಖ್ಯವಾಗಿದೆ. ಬಿರ್ಸಾ ಮುಂಡಾ ಅವರ ತ್ಯಾಗದ ಇತಿಹಾಸವನ್ನು ತಿಳಿಸುವ ಉದ್ದೇಶದಿಂದ ಹಲವು ವರ್ಷಗಳಿಂದ ಅವರ ಜಯಂತಿ ಆಚರಿಸಲಾಗುತ್ತಿದೆ ಎಂದರು.

ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಹಳ್ಳಿ ಮಾತನಾಡಿ, ಆದಿವಾಸಿಗಳ ಜೀವನ ಪದ್ಧತಿಯಲ್ಲೇ ಪರಿಸರ ಹಾಗೂ ವನ್ಯಜೀವಿ ಸಂರಕ್ಷಣೆಯ ಮಹತ್ವ ಅಡಗಿದೆ. ಅರಣ್ಯ ಸಂರಕ್ಷಣೆ ಅವರ ಜೀವನದ ಅವಿಭಾಜ್ಯ ಭಾಗವಾಗಿದೆ ಎಂದರು.

ಈ ಸಂದರ್ಭದಲ್ಲಿ ಜಯ ಕರ್ನಾಟಕ ರಕ್ಷಣಾ ಸೇನೆ ಜಿಲ್ಲಾ ಮಹಿಳಾ ಅಧ್ಯಕ್ಷೆ ಪುಟ್ಟಮ್ಮ, ಜಿಲ್ಲಾ ಅಧ್ಯಕ್ಷ ಈಶ್ವರ, ಕುವೆಂಪು ಕನ್ನಡ ಸಾಹಿತ್ಯ ವೇದಿಕೆ ಅಧ್ಯಕ್ಷ ಬ್ರಹ್ಮಾನಂದ, ರೂಟ್ ಫಾರ್ ಫ್ರೀಡಂ ಸಂಸ್ಥೆಯ ಕುನ್ನಹೊಳಯಯ್ಯ, ಬೆಟ್ಟಕುರುಬ ಸಮಾಜದ ಮುಖಂಡ ಸುರೇಶ್ ಮದ್ದೂರು, ಜೇನುಕುರುಬ ಮುಖಂಡ ಪುಟ್ಟ ಮಾದಯ್ಯ, ಕಸಾಪ ಮಾಜಿ ಅಧ್ಯಕ್ಷ ಗವಿಸ್ವಾಮಿ, ಕಾವಲು ಪಡೆ ಸಾಧಿಕ್ ಪಾಷಾ, ಕಲಾವಿದ ಕೆಬ್ಬೆಪುರ ಸಿದ್ದರಾಜ್, ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆಯ ರಂಗಪ್ಪ ನಾಯಕ, ಪ್ರೇಮ, ಜಯಮ್ಮ, ಮದ್ದಯ್ಯನಹುಂಡಿ ನಾಗರಾಜ್, ಶಿವು, ಯೋಗೇಶ್ ಚಿಕ್ಕತುಪ್ಪೂರು ಉಪಸ್ಥಿತರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಸಹಕಾರ ಸಂಘಗಳು ರೈತಾಪಿವರ್ಗಕ್ಕೆ ವರದಾನ



**ಚಾಮರಾಜನಗರ:** ಸಹಕಾರ ಸಂಘಗಳು ರೈತರಿಗೆ ಸಾಲಸೌಲಭ್ಯ ಮಂಜೂರು ಮಾಡುವ ಮೂಲಕ ಅವರು ಆರ್ಥಿಕವಾಗಿ ಮುಂದುವರೆಯಲು ಪ್ರೋತ್ಸಾಹ ನೀಡುತ್ತಿವೆ ಎಂದು ಚಾಮರಾಜನಗರ ಶಾಸಕರು, ಜಿಲ್ಲಾ ಪ್ರಕೃತಿವಿಕೋಪ ನಿರ್ವಹಣಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯಪಟ್ಟರು.

**▸▸ ಬಿಸಲವಾಡಿ ಗ್ರಾಮದ ಪಿಎಸಿಸಿಯಲ್ಲಿ ಕೆಸಿಸಿ ಸಾಲ ಯೋಜನೆಯಡಿ 52 ರೈತರಿಗೆ 68.90 ಲಕ್ಷ ರೂ.ಗಳ ಚೆಕ್ ವಿತರಣೆ**

ತಾಲ್ಲೂಕಿನ ಬಿಸಲವಾಡಿ ಗ್ರಾಮದ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಕೆಸಿಸಿ ಸಾಲಯೋಜನೆಯಡಿ 52 ರೈತರಿಗೆ 68.90 ಲಕ್ಷ ರೂ.ಗಳ ಚೆಕ್ ವಿತರಿಸಿ ಮಾತನಾಡಿದರು.

ಸಹಕಾರ ಸಂಘಗಳಿಂದ ಸಾಲ ಪಡೆದವರು ಸಕಾಲಕ್ಕೆ ಮರುಪಾವತಿಸಿದಾಗ ಸಂಘಗಳು ಅಭಿವೃದ್ಧಿಯತ್ತ ಸಾಗಲಿವೆ. ತಾವು ಸಿಎಂ ಆದೇಶದ ಮೇರೆಗೆ ಜಿಲ್ಲೆಯಲ್ಲಿ ಬರ ಅಧ್ಯಯನ ಪ್ರವಾಸಮಾಡುತ್ತಿದ್ದು, ಗುಂಡ್ಲುಪೇಟೆ, ಹನೂರು ಭಾಗದಲ್ಲಿ ಮಳೆಯಿಲ್ಲದೇ, ಬೆಳೆಗಳು ಹಾನಿಯಾಗಿದ್ದು, ಕೆಲವೆಡೆ ಕುಡಿಯುವ ನೀರಿಗೂ ಸಮಸ್ಯೆಯಾಗಿದ್ದು, ಟ್ಯಾಂಕರ್‌ನಿಂದ ನೀರು ಪೂರೈಸಲಾಗುತ್ತಿದೆ. ಬೆಳೆಹಾನಿಗೊಳಗಾದ ರೈತರು ತಕ್ಷಣವೇ ಬೆಳೆವಿಮೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು ಎಂದರು.

ಕ್ಷೇತ್ರದ ಶಾಸಕರಾಗಿ ನಾಲ್ಕನೇ ಬಾರಿ ಆಯ್ಕೆಯಾಗಿದ್ದು, ಗ್ರಾಮಕ್ಕೆ ಮೂಲಭೂತಸೌಕರ್ಯ ಒದಗಿಸುವ ಕಾರ್ಯ ಮಾಡಿದ್ದೇನೆ. ಈ ಬಾರಿ ಸಂಪುಟದರ್ಜೆ ಸಚಿವರಾಗಿದ್ದು, ಮುಂದಿನದಿನಗಳಲ್ಲೂ ಸರ್ಕಾರದಿಂದ ಅಗತ್ಯ ಅನುದಾನ ಮಂಜೂರು ಮಾಡಿಸುವ ಮೂಲಕ ಅಭಿವೃದ್ದಿಗೆ ಆದ್ಯತೆ ನೀಡುವುದಾಗಿ ತಿಳಿಸಿದರು.

ಮುಖಂಡ ಬಿ.ಕೆ.ರವಿಕುಮಾರ್ ಮಾತನಾಡಿ, ಪುಟ್ಟರಂಗಶೆಟ್ಟಿ ಅವರು 4ಬಾರಿ ಶಾಸಕರಾಗಿ, 2ನೇ ಬಾರಿಗೆ ಸಚಿವರಾಗಿದ್ದಾರೆ. ಈ ಭಾಗದಲ್ಲಿ ಶೇ70 ರಷ್ಟು ಅಭಿವೃದ್ದಿ ಕಾರ್ಯಗಳಿಗೆ ಒತ್ತು ನೀಡಿದ್ದಾರೆ. ಎಂಡಿಸಿಸಿ ಬ್ಯಾಂಕಿನಿಂದ ಗ್ರಾಮದ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಕ್ಕೆ 1ಕೋಟಿ ರೂ.ಗಳವರೆಗೆ ಸಾಲಮಂಜೂರು ಮಾಡಿಸಿಕೊಡುವಂತೆ ಸಚಿವರಲ್ಲಿ ಮನವಿ ಮಾಡಿದರು.

ಪಿಎಸಿಸಿ ಅಧ್ಯಕ್ಷ ಸಿ.ಬಸವಣ್ಣ, ಉಪಾಧ್ಯಕ್ಷ ಸಿದ್ದಶೆಟ್ಟಿ, ನಿರ್ದೇಶಕರಾದ ಮಂಜುನಾಥ್, ಶಿವಕುಮಾರ್. ಕುಮಾರ್, ಬಿ.ನಂಜಪ್ಪ, ಬಸವನಾಯಕ, ಪದ್ಮಾವತಿ, ನೀಲಮ್ಮ, ನಾಗರಾಜಪ್ಪ, ಉಮೇಶ್, ಮುಖಂಡರಾದ ಎ.ಎಸ್.ಗುರುಸ್ವಾಮಿ, ಪಿಎಡಿ ಬ್ಯಾಂಕ್ ನಿರ್ದೇಶಕ ರವಿ, ಗ್ರಾಪಂ ಮಾಜಿ ಅಧ್ಯಕ್ಷ ಸಿ.ಮಹದೇವಪ್ಪ, ಪಾಧರ್ ಜೋಸಪ್ಪ, ಎಸ್.ಉಮೇಶ್, ಚನ್ನಬಸಪ್ಪ, ನಾರಾಯಣನಾಯಕ, ಸಿದ್ದನಾಯಕ ಹಾಜರಿದ್ದರು.

## ಶಾಲಾ ಸಂಸತ್ತಿನಿಂದ ನಾಯಕತ್ವ ಗುಣ

### ಪ್ರಜಾಸತ್ತಾತ್ಮಕ ಮೌಲ್ಯಗಳ ಅರಿವು ಮೂಡಿಸುವುದು ಅಗತ್ಯ: ನಾಗರಾಜು ಶರ್ಮ

### ಬೇಗೂರಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಶಾಲಾ ಸದನಗಳ ಉದ್ಘಾಟನೆ

**ಗುಂಡ್ಲುಪೇಟೆ:** ವಿದ್ಯಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬೆಳೆಸುವ ಹಾಗೂ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅವರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಶಾಲಾ ಸಂಸತ್ತು ಮಹತ್ವದ ಪಾತ್ರ ವಹಿಸುತ್ತದೆ ಎಂದು ಕಬ್ಬಳ್ಳಿ ಬಾಲಕಿಯರ ಪ್ರೌಢಶಾಲೆಯ ಮುಖ್ಯ ಶಿಕ್ಷಕ ನಾಗರಾಜು ಶರ್ಮ ಅಭಿಪ್ರಾಯಪಟ್ಟರು.



ಬೇಗೂರಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಆಯೋಜಿಸಿದ್ದ ಶಾಲಾ ಸಂಸತ್ತು, ವಿವಿಧ ಶಾಲಾ ಸದನಗಳ ಉದ್ಘಾಟನೆ ಹಾಗೂ ನೂತನ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಾಲಾ ಸಂಸತ್ತಿನ ಮೂಲಕ ಮಕ್ಕಳಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಗ್ಗೆ ಪ್ರಾಯೋಗಿಕ ಅರಿವು ಮೂಡಿಸುವುದರ ಜತೆಗೆ ನಾಯಕತ್ವದ ಗುಣಗಳನ್ನು ಬೆಳೆಸಲು ಸಾಧ್ಯವಾಗುತ್ತದೆ. ನಾಯಕತ್ವ ಎಂದರೆ ಅಧಿಕಾರವಲ್ಲ, ಅದು ಜವಾಬ್ದಾರಿಯಿಂದ ನಿರ್ವಹಿಸಬೇಕಾದ ಸೇವೆಯಾಗಿದೆ. ಉತ್ತಮ ಬದಲಾವಣೆ ಹಾಗೂ ಸೂಕ್ತ ಯೋಜನೆಗಳೊಂದಿಗೆ ಕಾರ್ಯೋನ್ಮುಖರಾದಾಗ ಮಾತ್ರ ನಾಯಕತ್ವದ ಸ್ಥಾನಕ್ಕೆ ನಿಜವಾದ ಮೌಲ್ಯ ಬರುತ್ತದೆ ಎಂದು ಹೇಳಿದರು.

ಶಾಲೆಯು ಕೇವಲ ಅಂಕಗಳಿಕೆಗೆ ಮಾತ್ರ ಆದ್ಯತೆ ನೀಡದೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ, ನಾಯಕತ್ವ ಗುಣ ಹಾಗೂ ಪ್ರತಿಭಾ ಅನಾವರಣಕ್ಕೂ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳು ತಮಗೆ ದೊರೆಯುವ ಇಂತಹ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ತಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಬೇಕು.

ನಿಲಯಪಾಲಕ ಮಂಜುನಾಥ್ ಎಚ್.ಎನ್., ಶಾಲೆಯ ಶಿಕ್ಷಕರು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

## ಕಟ್ಟಡ ನಿರ್ಮಾಣಕ್ಕೆ ಕೃಷ್ಣಮೂರ್ತಿ ಭೂಮಿಪೂಜೆ



**ಕೊಳ್ಳೇಗಾಲ:** ಪಟ್ಟಣದ ನ್ಯಾಷನಲ್ ಸ್ಕೂಲ್ ಮೈದಾನದಲ್ಲಿ 75 ಲಕ್ಷದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಇಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಭೂಮಿ ಪೂಜೆ ನಡೆಸಿದರು.

ನಂತರ ಮುಖ್ಯಮಂತ್ರಿ ಅನುದಾನದಲ್ಲಿ 75 ಲಕ್ಷ ವೆಚ್ಚದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಮುಂದಿನ ವರ್ಷ ಮಾರ್ಚ್ ತಿಂಗಳೊಳಗೆ ಪೂರ್ಣಗೊಳ್ಳಲಿದೆ ಎಂದು ಗುಣಮಟ್ಟದಿಂದ ಕಾಮಗಾರಿ ನಡೆಸುವಂತೆ ಸಲಹೆ ನೀಡಿದರು.

ಈ ಸಂಧರ್ಭದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು ರಾಜೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಕಾರ್ಯದರ್ಶಿ ಬಸ್ತೀಪುರ ರವಿ, ನಗರಸಭೆ ಮಾಜಿ ಅಧ್ಯಕ್ಷ ರಮೇಶ್, ಮಾಜಿ ಸದಸ್ಯರು, ಯುವ ಕಾಂಗ್ರೆಸ್ ಮುಖಂಡ ಚೇತನ್ ದೊರೆ,ತಾ.ಪಂ ಇಒ ಕುಮಾರ್, ಬಿಇಒ ಮಂಜುಳಾ, ಬಿ.ಆರ್.ಸಿ ಮಹದೇವ ಕುಮಾರ್, ನ್ಯಾಷನಲ್ ಶಾಲೆಯ ಮುಖ್ಯಶಿಕ್ಷಕಿ ಸುನೀತಾ, ಶಿಕ್ಷಕ ಶ್ರೀಧರ್, ಜಿ.ಪಂ ಇಂಜಿನಿಯರ್ ಮಂಜು, ಗುತ್ತಿಗೆದಾರ ಕೃಷ್ಣ ಹಾಗೂ ಇತರರು ಇದ್ದರು.

## ಚಾಮರಾಜನಗರ ಆರ್‌ಟಿಓ ಕಚೇರಿಯಲ್ಲಿ ಸ್ವಯಂಚಾಲಿತ ಪರೀಕ್ಷಾ ಪಥ ನಿರ್ಮಾಣಕ್ಕೆ ಸಚಿವರಿಂದ ಭೂಮಿಪೂಜೆ



**ಚಾಮರಾಜನಗರ:** ನಗರದ ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಓ) ಆವರಣದಲ್ಲಿ 5.30 ಕೋಟಿ ವೆಚ್ಚದಲ್ಲಿ ದ್ವಿಚಕ್ರ ಹಾಗೂ ನಾಲ್ಕು ಚಕ್ರ ವಾಹನಗಳ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ಭೂಮಿಪೂಜೆ ನೆರವೇರಿಸಿದರು.

ಸ್ವಯಂಚಾಲಿತ ಪರೀಕ್ಷಾ ಪಥ ನಿರ್ಮಾಣದಿಂದ ವಾಹನ ಚಾಲನಾ ಪರವಾನಗಿ ಪಡೆಯುವ ಸಂದರ್ಭದಲ್ಲಿ ಚಾಲನಾ ಸಾಮರ್ಥ್ಯವನ್ನು ವೈಜ್ಞಾನಿಕ ಹಾಗೂ ಪಾರದರ್ಶಕವಾಗಿ ಪರೀಕ್ಷಿಸಲು ಅನುಕೂಲವಾಗಲಿದೆ ಎಂದರು.ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಚುಡಾ ಸದಸ್ಯ ಪುಟ್ಟಸ್ವಾಮಿ, ಗ್ಯಾರಂಟಿ ಅನುಷಾನ ಸಮಿತಿ ಸದಸ್ಯ ಕುಮಾರ್, ಚೂಡಾ ಮಾಜಿ ಅಧ್ಯಕ್ಷ ಸುಹೇಅಲೀಖಾನ್, ಗುರುಪ್ರಸಾದ್, ರಾಮೇಗೌಡ, ಮಹೇಶ್, ಗ್ರಾ.ಪಂ ಮಾಜಿ ಅಧ್ಯಕ್ಷ ರೂಪೇಶ್ ಕೆಲ್ಲಂಬಳ್ಳಿ ಸೋಮಶೇಖರ್, ನಾಗಯ್ಯ ಮಹೇಶ್, ತಹಶೀಲ್ದಾರ್ ಗಿರಿಜಾ, ಆಟಿಓ ಅಧಿಕಾರಿ ಗಾಯತ್ರಿ, ಇಂಜಿನಿಯರ್ ಮಹೇಶ್, ರಾಜಶೇಖಮೂರ್ತಿ, ಕುಮಾರ್ ಶೆಟ್ಟಿ, ಉಪಸ್ಥಿತರಿದ್ದರು.

### ಚಾ.ನಗರದಲ್ಲಿ ಬುದ್ಧ ಪ್ರಜ್ಞೆ, ಮಕ್ಕಳ ಮೈತ್ರಿ ಕಾರ್ಯಕ್ರಮ

## ಎಲ್ಲಾ ಸಮಸ್ಯೆಗಳಿಗೂ ಬೌದ್ಧ ಧರ್ಮ ಔಷಧ: ಶಾಸಕ: ಕೃಷ್ಣಮೂರ್ತಿ



**ಚಾಮರಾಜನಗರ:** ಪ್ರಸ್ತುತ ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧ ಹಾಗೂ ಇನ್ನಿತರೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಬೌದ್ಧ ಧರ್ಮ ಅನಿವಾರ್ಯ ಮತ್ತು ಔಷಧವಾಗಿದೆ ಎಂದು ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಭಾರತೀಯ ಬೌದ್ಧ ಮಹಾಸಭಾ ಹಾಗೂ ಇನ್ನಿತರೆ ಬೌದ್ಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ನಡೆದ ಬುದ್ಧ ಪ್ರಜ್ಞೆ ಮತ್ತು ಮಕ್ಕಳ ಮೈತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬೌದ್ಧ ಧರ್ಮವು ವಿಶಾಲವಾದ ಮೈತ್ರಿ ಮತ್ತು ಜ್ಞಾನವನ್ನು ಜಗತ್ತಿನಾದ್ಯಂತ ಪ್ರಸರಿಸಿದೆ. ಬೌದ್ಧ ಚಿಂತನೆಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಪ್ರಸ್ತುತ ಅಗತ್ಯವಾಗಿದೆ. ಅದರಲ್ಲೂ ಮಕ್ಕಳಲ್ಲಿ ಬೌದ್ಧ ಚಿಂತನೆಯನ್ನು ಬಿತ್ತುವ ಇಂತಹ ಕಾರ್ಯಕ್ರಮಗಳು ಅತ್ಯಂತ ಅಗತ್ಯವಾಗಿದೆ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಮಕ್ಕಳನ್ನು ಧಮ್ಮದತ್ತಾ ಕರೆದುಕೊಂಡು ಹೋಗುತ್ತಿರುವುದು ಉತ್ತಮ ಕಾರ್ಯವಾಗಿದೆ. ಮಕ್ಕಳನ್ನು ನೋಡಿ ಹಿರಿಯರು ಕೂಡ ಬೌದ್ಧ ಧರ್ಮದತ್ತಾ ಸಾಗುತ್ತಾರೆ. ಗೌತಮ ಬುದ್ಧರ ಸಂದೇಶಗಳು ಜಗತ್ತಿಗೆ ಅನಿವಾರ್ಯ ಮತ್ತು ಔಷಧವಾಗಿದೆ. ನಾವೆಲ್ಲರೂ ಕೂಡ ಬುದ್ಧ ಧರ್ಮದತ್ತಾ ಸಾಗೋಣ ಎಂದರು.

ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಉಪಾಧ್ಯಕ್ಷ ಉಮೇಶ್ ಕುದರ್ ಮಾತನಾಡಿ, ಮಕ್ಕಳಲ್ಲಿ ಬೌದ್ಧ ಚಿಂತನೆಯನ್ನು ಬಿತ್ತುವ ಇಂತಹ ಅಪರೂಪದ ಕಾರ್ಯಕ್ರಮ ನಾಡಿನಾದ್ಯಂತ ನಡೆಯಬೇಕಿದೆ. ಜಿಲ್ಲೆಯಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನಕ್ಕೆ ಇದು ಅಡಿಪಾಯವನ್ನು ಹಾಕಿದೆ ಎಂದರು.

ಕಾರ್ಯಕ್ರಮದಲ್ಲಿ ಮನೋರಖ್ಖಿತ ಭಂತೇಜಿ, ಗೌತಮಿ ಭಂತೇಜಿ, ಸುಗತಪಾಲ ಭಂತೇಜಿ, ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ, ಎಸ್ಸಿ ಎಸ್ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರಯ್ಯ, ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾಧ್ಯಕ್ಷ ಬಸವರಾಜು, ನಿವೃತ್ತ ಪೊಲೀಸ್ ಅಧಿಕಾರಿ ಸಿದ್ದರಾಜು, ಚಿಂತಕ ನಾಗಸಿದ್ಧಾರ್ಥ ಹೊಲೆಯರ್, ಡಾ.ಜಗನ್ನಾಥ್, ಡಾ.ಶಿವಕುಮಾರ್, ಮಾಲ್ಕುಂಡ ಮಹದೇವಸ್ವಾಮಿ, ಹಾಗೂ ಇತರರು ಹಾಜರಿದ್ದರು.

**ಗಮನಸೆಳೆದ ವೇಷ ಭೂಷಣ ಸ್ಪರ್ಧೆ:** ಎರಡನೇ ದಿನದ ಬೌದ್ಧ ಪ್ರಜ್ಞೆ ಕಾರ್ಯಕ್ರಮದಲ್ಲಿ ಮಕ್ಕಳ ವೇಷಭೂಷಣ ಸ್ಪರ್ಧೆ ಅತ್ಯಂತ ಗಮನ ಸೆಳೆಯಿತು. ಮಕ್ಕಳು ಬುದ್ಧ, ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್, ನಾಲ್ವಡಿ ಕೃಷ್ಣರಾಜ ಒಡೆಯರ್, ಜ್ಯೋತಿ ಬಾ ಫುಲೆ, ಸಾವಿತ್ರಿ ಬಾ ಫುಲೆ, ರಮಾಭಾಯಿ, ದಾದಾಸಾಹೇಬ್ ಕಾನ್ಶಿರಾಂ ಹಾಗೂ ಇನ್ನಿತರೆ ವೇಷ ಭೂಷಣವನ್ನು ತೊಟ್ಟು ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿಕೊಂಡರು. ಮಕ್ಕಳು ವೇಷ ಭೂಷಣದೊಂದಿಗೆ ಮಹನೀಯರ ನುಡಿಗಳನ್ನು, ವಚನವನ್ನು ಹೇಳುವ ಮೂಲಕ ಗಮನಸೆಳೆದರು. ಬಳಿಕ ನಡೆದ ಕ್ವಿಜ್ ಕಾರ್ಯಕ್ರಮ ಅಂಬೇಡ್ಕರ್ ಚಿಂತನೆಗಳ ಮಹತ್ವವನ್ನು ಪ್ರತಿಯೊಬ್ಬರು ಅರಿತುಕೊಳ್ಳುವಂತೆ ಮಾಡಿತು.

# ಸಿದ್ದು ನೇತೃತ್ವದಲ್ಲೇ ಮತ್ತೆ ಕೈ ಅಧಿಕಾರಕ್ಕೆ

ಮೈಸೂರು: ಸಿದ್ಧರಾಮಯ್ಯ ಮಾಸ್ ಲೀಡರ್, ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದಿದ್ದರು ಅವರಿಗೆ ವಿಶ್ರಾಂತಿ ಎಂಬುದಿಲ್ಲ. ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಇರುತ್ತಾರೆ. ಅವರ ನೇತೃತ್ವದಲ್ಲೇ ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು. ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಮನಸ್ಸು ಮಾಡಬೇಕು ಎಂದು ಮಾಜಿ ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್ ಹೇಳಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಾಜಿ ಸಿಎಂ ಸಿದ್ಧರಾಮಯ್ಯ ಅವರ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ "ಸಿದ್ಧರಾಮಯ್ಯ-79 ದಿ.ಪೊಲಿಟಿಕಲ್ ಮಾರ್ಚ್9" ಕಾರ್ಯಕ್ರಮ ಉದ್ಘಾಟಿಸಿ ನಂತರ ಮಾತನಾಡಿದರು. ಸಿದ್ಧರಾಮಯ್ಯ ಅವರಿಗೆ ಸಿಎಂ ಎಂಬ ಕಿರೀಟ ಇಲ್ಲ, ಆದರೂ ಕಿರೀಟ ಇಲ್ಲದ ರಾಜ. ಯಾವ ಕಾಂಗ್ರೆಸ್ ಪಕ್ಷ ಅವರಿಗೆ ಇಷ್ಟು ವರ್ಷ ಜವಾಬ್ದಾರಿ ಕೊಟ್ಟಿತ್ತು. ಮತ್ತೆ ಅಧಿಕಾರಕ್ಕೆ ಬರಬೇಕು ಎಂದರೆ ಸಿದ್ಧರಾಮಯ್ಯ ಅವರಿಗೆ ಜವಾಬ್ದಾರಿ ಕೊಡಬೇಕು, ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಒಟ್ಟಿಗೆ ಕರೆದುಕೊಂಡು ಹೋಗಬೇಕು ಎಂದರು. ಕೃಷಿಕರು, ಕಾರ್ಮಿಕರು, ವಿದ್ಯಾರ್ಥಿಗಳು, ಶ್ರಮಿಕರು, ಅಲ್ಪ ಸಂಖ್ಯಾತರನ್ನು ಕಾಂಗ್ರೆಸ್ ಕಡೆ ಸೆಳೆಯಬೇಕು. ಆ ಶಕ್ತಿ ಸಿದ್ಧರಾಮಯ್ಯ ಅವರಿಗಿದೆ. ಈ ಬಗ್ಗೆ ಹೈಕಮಾಂಡ್ ಮನಸ್ಸು ಮಾಡಬೇಕು. ಸಿಎಂ ಶಿವಕುಮಾರ್ ರನ್ನು ಸಿದ್ಧರಾಮಯ್ಯ ರಕ್ಷಿಸಬೇಕಿದೆ. ಅವರ ಲೋಪದೋಷ ಕಂಡು ಬಂದರೆ ತಿದ್ದಬೇಕು ಎಂದು ಹೇಳಿದರು.

ಮಾಜಿ ಸಿಎಂ ಡಿ.ದೇವರಾಜ ಅರಸು ನಂತರ ಸಾಮಾಜಿಕ ನ್ಯಾಯದ ಆಲೋಚನೆ ಇಟ್ಟುಕೊಂಡಿರುವುದು ಸಿದ್ಧರಾಮಯ್ಯ. 2013 ರಿಂದ 2018ರವರೆಗೆ 5 ವರ್ಷ ಉತ್ತಮ ಆಡಳಿತ ಕೊಟ್ಟಿದ್ದಾರೆ. ಅನ್ನಭಾಗ್ಯ ದಂತ ಮಹತ್ತರ ಯೋಜನೆ ಜಾರಿಗೆ ತಂದು ಶ್ರಮಿಕ ವರ್ಗದ ಹೊಟ್ಟೆತುಂಬಿಸಿದರು. ಆದರೂ 2018 ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೋಲಾಯಿತು. ಕಾಂಗ್ರೆಸ್ ಸೋಲಿಗೆ ವಿರೋಧ ಪಕ್ಷದವರು ಕಾರಣರಲ್ಲ, ಸ್ವಪಕ್ಷದವರೇ ಕಾಂಗ್ರೆಸ್ ಪಕ್ಷದ ಸೋಲಿಗೆ ಕಾರಣರಾದರು ಎಂದು ಹೇಳಿದರು.

ಸಿದ್ಧರಾಮಯ್ಯ ಅವರನ್ನು ಸೋಲಿಸಲು ವಿರೋಧಪಕ್ಷದವರ ಕೈಯಲ್ಲಿ ಸಾಧ್ಯವಿಲ್ಲ, ಅವರನ್ನು ಸೋಲಿಸಲು ಕಾಂಗ್ರೆಸ್ ನವರೇ ಕಾರಣರಾಗಿದ್ದಾರೆ. ಸಿದ್ಧರಾಮಯ್ಯ ಅವರ ವೈಚಾರಿಕತೆಯನ್ನು ಒಪ್ಪದವರು ಜೊತೆಯಲ್ಲಿದ್ದುಕೊಂಡೆ ಅವರ ಕಾಲೆಳೆಯುವ ಕೆಲಸವನ್ನು ಮಾಡಿದರು. ಆದರೂ ಸಿದ್ಧರಾಮಯ್ಯ ಎದೆಗುಂದಲಿಲ್ಲ. ಅವರ ಮಗ ರಾಕೇಶ್ ನಿಧನರಾದ ದಿನ ಮತ್ತು 2018 ರಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರ ಮನೆಗೆ ಹೋಗಿ ಕೈಕಟ್ಟಿಕೊಂಡು ಹೋದ ದಿನ ಸಿದ್ಧರಾಮಯ್ಯ ಅವರ ಜೀವನದ ಕ್ರೂರವಾದ ದಿನಗಳು. ಈ ದಿನಗಳನ್ನು ನೆನೆಸಿಕೊಂಡು ಬಹಳ ದಿನ ನಾವುಗಳು ಕಣ್ಣೀರು ಹಾಕಿದ್ದೇವೆ.



## ಸಿದ್ಧರಾಮಯ್ಯ ಅತ್ತಿದ್ದೂ ಮೂರೇ ಬಾರಿ: ಪ್ರಭಾಕರ್

ಮೈಸೂರು: ಜನಗಳನ್ನು ಕಂಡರೆ ಅವರ ಬಳಿಗೆ ಹೋಗಿ ಮಾತನಾಡಿಸುವ ರಾಜಕಾರಣಿ ಯಾರಾದರೂ ಇದ್ದರೆ ಅದು ಸಿದ್ಧರಾಮಯ್ಯ ಮಾತ್ರ ಎಂದು ಮಾಜಿ ಸಿಎಂ ಸಿದ್ಧರಾಮಯ್ಯ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹೇಳಿದರು.

ಮಾಜಿ ಸಿಎಂ ಸಿದ್ಧರಾಮಯ್ಯ ಅವರ ಜನ್ಮದಿನಾಚರಣೆ ಅಂಗವಾಗಿ "ಸಿದ್ಧರಾಮಯ್ಯ-79 ದಿ.ಪೊಲಿಟಿಕಲ್ ಮಾರ್ಚ್" ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಸಿದ್ಧರಾಮಯ್ಯ ಶುದ್ಧಹಸ್ತ ರಾಜಕಾರಣಿ, ಮಕ್ಕಳಿಂದ ಹಿಡಿದು ಮುದುಕರ ಹೊರಗೆ ಇಷ್ಟಪಡುವ ಮಾಸ್ ಲೀಡರ್. 2013 ರಲ್ಲಿ ಮುಖ್ಯಮಂತ್ರಿಯಾದಾಗ ನಾನು ಅವರ ರಾಜಕೀಯ ಕಾರ್ಯದರ್ಶಿಯಾದೆ. ಅವರ ಜೊತೆಗಿನ 14 ವರ್ಷದ ಜೊತೆಯಾಟದ ಬಗ್ಗೆ ಪುಸ್ತಕ ಬರೆಯುತ್ತಿದ್ದೇನೆ. ಶೀಘ್ರದಲ್ಲೇ ಬಿಡುಗಡೆ ಮಾಡುತ್ತೇನೆ. ಸಿದ್ಧರಾಮಯ್ಯ ಹೃದಯ ವೈಶಾಲ್ಯತೆ ಇರುವ ರಾಜಕಾರಣಿ ಅವರಿಗೆ ಐಎಎಸ್ ಅಧಿಕಾರಿಯೂ ಒಂದೆ ಶ್ರಮಿಕ ವ್ಯಕ್ತಿಯೂ ಒಂದೆ. ಅವರು ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡುತ್ತಾರೆ ಎಂದರು. ಸಿದ್ಧರಾಮಯ್ಯ ಅವರು ಅವರ ಮಗ ರಾಕೇಶ್ ಸಿದ್ಧರಾಮಯ್ಯ ನಿಧನರಾದ ದಿನ. ಕಂಠೀರವ ಸ್ಟೇಡಿಯಂನಲ್ಲಿ 11 ಜನ ಸತ್ತಾಗ ಮತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟದಿನ ಮಾತ್ರ ಕಣ್ಣೀರು ಹಾಕಿದರು. ಎಂದು ಹೇಳಿದರು.

ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಸಚಿವ ಯು.ಟಿ.ಖಾದರ್, ಮಾಜಿ ಸಿಎಂ ಸಿದ್ಧರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಿಶ್ರಾಂತ ಕುಲಪತಿ ಪ್ರೊ.ಮಲ್ಲಿಕಾ ಘಂಟಿ ಉಪಸ್ಥಿತರಿದ್ದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಪ್ರಸ್ತಾವಿಕವಾಗಿ ಮಾತನಾಡಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶಿವಕುಮಾರ್ ನಿರೂಪಿಸಿದರು.

# ಬರ: ಸಚಿವ ಬಾಲಕೃಷ್ಣ ಪರಿಶೀಲನೆ

## ಚನ್ನಪಟ್ಟಣ, ಕನಕಪುರ, ಹಾರೋಹಳ್ಳಿ ತಾಲ್ಲೂಕುಗಳಿಗೆ ಭೇಟಿ

ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಬರ ಪರಿಸ್ಥಿತಿಯನ್ನು ವೀಕ್ಷಣೆ ಮಾಡಿ, ಅಧ್ಯಯನ ನಡೆಸಿ, ವರದಿ ನೀಡುವಂತೆ ರಾಜ್ಯದ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ, ಈ ಹಿನ್ನೆಲೆಯಲ್ಲಿ ಇಂದು ಜಿಲ್ಲೆಯ ಚನ್ನಪಟ್ಟಣ, ಹಾರೋಹಳ್ಳಿ ಹಾಗೂ ಕನಕಪುರದಲ್ಲಿ ಬರ ಪರಿಸ್ಥಿತಿ ವೀಕ್ಷಣೆ ನಡೆಸಲು ಮಾಗಡಿ ಕ್ಷೇತ್ರದ ಶಾಸಕರು, ನೂತನ ಸಚಿವರು ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ಬರ ನಿರ್ವಹಣೆಯ ಉಸ್ತುವಾರಿ ಸಚಿವ ಎಚ್.ಸಿ.ಬಾಲಕೃಷ್ಣ ಜಿಲ್ಲೆಗೆ ಭೇಟಿ ನೀಡಿದ್ದರು.

ಕೆಂಗಲ್‌ನಲ್ಲಿ ಶ್ರೀ ಆಂಜನೇಯಸ್ವಾಮಿಗೆ ಪೂಜೆ ಸಲ್ಲಿಸಿದ ನಂತರ ಸಚಿವರು ಚನ್ನಪಟ್ಟಣ ತಾಲ್ಲೂಕಿನ ಜೆ. ಬ್ಯಾಡರಹಳ್ಳಿ ಗ್ರಾಮದ ಸರ್ವೆ ನಂಬರ್ 12/1ರಲ್ಲಿ ರೈತ ಮಾಯಿಗೌಡ ಅವರ ಜಮೀನಿಗೆ ಭೇಟಿ ನೀಡಿ, ಬರ ಪರಿಸ್ಥಿತಿಯಿಂದ ಉಂಟಾಗಿರುವ ಬೆಳೆ ಹಾನಿ ಹಾಗೂ ರೈತರ ಸಮಸ್ಯೆಗಳ ಕುರಿತು ಖುದ್ದು ಪರಿಶೀಲನೆ ನಡೆಸಿದರು.

ಮುಂಗಾರು ಮಳೆಯ ಕೊರತೆಯಿಂದಾಗಿ ಇಲ್ಲಿ ಅಲಸಂದೆ, ಜೋಳ ಸೇರಿದಂತೆ ವಿವಿಧ ಬೆಳೆಗಳು ಹಾನಿಗೊಳಗಾಗಿದ್ದು, ಬೆಳೆ ಕೈಕೊಡುವ ಆತಂಕದಲ್ಲಿ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ರೈತರ ಜಮೀನಿಗೆ ಭೇಟಿ ನೀಡಿ, ಬೆಳೆಗಳ ಸ್ಥಿತಿಗತಿ ಹಾಗೂ ಮಳೆಯ ಕೊರತೆಯಿಂದ ಎದುರಾಗಿರುವ ಸಮಸ್ಯೆಗಳನ್ನು ಖುದ್ದಾಗಿ ವೀಕ್ಷಿಸಿ, ರೈತರಿಂದಲೇ ಅವರ ಸಂಕಷ್ಟಗಳು ಹಾಗೂ ಅಗತ್ಯತೆಗಳ ಕುರಿತು ಸಚಿವರು ಮಾಹಿತಿ ಪಡೆದುಕೊಂಡರು.

ಈ ಸಂದರ್ಭದಲ್ಲಿ ಶಾಸಕರಾದ ಸಿ.ಪಿ. ಯೋಗೇಶ್ವರ್, ವಿಧಾನ ಪರಿಷತ್ ಎಸ್. ರವಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ ರಾಜು, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಉಪಾಧ್ಯಕ್ಷ ಎಸ್. ಗಂಗಾಧರ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಮಂಜುನಾಥ್ ಜೆ, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ



ಅಧಿಕಾರಿ ಅನ್ಮೋಲ್ ಜೈನ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಅಂಬಿಕಾ, ಕೃಷಿ ಇಲಾಖೆ ಅಧಿಕಾರಿಗಳು, ಚನ್ನಪಟ್ಟಣ ತಹಶೀಲ್ದಾರ್ ಗಿರೀಶ್, ಚನ್ನಪಟ್ಟಣ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ, ಮುಖಂಡರು, ರೈತರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಶಾಸಕರಾದ ಎಸ್. ರವಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ ರಾಜು, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಉಪಾಧ್ಯಕ್ಷ ಎಸ್. ಗಂಗಾಧರ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಂಜುನಾಥ್, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನ್ಮೋಲ್ ಜೈನ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಅಂಬಿಕಾ, ಕೃಷಿ ಇಲಾಖೆ ಅಧಿಕಾರಿಗಳು, ಮುಖಂ ಡರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

## ಕನಕಪುರ ಹಾರೋಹಳ್ಳಿ ತಾಲ್ಲೂಕುಗಳಿಗೆ ಭೇಟಿ ಪರಿಶೀಲನೆ

ಚನ್ನಪಟ್ಟಣ ತಾಲ್ಲೂಕಿನ ನಂತರ ಕನಕಪುರ ಮತ್ತು ಹಾರೋಹಳ್ಳಿ ತಾಲ್ಲೂಕುಗಳಿಗೆ ಭೇಟಿ ನೀಡಿದ ಸಚಿವರು. ವಿವಿಧ ಗ್ರಾಮಗಳಿಗೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿದರು. ಈ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಈ ಭಾಗದಲ್ಲೂ ಮಳೆಯಾಗಿಲ್ಲದ ಕಾರಣ ಬಿತ್ತನೆಯೂ ಆಗಿಲ್ಲ. ಕೆಲವೊಂದು ಪ್ರದೇಶದಲ್ಲಿ ಮಳೆಯಾಗಿದೆ ಮತ್ತೊಂದೆಡೆ ಮಳೆಯಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರೈತರಿಗೆ ನೆರವು ನೀಡಲು ಕೃಷಿ ಇಲಾಖೆಯ ಅಧಿಕಾರಿಗಳು ರೈತರಿಗೆ ಅಲ್ಪಾವಧಿ ಬೆಳೆಗಳಾದ ರಾಗಿ ಇತ್ಯಾದಿ ಬೆಳೆಯುವಂತೆ ಸಲಹೆ ನೀಡಿದ್ದಾರೆ, ಬರದಂತಹ ಪರಿಸ್ಥಿತಿಯಲ್ಲಿ ತಾಲ್ಲೂಕಿನ ಎಲ್ಲಿಯೂ ಸಹ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು. ಕುಡಿಯುವ ನೀರು ಪೂರೈಸಲು ಅನುದಾನದ ಕೊರತೆಯಿರುವುದಿಲ್ಲ. ಹೊಸದಾಗಿ ಬೋರ್ ಹಾಕಿಸುವುದು ಅಥವಾ ಟ್ಯಾಂಕರ್‌ಗಳ ಮೂಲಕ ಪೂರೈಸುವಂತೆ ಸೂಚಿಸಲಾಗಿದೆ, ಪಶುಗಳಿಗೆ ಮೇವು ಒದಗಿಸುವ ನಿಟ್ಟಿನಲ್ಲಿ ತಾಲ್ಲೂಕಿನಲ್ಲಿ ಯಾವ ಭಾಗದಲ್ಲಿ ನೀರು ಲಭ್ಯವಿದೆಯೋ ಅಲ್ಲಿ ಪಶು ಮೇವು ಬೆಳೆಯಲು ಅನುಕೂಲವಾಗುವಂತೆ ಮಿನಿ ಕಿಟ್‌ಗಳನ್ನು ವಿತರಿಸಲಾಗುವುದು, ಇಲ್ಲಿನ ಮೇವು ಲಭ್ಯತೆ ಬಗ್ಗೆ ಅಧಿಕಾರಿಗಳೊಂದಿಗೆ ಕೂಲಂಕುಷವಾಗಿ ಚರ್ಚಿಸಲಾಗುವುದು, ನೀರು ಲಭ್ಯವಿರುವ ಪ್ರದೇಶಗಳಲ್ಲಿ ಪಶು ಮೇವುಗಳನ್ನು ಬೆಳೆದು ಬರ ಇರುವ ಸ್ಥಳಗಳಿಗೆ ವಿತರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

# ಒಂದೇ ದಿನ 225.770 ಮೆಟ್ರಿಕ್ ಟನ್ ತ್ಯಾಜ್ಯ ತೆರವು

ಮೈಸೂರು: 80ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಹಾನಗರ ಪಾಲಿಕೆಯ ವತಿಯಿಂದ ಹಮ್ಮಿಕೊಳ್ಳಲಾಗಿರುವ "ಸ್ವಾತಂತ್ರ್ಯೋತ್ಸವ ಸ್ವಚ್ಛತಾ ಅಭಿಯಾನ?2026: 80 ತ್ಯಾಜ್ಯಮುಕ್ತ ತಾಣಗಳು" ಕಾರ್ಯಕ್ರಮದಡಿ ನಗರದ ವಿವಿಧ ವಲಯಗಳಲ್ಲಿ ಮಂಗಳವಾರ ಬೃಹತ್ ಸ್ವಚ್ಛತಾ ಮತ್ತು ಪರಿವರ್ತನಾ ಕಾರ್ಯಾಚರಣೆ ಕೈಗೊಳ್ಳಲಾಗಿದ್ದು, ಒಟ್ಟು 225.770 ಮೆಟ್ರಿಕ್ ಟನ್ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತೆ ಕೆ.ಎಂ.ಸವಿತಾ ತಿಳಿಸಿದರು.


ವಲಯ?4ರ ಗೋಕುಲಂ ಸ್ಮಶಾನದ ಸಮೀಪ ಆಯೋಜಿಸಲಾಗಿದ್ದ ಮುಖ್ಯ ತ್ಯಾಜ್ಯಮುಕ್ತ ತಾಣ ಪರಿವರ್ತನಾ ಕಾರ್ಯಕ್ರಮದಲ್ಲಿ ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಹಾಗೂ ಮಹಾನಗರ ಪಾಲಿಕೆ ಆಯುಕ್ತೆ ಎಂ.ಕೆ.ಸವಿತಾ ಭಾಗವಹಿಸಿ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿದರು. ಗೋಕುಲಂ ಸ್ಮಶಾನದ ಸಮೀಪದ ಸ್ಥಳದಿಂದ ಒಟ್ಟು 149.770 ಮೆಟ್ರಿಕ್ ಟನ್ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆ. ಇದರಲ್ಲಿ ಸುಮಾರು 130 ಮೆಟ್ರಿಕ್ ಟನ್ ಕಟ್ಟಡ ಮತ್ತು ನಿರ್ಮಾಣ ಅವಶೇಷ, 19.770 ಮೆಟ್ರಿಕ್ ಟನ್ ಇತರೆ ಘನತ್ಯಾಜ್ಯ ಸೇರಿದೆ. ವಲಯ?1ರ ಬಂಡಿಕೇರಿ ಸಮೀಪ ನಡೆದ ಸ್ವಚ್ಛತಾ ಕಾರ್ಯಾಚರಣೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಭಾಗವಹಿಸಿದ್ದರು. ಸಾರ್ವಜನಿಕರು ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸಿ ಪಾಲಿಕೆಯ ಅಧಿಕೃತ ತ್ಯಾಜ್ಯ ಸಂಗ್ರಹಣಾ ವಾಹನಗಳಿಗೆ ಮಾತ್ರ ಹಸ್ತಾಂತರಿಸಬೇಕು. ಪರಿವರ್ತನೆಗೊಂಡ ಸ್ಥಳಗಳಲ್ಲಿ ಪುನಃ ಅನಧಿಕೃತವಾಗಿ ತ್ಯಾಜ್ಯ, ಕಟ್ಟಡ ಮತ್ತು ನಿರ್ಮಾಣ ಅವಶೇಷ ಅಥವಾ ಇತರೆ ಕಸ ಸುರಿಯುವವರ ವಿರುದ್ಧ ಅನ್ವಯಿಸುವ ನಿಯಮಗಳನ್ವಯ ಕಠಿಣ ಕ್ರಮ ಕೈಗೊಂಡು ದಂಡ ವಿಧಿಸಲಾಗುವುದು ಎಂದು ಆಯುಕ್ತ ಎಚ್ಚರಿಸಿದರು.



ಕರ್ನಾಟಕ ಸರ್ಕಾರ
**ಆಡಳಿತ ತರಬೇತಿ ಸಂಸ್ಥೆ**
ಲಲಿತ ಮಹಲ್ ರಸ್ತೆ, ಮೈಸೂರು-570011
ಸಂಖ್ಯೆ: No: ATI/1/EST4/2026-ADMN-ATI(2165781) ದಿನಾಂಕ: 11.08.2026
**ಟೆಂಡರ್ ಪ್ರಕಟಣೆ**
**ಆಡಳಿತ ತರಬೇತಿ ಸಂಸ್ಥೆ, ಮೈಸೂರು** ಇಲ್ಲಿಗೆ ಒಂದು ವರ್ಷದ ಅವಧಿಗೆ ಲೇಖನಾ ಸಾಮಗ್ರಿಗಳನ್ನು ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಿದ್ದು. ನೋಂದಾಯಿತ ಅರ್ಹ ಉತ್ತಮ ಸೇವೆ ಒದಗಿಸುವ ಅಸಕ್ತ ಟೆಂಡರುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ತಮ್ಮ ಬಿಡ್ಡನ್ನು ನಿಯಮಾನುಸಾರ ಆನ್-ಲೈನ್ ನಲ್ಲಿ **website:http://kppp.karnataka.gov.in** ಸಲ್ಲಿಸಬಹುದಾಗಿದೆ. ಹಾಗೂ ಸಂಸ್ಥೆಯ ವೆಬ್‌ಸೈಟ್ **https://atimysore.karnataka.gov.in,** ಅನ್ನು ಸಂಪರ್ಕಿಸಬಹುದಾಗಿದೆ.
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **27.08.2026 ಅಪರಾಹ್ನ 05.30** ಗಂಟೆಗಳಾಗಿರುತ್ತದೆ.
**ಸಹಿ/- ಜಂಟಿ ನಿರ್ದೇಶಕರು (ಆಡಳಿತ)**
ವಾಸಾಸಂಇ/ಮೈಸೂರು/569/ಎಸ್‌ಎಸ್‌ಸಿ/2026-27 **ಆಡಳಿತ ತರಬೇತಿ ಸಂಸ್ಥೆ, ಮೈಸೂರು**

# ಮೀಸಲಾತಿ ದುರುಪಯೋಗ ತಪ್ಪಿಸಲು ಆರ್ಥಿಕ ಮಾನದಂಡ ಇರಲಿ

## ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿಕೆ



ಮೈಸೂರು: ಮೀಸಲಾತಿ ದುರುಪಯೋಗ ತಪ್ಪಿಸಲು ಆರ್ಥಿಕ ಮಾನದಂಡ ಮುಖ್ಯವಾಗಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಮತ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ತಾಲೂಕು ಘಟಕವು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ 'ಸಾರ್ವತ್ರಿಕ ಚುನಾವಣೆ ಯಲ್ಲಿ ಮಹಿಳಾ ಮೀಸಲಾತಿ' ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರಪತಿ ಮಕ್ಕಳಿಗೆ, ನ್ಯಾಯಾಧೀಶರ ಮಕ್ಕಳಿಗೆ ಮೀಸಲಾತಿ ಬೇಕಾ? ಎಂದು ಪ್ರಶ್ನಿಸಿದರು. ಪ್ರಸ್ತುತ ಮೀಸಲಾತಿಯಲ್ಲಿ ಶೇ.75 ರಷ್ಟು ಆರ್ಥಿಕವಾಗಿ ಸಬಲರಾಗಿರುವವರೇ ಪಡೆಯುತ್ತಿದ್ದಾರೆ. ಇದು ತಪ್ಪಿ, ಆಯಾ ಜಾತಿಯಲ್ಲಿರುವ ಆರ್ಥಿಕವಾಗಿ ಹಿಂದುಳಿದ ವರಿಗೆ ಈ ಸೌಲಭ್ಯ ಸಿಗಬೇಕು. ಸಮಾಜದಲ್ಲಿ ತಾರತಮ್ಯ ಇರಬಾರದು. ಯಾವುದೇ ಮೀಸಲಾತಿ ಇಲ್ಲದೇ ಮಹಿಳೆಯೊಬ್ಬರು 16 ವರ್ಷ ಪ್ರಧಾನಿಯಾಗಿ ದೇಶ ವನ್ನು ಆಳಿದ್ದಾರೆ. ಆದರೂ ಮಹಿಳೆಯರಿಗೆ ಸಿಗಬೇಕಾದ ಅವಕಾಶಗಳನ್ನು ನೀಡಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಹರೀಶ್ ಗೌಡ ಮಾತ ನಾಡಿ, ಮಹಿಳೆಯರಿಗೆ ಮೀಸಲಾತಿ ನೀಡಿದರೆ ಆಡಳಿತ ದಲ್ಲಿ ಭ್ರಷ್ಟಾಚಾರ ಕಡಿಮೆಯಾಗಬಹುದು. ರಾಜಕೀಯ ಮೀಸಲಾತಿ ಇಲ್ಲದಿದ್ದರೆ ಯಾವುದೇ ಪುರುಷರು ಮಹಿಳೆಯರನ್ನು ಚುನಾವಣೆಗೆ ಸ್ಪರ್ಧಿಸಲು ಬಿಡುವುದಿಲ್ಲ. ಆದ್ದರಿಂದ ಮೀಸಲಾತಿ ಮೂಲಕವೇ ಅವರಿಗೆ ಅವಕಾಶ ನೀಡಬೇಕು ಎಂದರು. ಮಹಾರಾಣಿ ಮಹಿಳಾ ಕಲಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಕಾವ್ಯಶ್ರೀ ವಿಚಾರ ಮಂಡಿಸಿ ಮಾತನಾಡಿ, ಮಹಿಳೆಯರಿಗೆ ಅವಕಾಶ ಮತ್ತು ಅರ್ಹತೆ ಸಿಗಬೇಕಾದರೆ ಮೀಸಲಾತಿ ಬೇಕು ಎಂದರು.

ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶು ಪಾಲೆ ಪ್ರೊ.ಎಂ.ಎಸ್. ಅನಿತಾ ಮಾತನಾಡಿದರು. ಕಸಾಪ ಮೈಸೂರು ತಾ.ಅಧ್ಯಕ್ಷ ಎ.ಸಿ.ಮಂಜುನಾಥ್, ಜಿಲ್ಲಾ ಉಪಾಧ್ಯಕ್ಷ ಡೈರಿ ವೆಂಕಟೇಶ್ ವೇದಿಕೆಯಲ್ಲಿದ್ದರು. ಚಿನ್ಮಯಿ ಪ್ರಾರ್ಥಿ ಸಿದರು. ಕಸಾಪ ಜಿಲ್ಲಾ ಉಪಾಧ್ಯಕ್ಷ ಜಾಕೀರ್ ಹುಸೇನ್ ಸ್ವಾಗತಿಸಿದರು. ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಡಾ.ವೈಡಿ. ರಾಜಣ್ಣ ಆಶಯ ಭಾಷಣ ಮಾಡಿದರು. ಜೀವಿತಾ ಕಾರ್ಯಕ್ರಮ ನಿರೂಪಿಸಿದರು. ಸಂತೋಷ್ ಹೆಗ್ಡೆ ಅವರನ್ನು ಸಾಂಸ್ಕೃತಿಕ ಸಮಿತಿ ಸಂಚಾಲಕ ಸುಂದರೇಶ್ ಪರಿಚಯಿಸಿದರು. ಜಿಲ್ಲಾ ಕಸಾಪ ಕೋಶಾಧ್ಯಕ್ಷ ಸಂಘಟನಾ ಕಾರ್ಯದರ್ಶಿ ಗಳಾದ ಪ್ರಶಾಂತ್ ಆರ್ಯ, ರದಿವುಲ್ಲಾ ಖಾನ್, ತಾ. ಅಧ್ಯಕ್ಷರಾದ ಸಾಲಿಗ್ರಾಮದ ಮಧುಚಂದ್ರ, ನಂಜನಗೂಡಿನ ಲತಾ ಮುದ್ದುಮೋಹನ್ ಮೊದಲಾದವರು


# ವಿವಿಧ ಬಗೆಯ ಪುಷ್ಪಗಳಿಂದ ಮಿನುಗಿದ ಮಲೆ ಮಾದಪ್ಪ

## ಪಾಂಡಿಚೇರಿ, ತಮಿಳುನಾಡು, ಧರ್ಮಸ್ಥಳ, ತಿರುಪತಿ ಸೇರಿ 5 ಕ್ಷೇತ್ರಗಳಲ್ಲಿ ಪ್ರತಿ ವರ್ಷ ವಿಶೇಷ ದಿನಗಳಲ್ಲಿ ಪುಷ್ಪ ಸೇವೆ



ಹನೂರು: ಭೀಮನ ಅಮಾವಾಸ್ಯೆ ಪ್ರಯುಕ್ತ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟವು ವಿವಿಧ ಬಗೆಯ ಪುಷ್ಪಗಳಿಂದ ಅದ್ದೂರಿಯಾಗಿ ಕಂಗೊಳಿಸುತ್ತಿದೆ. ಈ ಅದ್ಭುತ ಅಲಂಕಾರದ ಹಿಂದೆ ಇರುವುದು ತಮಿಳುನಾಡಿನ ಹೊಸೂರು ಮೂಲದ ಭಕ್ತ ರಮೇಶ್ ಅವರ ಅಚಲ ನಂಬಿಕೆ.

ಪ್ರತಿ ವರ್ಷದಂತೆ ಈ ಬಾರಿಯೂ ಸುಮಾರು 15 ಲಕ್ಷ ರೂಪಾಯಿಗೂ ಹೆಚ್ಚು ಹಣ ಖರ್ಚು ಮಾಡಿ ರಮೇಶ್ ಅವರು ಉಚಿತವಾಗಿ ದೇವಾಲಯದ ಅಲಂಕಾರ ಮಾಡಿಸಿದ್ದಾರೆ.



ಗರ್ಭಗುಡಿ, ರಾಜಗೋಪುರ, ದೇವಾಲಯದ ಹೊರಾಂಗಣ, ರುದ್ರಾಕ್ಷಿ ಮಂಟಪ, ಮಲೆ ಮಹದೇಶ್ವರ, ಬಸವ ವಾಹನ ಹಾಗೂ ರಥೋತ್ಸವ ಮಾರ್ಗವನ್ನು 20 ಬಗೆಯ ವಿವಿಧ ಹೂವುಗಳಿಂದ ವಿಶೇಷವಾಗಿ ಅಲಂಕರಿಸಲಾಗಿದೆ.

ಅಲಂಕಾರದಲ್ಲಿ ಲಿಲಿಯಂ, ಆರ್ಕಿಡ್, ಕಾರ್ನೇಷನ್, ಜರ್ಬೆರಾ, ಡೈಸಿ ಸೇರಿದಂತೆ 5 ಬಗೆಯ ಹೂವುಗಳು ಮತ್ತು 5 ಕಲರ್ ಗುಲಾಬಿ ಸೇರಿದಂತೆ ಒಟ್ಟು 20 ಬಗೆಯ ತಾಜಾ ಹೂವುಗಳನ್ನು ಕೇರಳ ಮತ್ತು ಬೆಂಗಳೂರಿನಿಂದ ತರಿಸಿ ಬಳಸಲಾಗಿದೆ. ರಮೇಶ್ ಅವರ ಸೇವೆ ಮಲೆ ಮಹದೇಶ್ವರ ಬೆಟ್ಟಕ್ಕೆ ಮಾತ್ರ ಸೀಮಿತವಾಗಿಲ್ಲ. ಕಳೆದ 10 ವರ್ಷಗ ಳಿಂದ ಅವರು ತಮಿಳುನಾಡು, ಪಾಂಡಿಚೇರಿ, ಕರ್ನಾಟಕದ ಹಾಗೂ ಆಂಧ್ರಪ್ರದೇಶದ ತಿರುಪತಿ ತಿರುಮಲ ದೇವಸ್ಥಾನದಲ್ಲೂ ಪ್ರತಿ ವರ್ಷದ ವಿಶೇಷ ದಿನಗಳು ಮತ್ತು ಉತ್ಸವಗಳಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಹೂವಿನ ಅಲಂಕಾರ ಮಾಡಿಸುತ್ತಿದ್ದಾರೆ.

"ಮಾದಪ್ಪ, ಮಂಜುನಾಥ, ವೆಂಕಟೇಶ್ವರ ಎಲ್ಲರೂ ಒಂದೇ. ಅವರ ಅನುಗ್ರಹದಿಂದ ನಮಗೆ ಎಲ್ಲವೂ ಸಿಕ್ಕಿದೆ. ಅದಕ್ಕೆ ಕೃತಜ್ಞತೆಯಾಗಿ ಈ ಸೇವೆ" ಎಂದು ಭಾವುಕರಾಗಿ ಹೇಳಿದರು. ಬಣ್ಣ-ಬಣ್ಣದ ಪುಷ್ಪಾಲಂಕಾರವನ್ನು ಕಂಡು ಭಕ್ತರು ಬೆರಗಾದರು. "ಇಂತಹ ಸಿಂಗಾರವನ್ನು ನೋಡಲೇಬೇಕು" ಎಂದು ಭಕ್ತರು ಸಂತಸ ವ್ಯಕ್ತಪಡಿಸಿದರು. ದರ್ಶನಕ್ಕೆ ಬಂದಿದ್ದ ಭಕ್ತಾದಿಗಳು ಹೂವಿನ ಅಲಂಕಾರವನ್ನು ತಮ್ಮ ಮೊಬೈಲ್‌ಗಳಲ್ಲಿ ಚಿತ್ರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ.

ವಿಜಯ ಕರ್ನಾ ಟಕ ರಕ್ಷಣಾ ವೇದಿಕೆ ಚಾಮರಾಜನಗರ ತಾಲೂಕು ಘಟಕ ನೂತನ ಪ್ರಾರಂಭೋತ್ಸವ

# ಕನ್ನಡ ನೆಲ, ಜಲ, ಭಾಷೆ ಉಳಿಸುವಲ್ಲಿ ಸಂಘಟನೆಗಳ ಪಾತ್ರ ದೊಡ್ಡದು

ಚಾಮರಾಜನಗರ, ಕನ್ನಡ ನೆಲ, ಜಲ ಹಾಗೂ ಭಾಷೆಯ ರಕ್ಷಣೆಯಲ್ಲಿ ಕನ್ನಡಪರ ಸಂಘಟನೆಗಳ ಪಾತ್ರ ಬಹಳ ದೊಡ್ಡದಾಗಿದೆ ಎಂದು ಉದ್ಯಮಿ, ಯೂತ್ ಐಕಾನ್ ಶ್ರೀನಿಧಿಕುದರ್ ಹೇಳಿದರು.

ನಗರದ ಪ್ರವಾಸಿಮಂದಿರದಲ್ಲಿ ವಿಜಯ ಕರ್ನಾಟಕ ರಕ್ಷಣಾ ವೇದಿಕೆ ಚಾಮರಾಜನಗರ ತಾಲೂಕು ಘಟಕ ನೂತನ ಪ್ರಾರಂಭೋತ್ಸವ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಗೋಕಾಕ್ ಚಳುವಳಿಯಂತಹ ಐತಿಹಾಸಿಕ ಹೋರಾಟಗಳಿಂದ ಹಿಡಿದು ಇಂದಿನವರೆಗೂ ಕನ್ನಡದ ಅಸ್ಮಿತೆ, ನಾಡಿನ ಹಿತ ಕಾಯುವಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ ಕನ್ನಡದ ಬಳಕೆಯನ್ನ ಶಾಲೆ, ಕಚೇರಿ ಹಾಗೂ ಜನದಟ್ಟಣೆಯ ಪ್ರದೇಶಗಳಲ್ಲಿ ಕನ್ನಡ ಕಡ್ಡಾಯ ಬಳಕೆಗೆ ಒತ್ತಾಯಿಸುವುದು.ಅನ್ಯಭಾಷೆಗಳ ಹೇರಿಕೆ ವಿರುದ್ಧ ಧ್ವನಿ ಎತ್ತುವುದು ಮತ್ತು ಕರ್ನಾಟಕದ ಹಿತಾಸಕ್ತಿ ಕಾಪಾಡುವಲ್ಲಿ ಕನ್ನಡ ಪರ ಸಂಘಟನೆಗಳು ಶ್ರಮಿಸುತ್ತಿವೆ. ಅದೇ ರೀತಿಯಲ್ಲಿ ಇಂದು ಆರಂಭ



ವಾಗಿರುವ ವಿಜಯಕರ್ನಾಟಕ ರಕ್ಷಣಾ ವೇದಿಕೆ ಚಾಮರಾಜನಗರ ತಾಲೂಕು ಘಟಕ ಮಾಡಲಿ, ಈ ಸಂಘಟನೆಯು ಯಶಸ್ಸಿನತ್ತ ಸಾಗಲಿ ಎಂದರು.

ಎಸ್.ಟಿ.ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಬುಲೆಟ್ ಚಂದ್ರು ಮಾತನಾಡಿ. ಕನ್ನಡ ನೆಲ, ಜಲ, ಭಾಷೆ ಸಂರಕ್ಷಣೆಯಲ್ಲಿ ವಿಜಯಕರ್ನಾಟಕ ರಕ್ಷಣಾ ವೇದಿಕೆಯು ರಾಜ್ಯದಲ್ಲಿ ಮುಂಚೂಣಿಯಲ್ಲಿದೆ. ಅದೇ ಮಾದರಿಯಲ್ಲಿ ಜಿಲ್ಲಾ ಘಟಕ, ತಾಲೂಕು ಘಟಕಗಳು ಆಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಂ.ಬಿ.ಮಹೇಶ್ ಕುಮಾರ್ ಮಾತನಾಡಿ, ಕನ್ನಡ ನೆಲ, ಜಲ, ಗಡಿ ವಿಚಾರ ಬಂದಾಗ ಹೋರಾಟ ಮಾಡಬೇಕು. ಕನ್ನಡವನ್ನು ಉಳಿಸಿ ಬೆಳಸಬೇಕು.. ನಮ್ಮ ಸಂಘಟನೆಯು ಕನ್ನಡ ನೆಲ, ಜಲ, ಭಾಷೆ ರಕ್ಷಣೆಗೆ ಶ್ರಮಿಸುತ್ತಿದೆ. ಸಂಘಟನೆಯ ಕಾರ್ಯಕರ್ತರು ಸರ್ಕಾರ ದಿಂದ ದೊರೆಯುವ ಸವಲತ್ತುಗಳನ್ನು ಅರ್ಹರಿಗೆ ತಲುಪಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ವಕೀಲ ರಾಜೇಂದ್ರ ಮಾತನಾಡಿ, ಗಡಿಜಿಲ್ಲೆಯಲ್ಲಿ ಕನ್ನಡ ಸಂಘಟನೆಗಳ ಅವಶ್ಯಕತೆ ಇದ್ದು, ಯಾವುದೇ ವಿಚಾರ ಬಂದಾಗ ನ್ಯಾಯಯುತವಾಗಿ ಹೋರಾಟ ಮಾಡಬೇಕು. ನಿಮ್ಮ ಬೆಂಬಲವಾಗಿ ನಾವಿರುತ್ತೇವೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಶಿವಸುಂದರ್, ರಾಜ್ಯ ಉಪಾಧ್ಯಕ್ಷರಾದ ದೇವರಾಜು, ಜಿಲ್ಲಾ ಉಪಾಧ್ಯಕ್ಷ ಆನಂದ್,ಗೌರವಾಧ್ಯಕ್ಷ ಮಂಟೇಲಿಂಗಯ್ಯ, ಜಿಲ್ಲಾ ಸಂಚಾಲಕ ಮೂರ್ತಿ , ಉಪಾಧ್ಯಕ್ಷ ಅರುಣ್, ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಪೂರ್ವಿ, ಚಾಮರಾಜನಗರ ತಾಲೂಕು ಅಧ್ಯಕ್ಷ ಎಂ.ಕಿರಣ್ ರಾಜ್, ಹನೂರು ತಾಲೂಕು ಅಧ್ಯಕ್ಷ ಅಭಿಷೇಕ್, ಅರುಣ್, ಮಲ್ಲಿಕಾರ್ಜುನ, ಎಂ.ಸಿ.ಮನೋಹರ್, ಎನ್.ನವೀನ್ ಪ್ರಸಾದ್, ಪ್ರಕಾಶ್, ಸಂದೀಪ್ ಸಾಗರ್, ನವೀನ್‌ಇತರರು ಹಾಜರಿದ್ದರು.

# ಹೋಟೆಲ್ ಮಾರ್ಯದೆ ಕಳೆಯುವ ಕೆಲಸ ಬೇಡ

ಮೈಸೂರು: ಕೋಟ್ಯಾಂತರ ರೂಪಾಯಿ ತೆರಿಗೆ ಪಾವತಿಸುವ ಸ್ಟಾರ್ ಹೋಟೆಲ್ ಗಳ ಗೌರವ, ಮರ್ಯಾದೆ ಬೀದಿಪಾಲು ಮಾಡದಂತೆ ಸರಕಾರವನ್ನು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಆಗ್ರಹಿಸಿದರು.



ಬೆಂಗಳೂರಿನಲ್ಲಿ ಆಹಾರ ಅಧಿಕಾರಿಗಳು ಇತ್ತೀಚೆಗೆ ಮಾಧ್ಯಮಗಳನ್ನು ತಮ್ಮೊಟ್ಟಿಗೆ ಕರೆದೊಯ್ದು ಹೋಟೆಲ್ ಗಳ ಮೇಲೆ ದಾಳಿ ನಡೆಸಿ ಕೊಳೆತ ಆಪಾರ ಪಧಾರ್ಥಗಳು, ಎಕ್ಸ್ ಪರಿ ಆದ ಹಾಲು ಹಾಗೂ ಇತರೆ ವಸ್ತುಗಳು ದಾಳಿಯಲ್ಲಿ ಸಿಕ್ಕಿದೆ ಎಂದು ಬಿಂಬಿಸಿದ್ದಾರೆ. ಎಫ್ ಎಸ್‌ಎಸ್ ಎಐ ಕಾನೂನು ಯಾವ ಆಹಾರೋಧ್ಯಮಿಗೂ ನೂರಕ್ಕೆ ನೂರರಷ್ಟು ಪಾಲನೆ ಮಾಡಲು ಕಷ್ಟಸಾಧ್ಯವೇ ಸರಿ. ಇದರ ಬಗ್ಗೆ ಆಹಾರೋದ್ಯಮಿಗಳು ಪರಿಹಾರ ಕಂಡುಕೊಳ್ಳದಿದ್ದರೆ ಭವಿಷ್ಯದಲ್ಲಿ ನಮ್ಮ ರೆಸ್ಟೋರೆಂಟ್, ದರ್ಶಿನಿ, ಬೇಕರಿ, ಸ್ವೀಟ್ಸ್, ಕಾಂಡಿಮೆಟ್ಸ್ ಉದ್ಯಮಗಳು ಸಂಪೂರ್ಣ ಸ್ಥಗಿತಗೊಳ್ಳುವ ಕಾಲ ದೂರ ಇಲ್ಲ. ಕಠಿಣ ಕಾನೂನುಗಳನ್ನೇ ನೆಪವಾಗಿಟ್ಟುಕೊಂಡು ಉಧ್ಯಮಿಗಳನ್ನು ಬ್ಲಾಕ್ ಮೇಲ್ ಮಾಡುತ್ತಿರುವ ಇಂತಹ ಸಂಧರ್ಭದಲ್ಲಿ ಈ ಆಹಾರೋಧ್ಯಮವೇ ಬೇಡಾ ಅನ್ನುವಷ್ಟು ಮನಸ್ಸು ರೋಸಿ ಹೋಗುತ್ತಿದೆ ಎಂದರು.

# ರೈತರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ-ಸಿಎಂ ಸೂಚನೆ





**ಬೆಂಗಳೂರು:** ರಾಜ್ಯದ ಪ್ರಸಕ್ತ ಕೃಷಿ ಪರಿಸ್ಥಿತಿ ಹಾಗೂ ಮಳೆ ಕೊರತೆಯ ಹಿನ್ನೆಲೆಯಲ್ಲಿ ರೈತರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚಿಸಿದರು

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ವಿಧಾನಸೌಧದಲ್ಲಿ ಮಂಗಳವಾರ ನಡೆದ ರಾಜ್ಯದ ಸರ್ಕಾರಿ ನೌಕರರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಿಂದ ಕೃಷಿ ಪರಿಸ್ಥಿತಿಯ ಕುರಿತು ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು ಮಾತನಾಡಿದ ಅವರು ಮಳೆ ಕೊರತೆ ಹಾಗೂ ಹವಾಮಾನ ವೈಪರೀತ್ಯದಿಂದ ರೈತರಿಗೆ ತೊಂದರೆಯಾಗದಂತೆ ಜಿಲ್ಲಾಡಳಿತ ಮತ್ತು ಕೃಷಿ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಮುಂದಿನ 15 ದಿನಗಳ ಕಾಲ ಪ್ರತಿದಿನ 12 ಸಾವಿರ ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸಬೇಕು ಎಂದು ಕರ್ನಾಟಕಕ್ಕೆ ಕಾವೇರಿ ನೀರು ನಿರ್ವಹಣಾ ಸಮಿತಿ ಆದೇಶಿಸಿದೆ. ಆದರೆ ಈ ಸಂಬಂಧ ನೀರು ಬಿಡಬೇಕೆ, ಬೇಡವೇ ಎಂಬ ವಿಷಯವನ್ನು ಪ್ರಸ್ತುತ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ, ಮುಂದಿನ ಮೂರು?ನಾಲ್ಕು ದಿನಗಳಲ್ಲಿ ಸಂಬಂಧಿಸಿದ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅಗತ್ಯ ಕ್ರಮಗಳ ಕುರಿತು ಚರ್ಚಿಸಲಾಗುವುದು ಎಂದು ತಿಳಿಸಿದರು.

ರೈತರಿಗೆ ಅಗತ್ಯವಿರುವ ನೆರವು, ಮಾರ್ಗದರ್ಶನ ಹಾಗೂ ಸರ್ಕಾರದ ಸೌಲಭ್ಯಗಳು ಸಮರ್ಪಕವಾಗಿ ತಲುಪುವಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ಇದು ಕೇವಲ ಪ್ರಚಾರಕ್ಕಾಗಿ ಕಾರ್ಯಕ್ರಮಗಳನ್ನು ನಡೆಸುವ ಸಂದರ್ಭವಲ್ಲ. ರೈತರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಮಾಧ್ಯಮಗಳಲ್ಲಿ ಸುದ್ದಿಯಾಗುವುದಕ್ಕಾಗಿ ಮಾತ್ರ ಕಾರ್ಯಕ್ರಮಗಳನ್ನು ನಡೆಸದೆ, ರೈತರ ಸಮಸ್ಯೆಗಳಿಗೆ ಕಾರ್ಯೋಚಿತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು,? ಎಂದು ಮುಖ್ಯಮಂತ್ರಿ ಹೇಳಿದರು.

ರೈತರ ಹಿತದೃಷ್ಟಿಯಿಂದ ಸಂಸದರು, ಶಾಸಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಸಹಕಾರವನ್ನು ಪಡೆದುಕೊಂಡು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಸಂಬಂಧಿಸಿದ ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ, ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಭೂಮಿ ಹಾಗೂ ಕೃಷಿ ಸಂಬಂಧಿತ ವಿಷಯಗಳಲ್ಲಿ ಅಧಿಕಾರಿಗಳು ಅತ್ಯಂತ ಎಚ್ಚರಿಕೆಯಿಂದ ಮತ್ತು ನಿಯಮಾನುಸಾರವಾಗಿ ಕಾರ್ಯನಿರ್ವಹಿಸಬೇಕು. ಪ್ರಸ್ತುತ ಪರಿಸ್ಥಿತಿಯಲ್ಲಿ ರೈತರ ಹಿತಾಸಕ್ತಿಯನ್ನು ಕಾಪಾಡುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಜಿಲ್ಲಾಡಳಿತವು ಪರಿಸ್ಥಿತಿಯನ್ನು ನಿರಂತರವಾಗಿ ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಪರಮೇಶ್ವರ್ (ವಿಡಿಯೋ ಕಾನ್ಫರೆನ್ಸ್ ಮೂಲಕ), ಸಚಿವರಾದ ಪ್ರಿಯಾಂಕ್ ಖರ್ಗೆ, ಲಕ್ಷ್ಮಣ ಸವದಿ, ಸಂತೋಷ್ ಲಾಡ್, ವಿಜಯಾನಂದ ಕಾಶಪ್ಪನವರ್, ಅಜಯ್ ಸಿಂಗ್, ಮುಖ್ಯಕಾರ್ಯದರ್ಶಿ ಶಾಲಿನಿ ರಾಜನೀಶ್, ಅಪರ ಮುಖ್ಯಕಾರ್ಯದರ್ಶಿ ತುಷಾರ್ ಗಿರಿನಾಥ್, ಅಪರ ಮುಖ್ಯ ಕಾರ್ಯದರ್ಶಿ (ಅಭಿವೃದ್ಧಿ) ಉಮಾ ಮಹದೇವನ್ ಅವರು ಉಪಸ್ಥಿತರಿದ್ದರು.

## ಮಂಡ್ಯದ ಬಗ್ಗೆ ಮಾಹಿತಿ ಪಡೆದ ಸಿಎಂ

**ಮಂಡ್ಯ ;** ಅಂಬೇಡ್ಕರ್ ಭವನದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ್ ಮುಖ್ಯಮಂತ್ರಿಗಳೊಂದಿಗೆ ನಡೆದ ವಿಡಿಯೋ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ಜಿಲ್ಲೆಯಲ್ಲಿನ ಪ್ರಸಕ್ತ ಕೃಷಿ ಪರಿಸ್ಥಿತಿ ಕುರಿತು ಮಾಹಿತಿ ನೀಡಿದರು

ಈ ವರ್ಷ ಮಂಡ್ಯ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳಿಗೆ ಸ್ವಲ್ಪ ಹಿನ್ನಡೆಯಾಗಿದೆ. ಒಟ್ಟಾರೆಯಾಗಿ, ಈ ವರ್ಷದ ಮುಂಗಾರು ಅವಧಿಯಲ್ಲಿ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸುಮಾರು ಶೇ. 70ರಷ್ಟು ಮಳೆ ಕೊರತೆಯಾಗಿರುವುದರಿಂದ ಕೃಷಿ ಚಟುವಟಿಕೆಗಳು ಇನ್ನೂ ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾಗಿಲ್ಲ. ಈ ಹಿನ್ನೆಲೆಯಲ್ಲಿ ಇದನ್ನು ಮುಂಗಾರು ವೈಫಲ್ಯವೆಂದು ಪರಿಗಣಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ, ರೈತರೊಂದಿಗೆ ವಿವಿಧ ಹಂತಗಳಲ್ಲಿ ಸಭೆಗಳನ್ನು ನಡೆಸುವ ಮೂಲಕ, ಈ ಬಾರಿ ಭತ್ತ ಮತ್ತು ಕಬ್ಬಿನಂತಹ ಹೆಚ್ಚು ನೀರಿನ ಅವಶ್ಯಕತೆ ಇರುವ ಬೆಳೆಗಳ ಬದಲಾಗಿ, ಸಾಧ್ಯವಾದಷ್ಟು ಕಡಿಮೆ ನೀರಿನಲ್ಲಿ ಬೆಳೆಯಬಹುದಾದ ಬೆಳೆಗಳು ಹಾಗೂ ಪರ್ಯಾಯ ಬೆಳೆಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ನೀರಿನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪರ್ಯಾಯ ಬೆಳೆಗಳನ್ನು ಆಯ್ಕೆ ಮಾಡಿಕೊಂಡು ಕೃಷಿ ಮಾಡುವ ಕುರಿತು ರೈತರಿಗೆ ಹೆಚ್ಚಿನ ಅರಿವು ಮೂಡಿಸುವುದು ಉದ್ದೇಶವಾಗಿದೆ. ಈ ವರ್ಷ ಮಂಡ್ಯ ಜಿಲ್ಲೆಯಲ್ಲಿ ಸಹ ಪರ್ಯಾಯ ಬೆಳೆಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದೇವೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ. ಆರ್. ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ವಿ. ಜೆ. ಶೋಭಾರಾಣಿ ಹಾಗೂ ಎಲ್ಲಾ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಹೊಸೂರು ಗ್ರಾಮದಲ್ಲಿ 2100ನೇ ಮದ್ಯವರ್ಜನ ಶಿಬಿರದ ಸಮಾರೋಪ



**ಕೆ.ಆರ್.ನಗರ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ, ಕರ್ನಾಟಕ ರಾಜ್ಯ ಮಧ್ಯಪಾನ ಸಂಯಮ ಮಂಡಳಿ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ತಾಲೂಕಿನ ಹೊಸೂರು ಗ್ರಾಮದಲ್ಲಿ 2100ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭವು ಗಾವಡಗೆರೆಯ ಗುರುಲಿಂಗ ಜಂಗಮ ಮಠದ ಶ್ರೀ ನಟರಾಜ ಮಹಾಸ್ವಾಮಿಜಿಯವರ ದಿವ್ಯ ಸಾನಿಧ್ಯದಲ್ಲಿ ನಡೆಯಿತು.

ಮೈಸೂರು ಪ್ರಾದೇಶಿಕ ನಿರ್ದೇಶಕ ಎ.ಯೋಗೀಶ್ ಅವರು ಯೋಜನೆಯಲ್ಲಿ ಮದ್ಯವರ್ಜನ ಶಿಬಿರದ ಆರಂಭ ಹಾಗೂ ಶಿಬಿರಾರ್ಥಿಗಳಿಗೆ ಮತ್ತು ಕುಟುಂಬ ಸದಸ್ಯರಿಗೆ ಪಾನಮುಕ್ತ ನೆಮ್ಮದಿಯ ದಾಂಪತ್ಯ ಜೀವನದ ಬಗ್ಗೆ ಮಾರ್ಗದರ್ಶನ ನೀಡಿದರು.

ಸಮಾರಂಭದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ಹಂದನಹಳ್ಳಿ ಸೋಮಶೇಖರ್, ಕೋಶಾಧಿಕಾರಿ ಸಿ.ಕೆ.ಬಾಲಮನೋಹರ, ಸದಸ್ಯರುಗಳಾದ ಎಂ.ಬಿ.ಲೋಕನಾಥ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನವೀನ್, ಶಕುಂತಲಾ, ಯೋಜನೆಯ ಜಿಲ್ಲಾ ನಿರ್ದೇಶಕಿ ಮಮತಾರಾವ್, ತಾಲೂಕು ಯೋಜನಾಧಿಕಾರಿಗಳಾದ ಉಮೇಶ್ ಪೂಜಾರಿ, ಮುಖೇಶ್, ಮೇಲ್ವಿಚಾರಕ ಅವಿನಾಶ್, ಮುಖಂಡರಾದ ಧಶರಥ್, ಮಹೇಶ್, ಮುಕ್ಕಣ್ಣ, ಸೇವಾ ಪ್ರತಿನಿಧಿಗಳಾದ ವೀಣಾ, ಕರುಣಾಮಾಲಾ, ರಾಜೇಶ್ವರಿ, ಕಾವ್ಯ, ಸೇರಿದಂತೆ ಹಲವರು ಭಾಗವಹಿಸಿದ್ದರು.

# ಕರ್ತವ್ಯದಲ್ಲೇ ಕಾಡಾನೆಗೆ ಬಲಿಯಾದ ವೀಕ್ಷಕನ ಕುಟುಂಬಕ್ಕೆ 5 ಲಕ್ಷ ಪರಿಹಾರ: ಮೃತರ ಪತ್ನಿಗೆ ಉದ್ಯೋಗದ ಭರವಸೆ

**ಹನೂರು:** ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕಾಡಾನೆ ದಾಳಿಗೆ ತುತ್ತಾಗಿ ಮೃತಪಟ್ಟಿದ್ದ ಅರಣ್ಯ ವೀಕ್ಷಕ ಮಹದೇವಸ್ವಾಮಿ ಅವರ ಕುಟುಂಬಕ್ಕೆ ಸೋಮವಾರ 5 ಲಕ್ಷ ರೂ. ತಾತ್ಕಾಲಿಕ ಪರಿಹಾರದ ಚೆಕ್ ವಿತರಿಸಲಾಯಿತು.

ಪೊನ್ನಾಚಿ ಅರಣ್ಯ ವಲಯದ ಹುಣಸೆಬಯಲು ಪ್ರದೇಶದಲ್ಲಿ ಕಳೆದ ಶನಿವಾರ ರಾತ್ರಿ ಕಳ್ಳ ಬೇಟೆ ತಡೆ ಶಿಬಿರದಲ್ಲಿ ಕರ್ತವ್ಯದಲ್ಲಿದ್ದಾಗ ಏಕಾಏಕಿ ಎದುರಾದ ಕಾಡಾನೆ ದಾಳಿ ಮಾಡಿ ಮಹದೇವಸ್ವಾಮಿ ಅವರನ್ನು ಬಲಿ ಪಡೆದಿತ್ತು. ಈ ಘಟನೆ ಇಡೀ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಸ್ಥಳೀಯರಲ್ಲಿ ಆಘಾತ ಮೂಡಿಸಿತ್ತು.



ಇಲಾಖೆಯಿಂದ ತಕ್ಷಣದ ಸ್ಪಂದನೆ*

ಚಾಮರಾಜನಗರ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ *ಡಾ. ಎಂ. ಮಾಲತಿಪ್ರಿಯಾ* ಅವರು ಮೃತರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ವತಿಯಿಂದ ತಾತ್ಕಾಲಿಕ ಪರಿಹಾರವಾಗಿ 5 ಲಕ್ಷ ರೂ.ಗಳ ಚೆಕ್ ಅನ್ನು ಮೃತರ ಕುಟುಂಬಕ್ಕೆ ಹಸ್ತಾಂತರಿಸಿದರು.

25 ಲಕ್ಷ ಪೂರ್ಣ ಪರಿಹಾರ ಹಾಗೂ ಉದ್ಯೋಗಕ್ಕೆ ಕ್ರಮ: ಈ ವೇಳೆ ಮಾತನಾಡಿದ ಡಾ. ಮಾಲತಿಪ್ರಿಯಾ ಅವರು, "ಮಹದೇವಸ್ವಾಮಿ ಅವರು ಕಳೆದ 10 ವರ್ಷಗಳಿಂದ ಅತ್ಯಂತ ಪ್ರಾಮಾಣಿಕವಾಗಿ, ನಿಷ್ಠೆಯಿಂದ ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರ ಸಾವು ನಮಗೆಲ್ಲರಿಗೂ ತುಂಬಲಾರದ ನಷ್ಟವಾಗಿದೆ" ಎಂದು ದುಃಖ ವ್ಯಕ್ತಪಡಿಸಿದರು.

ಈ ವೇಳೆ ಉಪ ವಲಯ ಅರಣ್ಯಾಧಿಕಾರಿಗಳು, ಸ್ಥಳೀಯ ಸಿಬ್ಬಂದಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಪರಿಹಾರ ಪಡೆದ ಮೃತರ ಕುಟುಂಬಸ್ಥರು ಸರ್ಕಾರ ಮತ್ತು ಅರಣ್ಯ ಇಲಾಖೆಗೆ ಕೃತಜ್ಞತೆ ಸಲ್ಲಿಸಿದರು.

# ಕಾವೇರಿ ಅಚ್ಚುಕಟ್ಟು ರೈತರ ಒಣಗಿದ ಬೆಳೆಗೆ ಪರಿಹಾರ ನೀಡಿ

**ಮಂಡ್ಯ:** ಕಾವೇರಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ನೀರಿನ ಕೊರತೆಯಿಂದ ಒಣಗುತ್ತಿರುವ ಬೆಳೆಗಳಿಗೆ ಸೂಕ್ತ ಪರಿಹಾರ ನೀಡಲು ರಾಜ್ಯ ಸರ್ಕಾರ ಕೂಡಲೇ ಮುಂದಾಗಬೇಕು ಎಂದು ಭಾರತೀಯ ಕಿಸಾನ್ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷ ಹಾಡ್ಯ ರಮೇಶ್‌ರಾಜು ಆಗ್ರಹಿಸಿದರು.




ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹವಾಮಾನ ಇಲಾಖೆ ಈ ಬಾರಿ ಶೇ.60ರಷ್ಟು ಮಳೆ ಕೊರತೆಯಾಗಲಿದೆ ಎಂದು ಮೊದಲೇ ಮುನ್ಸೂಚನೆ ನೀಡಿತ್ತು. ಕೆಆರ್‌ಎಸ್‌ನಲ್ಲಿ 80ರಿಂದ 90 ಅಡಿಗಳಷ್ಟು ನೀರಿದ್ದರೂ ಬೆಳೆದು ನಿಂತಿರುವ ಬೆಳೆಗಳಿಗೆ ನೀರು ಹರಿಸದೆ ಸರ್ಕಾರ ರೈತರಿಗೆ ನಷ್ಟ ಉಂಟು ಮಾಡಿದೆ ಎಂದು ಆರೋಪಿಸಿದರು.

ಜೂನ್ ತಿಂಗಳಲ್ಲಿಯೇ ಒಂದು ಕಟ್ಟು ನೀರು ಹರಿಸಿದ್ದರೆ, ಈಗಾಗಲೇ ಬಂಡವಾಳ ಹೂಡಿ ಬೆಳೆ ಬೆಳೆದಿರುವ ರೈತರಿಗೆ ಬೆಳೆ ಉಳಿಸಿಕೊಳ್ಳಲು ಅನುಕೂಲವಾಗುತ್ತಿತ್ತು. ಕೆಆರ್‌ಎಸ್ ಇತಿಹಾಸದಲ್ಲೇ ರೈತರ ಒಂದು ಬೆಳೆಗೆ ನೀರು ನೀಡದ ಉದಾಹರಣೆ ಇಲ್ಲ. ಆದರೆ ಈ ವರ್ಷ ರೈತರಿಗೆ ನೀರು ನೀಡದೆ ಅನ್ಯಾಯ ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ಕೂಡಲೇ ರಾಜ್ಯ ಸರ್ಕಾರ ರೈತರಿಗೆ ಸೂಕ್ತ ಪರಿಹಾರ ವಿತರಿಸಬೇಕು. ಈಗಲಾದರೂ ಬಿತ್ತನೆ ಬೀಜ ವಿತರಿಸಿ, ಒಂದು ಕಟ್ಟು ನೀರು ಹರಿಸುವ ಮೂಲಕ ರೈತರಿಗೆ ಬೆಳೆ ಬೆಳೆಯಲು ಅನುಕೂಲ ಮಾಡಿಕೊಡಬೇಕು. ಪ್ರಸಕ್ತ ವರ್ಷ ಮಳೆಯ ಕೊರತೆಯಿಂದ ತೀವ್ರ ಸಂಕಷ್ಟ ಎದುರಾಗಿದೆ. ಇಂತಹ ಪರಿಸ್ಥಿತಿಯಲ್ಲಿ ತಮಿಳುನಾಡು ನೀರಿಗಾಗಿ ಪಟ್ಟು ಹಿಡಿಯುತ್ತಿರುವುದು ಸರಿಯಲ್ಲ. ರಾಜ್ಯ ಸರ್ಕಾರ ರಾಜಕೀಯವನ್ನು ಬದಿಗೊತ್ತಿ ಕಾವೇರಿ ನೀರು ನಿರ್ವಹಣಾ ಮಂಡಳಿಗೆ ರಾಜ್ಯದ ವಾಸ್ತವ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಕಾರ್ಯಕಾರಿಣಿ ಸದಸ್ಯ ವೆಂಕಟೇಶ್, ಜಿಲ್ಲಾಧ್ಯಕ್ಷ ಬಿ.ಪಿ.ಅಪ್ಪಾಜಿ, ಜಿಲ್ಲಾ ವಕ್ತಾರ ನರಸಿಂಹನ್ ಹಾಗೂ ಮಂಡ್ಯ ತಾಲೂಕು ಅಧ್ಯಕ್ಷ ಜಯರಾಮ್ ಉಪಸ್ಥಿತರಿದ್ದರು.

# ನಗರ ಕಾಂಗ್ರೆಸ್ ಹುದ್ದೆಗೆ ಭಾಸ್ಕರ್ ನೇಮಕಕ್ಕೆ ಒತ್ತಾಯ

**ಮೈಸೂರು:** ಕೆಪಿಸಿಸಿ ಸಂಯೋಜಕ ಹಾಗೂ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ರನ್ನು ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ವಿವಿಧ ಸಮಾಜಗಳ ಮುಖಂಡರು ಕಾಂಗ್ರೆಸ್ ಪಕ್ಷ ಹೈಕಮಾಂಡ್ ಅನ್ನು ಒತ್ತಾಯಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಅಹಿಂದ ಒಕ್ಕೂಟದ ಅಧ್ಯಕ್ಷ ದ್ಯಾವಪ್ಪ ನಾಯಕ ಮಾತನಾಡಿ, ಸುಮಾರು 35 ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠೆಯಿಂದ, ಪ್ರಾಮಾಣಿಕವಾಗಿ ದುಡಿಯುತ್ತಿರುವ ಎನ್. ಭಾಸ್ಕರ್ ಅವರು ರಾಜಕೀಯ ಇತಿಹಾಸದಲ್ಲಿ ಒಂದೇ ಪಕ್ಷದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಯಾವುದೇ ಪಕ್ಷಕ್ಕೂ ಹೋಗದೆ, ಜತೆಗೆ ಪಕ್ಷ ಕೊಡುವ ಜವಾಬ್ದಾರಿಗಳನ್ನು ಭಾರೀ ಪ್ರಾಮಾಣಿಕತೆಯಿಂದ ಹಾಗೂ ದಕ್ಷತೆ ಕಾರ್ಯನಿರ್ವಹಿಸಿಕೊಂಡು ಬರುತ್ತಿದ್ದಾರೆ. ಅವರನ್ನು ಬೇರೆ ಬೇರೆ ಜಿಲ್ಲೆಗೆ ಉಸ್ತುವಾರಿಯಾಗಿ ಹಾಗೂ ವೀಕ್ಷಕರಾಗಿ ಹಾಕಿದ ಸಂದರ್ಭದಲ್ಲೂ ಸಹ ಪಕ್ಷ ನಿಷ್ಠೆಯಿಂದ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷದ ಸಂಯೋಜಕರಾಗಿಯೂ



ದುಡಿಯುತ್ತಿದ್ದಾರೆ ಎಂದರು.

ವಕೀಲ ತಿಮ್ಮಯ್ಯ ಮಾತನಾಡಿ, ಎಲ್ಲಾ ವರ್ಗದವರಿಗೂ ಕೂಡ ಮೈಸೂರು ನಗರದ ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಅವಕಾಶ ಸಿಕ್ಕಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಇಷ್ಟು ವರ್ಷಗಳಾದರು ಅಧ್ಯಕ್ಷರಾಗಲು ಸಾಧ್ಯವಾಗಿಲ್ಲ. ಈ ಹಿಂದೆ ದಲಿತರಿಗೆ ಮುಖ್ಯಮಂತ್ರಿಯಾಗುತ್ತಾರೆ ಎಂದು ಕಾಯಕ ಸಮಾಜದವರು ಕಾಯುತ್ತಿದ್ದರು. ಆದರೆ ನಮಗೆ ಅನ್ಯಾಯವಾಗಿದೆ ಎಂದರು.

ಕಾಂಗ್ರೆಸ್ ಹಿರಿಯ ನಾಯಕ ಡಾ.ಎಚ್.ಸಿ.ಮಹದೇವಪ್ಪಗೆ ಸಚಿವ ಸ್ಥಾನ ತಪ್ಪಿಸಿ ಕಾಂಗ್ರೆಸ್ ಮತ್ತೊಮ್ಮೆ ಅನ್ಯಾಯ ಮಾಡಿದೆ. ಮೈಸೂರು ಭಾಗದಲ್ಲಿ ದಲಿತ ನಾಯಕರಿಗೆ ಅಧಿಕಾರ ಕೊಡುವುದರಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಆದ್ದರಿಂದ 2028ರ ಚುನಾವಣೆಯಲ್ಲಿ ದಲಿತರು ಕಾಂಗ್ರೆಸ್ ಅನ್ನು ಬೆಂಬಲಿಸಬೇಕೆಂದರೆ ದಲಿತರಿಗೆ ನಾಯಕತ್ವ ನೀಡುವುದು ಅನಿವಾರ್ಯತೆ ಇದೆ. ಹೀಗಾಗಿ ಎನ್.ಭಾಸ್ಕರ್ ಅವರಿಗೆ ನಗರ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಬೇಕು. ಇದರಿಂದ ಪಕ್ಷಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಸಂವಿಧಾನ ಸಂರಕ್ಷಣಾ ಹೊರಾಟ ಸಮಿತಿಯ ಮಹಿಳಾ ಅಧ್ಯಕ್ಷೆ ಮಂಜುಳಾ ಮಾತನಾಡಿ, ಎನ್.ಭಾಸ್ಕರ್ ಅವರು ಕಾಂಗ್ರೆಸ್ ಪಕ್ಷಕ್ಕಾಗಿ ತಮ್ಮ ತನು, ಮನ ಹಾಗೂ ದನವನ್ನು ಅರ್ಪಿಸಿದ್ದಾರೆ. ಕಾಂಗ್ರೆಸ್ ಪಕ್ಷಕ್ಕಾಗಿ ದುಡಿಯುತ್ತಿದ್ದಾರೆ. ಹೀಗಾಗಿ ಇವರ ಸೇವಾ ನಿಷ್ಠೆಯನ್ನು ಪರಿಗಣಿಸಿ ನಗರ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ನೀಡಬೇಕು ಎಂದರು.

ಆದಿ ಕರ್ನಾಟಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕೆ.ಮುರುಳಿ, ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಸುರೇಶ, ವೀರಶೈವ ಮುಖಂಡರಾದ ಮಲ್ಲೇಶ್(ಮಲ್ಲು), ಮುಸ್ಲಿಂ ಸಮುದಾಯದ ಮುಖಂಡ ನಾಸೀರ್, ಕ್ರಿಶ್ಚಿಯನ್ ಸಮುದಾಯದ ಮುಖಂಡ ರಾಬರ್ಟ್, ವಿಶ್ವಕರ್ಮ ಸಮಾಜದ ಚಂದ್ರು ವಿಶ್ವಕರ್ಮ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಕೆ.ಗಂಗಾಧರ್, ವಕೀಲ ಎ.ಆರ್.ಕಾಂತರಾಜು ಸೇರಿ ಇತರರಿದ್ದರು.

# ಶಾಸಕ ಎಂ.ಆರ್. ಮಂಜುನಾಥ್ ಅವರ ತುರ್ತು ಕ್ರಮಕ್ಕೆ ಫಲ

## 3 ಗ್ರಾಮಗಳಲ್ಲಿ ಹರಿದ ಜೀವಜಲ, ಗ್ರಾಮಸ್ಥರಿಂದ ಹರ್ಷ

**ಹನೂರು:** ತಾಲೂಕಿನಲ್ಲಿ ತಲೆದೋರಿದ್ದ ಕುಡಿಯುವ ನೀರಿನ ಸಮಸ್ಯೆಗೆ ಶಾಸಕ *ಎಂ. ಆರ್. ಮಂಜುನಾಥ್* ಅವರ ಮಧ್ಯಪ್ರವೇಶದಿಂದ ತಕ್ಷಣದ ಪರಿಹಾರ ಸಿಕ್ಕಿದೆ. ಅವರ ಸೂಚನೆಯ ಮೇರೆಗೆ ಕೊರೆಸಿದ ನೂತನ ಬೋರ್‌ವೆಲ್ಲಗಳಲ್ಲಿ ನೀರು ಲಭ್ಯವಾಗುತ್ತಿದ್ದಂತೆ ಕೆಂಚಯ್ಯನದೊಡ್ಡಿ, ಅಜ್ಜಿಪುರ ಮತ್ತು ಕುರುಬರದೊಡ್ಡಿ* ಗ್ರಾಮಸ್ಥರು ಸಂಭ್ರಮಿಸಿದ್ದಾರೆ.

ಬೇಸಿಗೆಯ ತೀವ್ರತೆ ಮತ್ತು ಅಂತರ್ಜಲ ಕುಸಿತದಿಂದ ತಾಲೂಕಿನ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿತ್ತು. ಈ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿದ ಶಾಸಕರು ಆಗಸ್ಟ್ 6ರಂದು ಹನೂರು ಪಟ್ಟಣದಲ್ಲಿ ಅಧಿಕಾರಿಗಳ ತುರ್ತು ಸಭೆ ನಡೆಸಿದರು. ನೀರಿನ ಅಭಾವ ಇರುವ ಗ್ರಾಮಗಳನ್ನು ತಕ್ಷಣ ಗುರುತಿಸಿ ನೂತನ ಬೋರ್‌ವೆಲ್ಲಗಳನ್ನು ಕೊರೆಸುವಂತೆ ಹಾಗೂ ಅಗತ್ಯವಿರುವ ಕಡೆ ಖಾಸಗಿ ಜಮೀನುಗಳಲ್ಲಿನ ನೀರನ್ನು ಮಾಲೀಕರ ಒಪ್ಪಿಗೆಯೊಂದಿಗೆ ಪಡೆದು ಸಾರ್ವಜನಿಕರಿಗೆ ಒದಗಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರು.



**3 ಗ್ರಾಮಗಳಿಗೆ ಜೀವಸಂಜೀವಿನಿ:** ಶಾಸಕರ ಸೂಚನೆ ಬೆನ್ನಲ್ಲೇ ಗ್ರಾಮ ಪಂಚಾಯಿತಿ ಮತ್ತು ಗ್ರಾಮೀಣ ನೀರು ಸರಬರಾಜು ಇಲಾಖೆ ಅಧಿಕಾರಿಗಳು ಕಾರ್ಯಪ್ರವೃತ್ತರಾದರು. ಇದರ ಫಲವಾಗಿ ಕೆಂಚಯ್ಯನದೊಡ್ಡಿ, ಅಜ್ಜಿಪುರ ಮತ್ತು ಕುರುಬರದೊಡ್ಡಿ ಗ್ರಾಮಗಳಲ್ಲಿ ನೂತನವಾಗಿ ಕೊರೆಸಿದ ಬೋರ್‌ವೆಲ್ಲಗಳಲ್ಲಿ ಉತ್ತಮ ಪ್ರಮಾಣದಲ್ಲಿ ನೀರು ದೊರೆತಿದೆ. ನೀರು ಲಭ್ಯವಾದ ಕೂಡಲೇ ಆಯಾ ಗ್ರಾಮಗಳಲ್ಲಿ ಕೊಳವೆ ನೀರಿನ ವ್ಯವಸ್ಥೆ ಮೂಲಕ ಮನೆ ಮನೆಗೆ ನೀರು ಪೂರೈಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.


**ನೀರಿಗಾಗಿ ಪರದಾಡುತ್ತಿದ್ದೆವು, ಈಗ ನೆಮ್ಮದಿ":** ವಿಶೇಷವಾಗಿ ಕೆಂಚಯ್ಯನದೊಡ್ಡಿ ಗ್ರಾಮದಲ್ಲಿ ಕಳೆದ 2 ತಿಂಗಳಿಂದ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿತ್ತು. ಟ್ಯಾಂಕರ್ ನೀರಿಗಾಗಿ ಗ್ರಾಮಸ್ಥರು ಗಂಟೆಗಟ್ಟಲೆ ಕಾದು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಇದೀಗ ನೂತನ ಬೋರ್‌ವೆಲ್ಲಲ್ಲಿ ನಿರಂತರವಾಗಿ ನೀರು ಬರುತ್ತಿರುವುದರಿಂದ ಮಹಿಳೆಯರು ಮತ್ತು ಮಕ್ಕಳು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

"ಶಾಸಕರು ನಮ್ಮ ಕಷ್ಟಕ್ಕೆ ಸ್ಪಂದಿಸಿದ್ದಾರೆ. ಅವರಿಂದಲೇ ಇಂದು ನಮಗೆ ನೀರು ಸಿಕ್ಕಿದೆ" ಎಂದು ಗ್ರಾಮದ ಹಿರಿಯರು ಕೃತಜ್ಞತೆ ವ್ಯಕ್ತಪಡಿಸಿದರು.

**ಶಾಸಕರ ಭರವಸೆ:** ಈ ಬಗ್ಗೆ ಪ್ರತಿಕ್ರಿಯಿಸಿದ ಶಾಸಕ ಎಂ.ಆರ್. ಮಂಜುನಾಥ್ ಅವರು, "ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಯಾವುದೇ ಗ್ರಾಮವನ್ನು ನಿರ್ಲಕ್ಷಿಸುವುದಿಲ್ಲ. ಹಂತ ಹಂತವಾಗಿ ಎಲ್ಲಾ ಗ್ರಾಮಗಳಲ್ಲಿಯೂ ನೂತನ ಬೋರ್‌ವೆಲ್ ಕೊರೆಸಿ, ಖಾಸಗಿ ಕೊಳವೆ ಬಾವಿಗಳ ನೀರನ್ನು ಗ್ರಾಮಗಳಿಗೆ ಹರಿಸುವ ಮೂಲಕ ಈ ಬೇಸಿಗೆಯಲ್ಲಿ ಯಾವುದೇ ಗ್ರಾಮಕ್ಕೆ ನೀರಿನ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಜನರ ಮೂಲಭೂತ ಅಗತ್ಯವಾದ ಕುಡಿಯುವ ನೀರು ನನ್ನ ಆದ್ಯತೆಯಾಗಿದೆ" ಎಂದು ಭರವಸೆ ನೀಡಿದರು.


ಶಾಸಕರ ತ್ವರಿತ ಕ್ರಮಕ್ಕೆ ಗ್ರಾಮಸ್ಥರು ಮತ್ತು ಸ್ಥಳೀಯ ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ

# ಪ್ಲಾಸ್ಟಿಕ್ ಕಸಕ್ಕೆ ರಸ್ತೆ ತೋರಿದ ಜಾದೂಗಾರ!



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಪ್ಲಾಸ್ಟಿಕ್ ಎಂದರೆ ಪರಿಸರದ ರಕ್ಕಸ. ನದಿ, ಸಮುದ್ರ, ಬೀದಿಗಳನ್ನು ನುಂಗುವ ಮಾಯಾವಿ. ಆದರೆ ಮಧುರೈನ ವಿಜ್ಞಾನಿ ಡಾ. ಆರ್. ವಾಸುದೇವನ್ ಈ ರಕ್ಕಸನನ್ನೇ ರಸ್ತೆಯ ರಕ್ಷಕನನ್ನಾಗಿ ಪರಿವರ್ತಿಸಿದ ನಿಜವಾದ ಜಾದೂಗಾರ. "ಪ್ಲಾಸ್ಟಿಕ್ ಅಪರಾಧಿಯಲ್ಲ, ಅದನ್ನು ಎಸೆಯುವ ನಮ್ಮ ಕೈಗಳೇ ಅಪರಾಧಿ" – ಅವರ ಈ ಚಿಂತನೆಯೇ ಕ್ರಾಂತಿಗೆ ನಾಂದಿ.




ತ್ಯಾಗರಾಜರ್ ಕಾಲೇಜಿನ ಪ್ರಯೋಗಾಲಯದಲ್ಲಿ ಒಂದು ದಿನ ಅಚ್ಚರಿ ನಡೆಯಿತು. ಬಿಸಿಯಾದ ಪ್ಲಾಸ್ಟಿಕ್ ಅಂಟಿನಂತೆ ಜಿಗುಟಾಗಿ ಬಿಟುಮಿನ್‌ಗೆ ಅಂಟಿಕೊಳ್ಳುವುದನ್ನು ಕಂಡರು. ಕಸದ ಕವರ್, ಬಾಟಲಿನ ಚೂರುಗಳನ್ನು ಕರಗಿಸಿ ಬಿಸಿ ಜಲ್ಲಿ–ಡಾಂಬರಿಗೆ ಬೆರೆಸಿದರು. ಫಲಿತಾಂಶ ಬೆರಗುಗೊಳಿಸಿತು. ಮಳೆಗೆ ಜಗ್ಗದ, ಭಾರೀ ಲಾರಿಗೆ ಕುಗ್ಗದ, ಬಿರುಕು ಬಿಡದ ಉಕ್ಕಿನಂತಹ ರಸ್ತೆ ಹುಟ್ಟಿತು. ತಿಪ್ಪೆಯ ಕಸ ನೇರವಾಗಿ ರಾಜಮಾರ್ಗಕ್ಕೇರಿತು.

ಈ "ಪ್ಲಾಸ್ಟಿಕ್ ರಸ್ತೆ" ಕ್ರಾಂತಿ ದೇಶವನ್ನೇ ಬೆಚ್ಚಿಬೀಳಿಸಿತು. 2018ರಲ್ಲಿ ಕೇಂದ್ರ ಸರ್ಕಾರ ಡಾ. ವಾಸುದೇವನ್ ಅವರಿಗೆ ಪದ್ಮಶ್ರೀ ನೀಡಿ ಗೌರವಿಸಿತು. ಸತೀಶ್ ಧವನ್ ಪ್ರಶಸ್ತಿ, ರಾಷ್ಟ್ರೀಯ ನಾವೀನ್ಯತೆ ಪ್ರಶಸ್ತಿಯೂ ಅವರ ಸಾಧನೆಗೆ ಸಂದಿತು. ಇಂದು ಅವರ ಸೂತ್ರದಿಂದ ಭಾರತದಲ್ಲಿ 1 ಲಕ್ಷ ಕಿ.ಮೀ.ಗೂ ಅಧಿಕ ರಸ್ತೆಗಳು ನಿರ್ಮಾಣವಾಗಿವೆ.

ಸ್ಫೂರ್ತಿ ಸುಧೆ - 93

ಡಾ. ವಾಸುದೇವನ್ ಕಲಿಸುವ ಪಾಠ ಸ್ಪಷ್ಟ. ಸಮಸ್ಯೆಯ ರಾಶಿಯಲ್ಲೇ ಪರಿಹಾರದ ಚಿನ್ನ ಅಡಗಿದೆ. ಕಣ್ಣು ತೆರೆದು ನೋಡುವವರಿಗೆ ಪ್ರತಿ ತ್ಯಾಜ್ಯವೂ ಒಂದು ಅವಕಾಶ. ಪ್ಲಾಸ್ಟಿಕ್‌ಗೆ ಮರುಜನ್ಮ ಕೊಟ್ಟ ಈ ವಿಜ್ಞಾನಿ ಯುವ ಭಾರತಕ್ಕೆ ಸ್ಫೂರ್ತಿಯ ನಿಜವಾದ ಹೀರೋ.

# ಫೋಬಿಯಾ ಭಯವಾ?



ರೂಪ ಮಂಜುನಾಥ ಹೊಳೆನರಸೀಪುರ

ವಿವೇಕದ ಭಯ ಮನುಷ್ಯನನ್ನು ಕಾಪಾಡುತ್ತದೆ; ಅತಿಯಾದ ಭಯ ಮನುಷ್ಯನ ಸುಖವನ್ನೇ ಕಸಿದುಕೊಳ್ಳುತ್ತದೆ. ಎನ್ನುತ್ತಾರೆ ಹಿರಿಯರು. ಆದರೆ ಜಗತ್ತಿನಲ್ಲಿ "ಫೋಬಿಯಾವಿಲ್ಲದ ಮನುಷ್ಯನೇ ಇಲ್ಲ" ಎನ್ನುವುದು ಅಕ್ಷರಶಃ ನಿಜ! ಹುಟ್ಟಿದ ಮಗುವಿನಿಂದ ಹಿಡಿದು ನೂರು ದಾಟಿದ ಮುದುಕರವರೆಗೂ ಪ್ರತಿಯೊಬ್ಬರ ಮನಸ್ಸಿನ ಗೋದಾಮಿನಲ್ಲೂ ಒಂದಲ್ಲ ಒಂದು ಭಯದ ಮೂಟೆ ಅಡಗಿ ಕುಳಿತಿರುತ್ತದೆ. ಕೆಲವರಿಗೆ ಕತ್ತಲೆಯೆಂದರೆ ನಡುಕ, ಇನ್ನು ಕೆಲವರಿಗೆ ಎತ್ತರಕ್ಕೆ ಹೋದರೆ ತಲೆತಿರುಗುವಿಕೆ. ಇವೆಲ್ಲಾ ಪ್ರಕೃತಿ ಸಹಜವಾದ ಭಯಗಳು!

ಆದರೆ, ಹಲ್ಲಿ ಕಂಡರೆ ಬೆಚ್ಚಿಬೀಳುವುದು ಅಥವಾ ಜಿರಳೆ ಕಂಡರೆ ಹಿಂದೆ ಸರಿಯುವುದು ಸಾಮಾನ್ಯ ಭಯವಾಗಿರಬಹುದು. ಆದರೆ ಆ ಭಯವು ಅತಿರೇಕವಾಗಿ ಬೆಳೆದು, ದೈನಂದಿನ ಜೀವನವನ್ನೇ ಅಸ್ತವ್ಯಸ್ತಗೊಳಿಸುವ ಮಟ್ಟಕ್ಕೆ ಹೋದರೆ ಅದನ್ನು ಫೋಬಿಯಾ ಎಂದು ಕರೆಯುತ್ತಾರೆ.

ವಿಜ್ಞಾನ ಮತ್ತು ಮನೋವಿಜ್ಞಾನ ರಂಗದ ಪುಟಗಳನ್ನು ತಿರುವಿ ನೋಡಿದರೆ, ಅಲ್ಲಿ ದಾಖಲಾಗಿರುವ ಕೆಲವು ಫೋಬಿಯಾಗಳು ಸಾಮಾನ್ಯ ಮನುಷ್ಯನ ಕಲ್ಪನೆಗೂ ನಿಲ್ಲದಷ್ಟು ವಿಚಿತ್ರ ಮತ್ತು ರೋಚಕವಾಗಿವೆ! ಈ ನೈಜ ವೈದ್ಯಕೀಯ ಫೋಬಿಯಾಗಳ ವಿಚಿತ್ರ ಲೋಕಕ್ಕೆ ಲಗ್ಗೆ ಇಟ್ಟರೆ, ಭಯದ ಕಥೆಯೂ ನಗುವಿನ ಮಹಾಪೂರವನ್ನೇ ಹರಿಸಬಲ್ಲದು!ಜಗತ್ತಿನಲ್ಲಿ ಹುಟ್ಟಿದ ಮೇಲೆ ಒಂದಲ್ಲ ಒಂದು ಭಯ ಇರಲೇಬೇಕು ಎನ್ನುವುದು ಪ್ರಕೃತಿಯ ನಿಯಮ ಇರಬೇಕು.. ಇದನ್ನು ಇಂಗ್ಲಿಷಿನಲ್ಲಿ ಫೋಬಿಯಾ (ಕ್ಸುಬುಚಿ) ಎನ್ನುತ್ತಾರೆ. ಆದರೆ ಈ ಜಗತ್ತಿನಲ್ಲಿ ನಮಗೆ ಕಲ್ಪನೆಗೂ ನಿಲ್ಲದ ಕೆಲವು ಮಹಾ ವಿಚಿತ್ರವಾದ ಫೋಬಿಯಾಗಳಿವೆ.ಬನ್ನಿ ನೋಡ್ತಾ ನೋಡ್ತಾ ನಿಮಗೇನನ್ನಿಸುತ್ತೋ, ನನಗೂ ತಿಳಿಯುವ ಆಸೆ.

**1 ಕೂರಲು ಹೆದರುವ ಮಹಾಶಯರ ಕಥಿಸೋಫೋಬಿಯಾ**

ನಮಗೆಲ್ಲ ದಿನವಿಡೀ ಕೆಲಸ ಮಾಡಿ ಸುಸ್ತಾದರೆ "ಅಬ್ಬಾ! ಒಂದು ಕಡೆ ಕುಳಿತರೆ ಸಾಕಪ್ಪಾ" ಎನಿಸುತ್ತದೆ. ಆದರೆ ಈ ಕಥಿಸೋಫೋಬಿಯಾ (Cathisophobia) ಇದ್ದವರಿಗೆ ಕುಳಿತುಕೊಳ್ಳುವುದು ಎಂದರೆ ಯಮಲೋಕದ ದರ್ಶನ ಪಡೆದಂತೆ! ಹೌದು, ಇವರಿಗೆ ಎಲ್ಲಾದರೂ ಕುಳಿತುಕೊಳ್ಳಬೇಕು ಎಂದರೆ ಪ್ರಾಣ ಸಂಕಟ. ಇವರೇನಾದರೂ ನಮ್ಮ ಮನೆಗೆ ಬಂದರೆ, ಮರ್ಯಾದೆಯಿಂದ "ಬನ್ನಿ ಕೂತ್ಕೊಳ್ಳಿ" ಎಂದರೆ ಸಾಕು, ನಮ್ಮನ್ನೇ ಕೊಲೆಗಡುಕನಂತೆ ನೋಡುತ್ತಾರೆ! ಇವರ ಪುಣ್ಯಕ್ಕೆ ನಮ್ಮ ಬಸ್‌ಗಳಲ್ಲಿ ಸೀಟು ಸಿಗದೆ ನಿಂತುಕೊಂಡೇ ಪ್ರಯಾಣಿಸುವಾಗ ಇವರಿಗೆ ಆಗುವ ಸಂತೋಷ ಆ ನಂದಾ ಪರಮಾನಂದ!ನೋಡಿದವರು, ಇದೇನಪ್ಪಾ ಹಿಂದಿನ ಜನ್ಮದಲ್ಲೇನಾದ್ರೂ ಜಿರಾಫೆಯಾಗಿ ಹುಟ್ಟಿದ್ದೇನೂ ,ಎಂದು ಅನ್ನದೆ ಇರುವರಾ

ಇದು ಕೇಳಲು ತಮಾಷೆಯಾಗಿದ್ದರೂ, ನಿಜಕ್ಕೂ ಇರುವ ತೊಂದರೆ. ಇದು ಹೆಚ್ಚಾಗಿ ಯಾವುದಾದರೂ ದೈಹಿಕ ಕಾಯಿಲೆ, ಮೂಲವ್ಯಾಧಿ (Piles), ಅಥವಾ ಹಿಂದೆ ಎಂದೋ ತೀಕ್ಷ್ಣವಾದ ವಸ್ತುವಿನ ಮೇಲೆ ಕುಳಿತು ತೀವ್ರವಾಗಿ ಪೆಟ್ಟು ಮಾಡಿಕೊಂಡ ಮುಖಾಂತರ ಉಂಟಾಗುವ ಮಾನಸಿಕ ಆಘಾತದಿಂದ (Trauma) ಬರುತ್ತದೆ. ಇನ್ನು ಕೆಲವರಿಗೆ ಕುಳಿತರೆ ತಮಗೆ ಉಸಿರುಗಟ್ಟಿದಂತೆ ಭಾಸವಾಗುತ್ತದೆ.

**2 ಕೆಲಸದ ಹೆಸರಲ್ಲೇ ಜ್ವರ ತರಿಸುವ: ಅರ್ಗೋಫೋಬಿಯಾ**

ನಮ್ಮಲ್ಲಿ ತುಂಬಾ ಜನ ಸೋಮಾರಿಗಳಿಗೆ ಒಂದು ಸುಂದರವಾದ ವೈಜ್ಞಾನಿಕ ಹೆಸರಿದೆ, ಅದೇ ಅರ್ಗೋಫೋಬಿಯಾ (Ergophobia)! ಅಂದರೆ ಕೆಲಸ ಮಾಡುವುದೆಂದರೆ ವಿಪರೀತ ಭಯ. ಇದನ್ನು ಸೋಮಾರಿತನದ ಜೊತೆ ಗೊಂದಲ ಮಾಡಬಾರದು. ಅರ್ಗೋಫೋಬಿಯಾ ಇರುವವರಿಗೆ ಕೆಲಸ ಮಾಡಲು ಮನಸ್ಸಿಲ್ಲ ಎನ್ನುವುದಲ್ಲ; ಕೆಲಸದ ಬಗ್ಗೆ ಅತಿಯಾದ ಆತಂಕ ಮತ್ತು ಭಯದಿಂದ ಅವರು ಕೆಲಸದಿಂದಲೇ ದೂರ ಉಳಿಯುತ್ತಾರೆ. ಆಫೀಸಿನಲ್ಲಿ ಬಾಸ್ ಕೆಲಸ ಕೊಟ್ಟ ತಕ್ಷಣ ತಲೆತಿರುಗಿ ಬೀಳುವ ಕಲೆ ಇವರಿಗೆ ಕರಗತವಾಗಿರುತ್ತದೆ.

ಕೆಲವರು ಇದನ್ನು ನೆಪವಾಗಿ ಬಳಸಬಹುದು! ಆದರೆ ವೈದ್ಯಕೀಯ ರಂಗದಲ್ಲಿ ಇದು ತೀವ್ರವಾದ ಮಾನಸಿಕ ಆತಂಕದ (Anxiety Disorder) ಒಂದು ರೂಪ. ಆಫೀಸಿನಲ್ಲಿ ಸೋಲುವ ಭಯ (Fear of failure), ಸಾರ್ವಜನಿಕವಾಗಿ ಎಲ್ಲರೆದುರು ಪ್ರೆಸೆಂಟೇಶನ್ ನೀಡುವ ಹೆದರಿಕೆ ಅಥವಾ ಬಾಸ್‌ನಿಂದ ತೀವ್ರವಾದ ನಿಂದನೆಗೆ ಒಳಗಾದಾಗ ಉಂಟಾಗುವ ಮಾನಸಿಕ ಆಘಾತದಿಂದ ಜನ ಕೆಲಸಕ್ಕೆ ಹೋಗಲು ತೀವ್ರವಾಗಿ ಹೆದರುತ್ತಾರೆ.

3. ಅಳಿಯಂದಿರ ಜನ್ಮ ವೈರಿ: ಪೆಂತೆರಾಫೋಬಿಯಾ

ಅಳಿಯಂದಿರೆಲ್ಲಾ ಕಿವಿಕೊಟ್ಟು ಕೇಳಿ! ಅತ್ತೆ ಎಂದರೆ ನಡುಕ ಹುಟ್ಟುವುದು ಜಗತ್ತಿನ ಹಳೆಯ ಸಂಪ್ರದಾಯ. ಆದರೆ ಇದಕ್ಕೆ ವಿಜ್ಞಾನದಲ್ಲಿ ಪೆಂತೆರಾಫೋಬಿಯಾ (Pentheraphobia) ಎನ್ನುತ್ತಾರೆ. ಅಂದರೆ ಅತ್ತೆಯನ್ನು ಕಂಡರೆ ಆಗುವ ಅತಿಯಾದ ಭಯ! ಈ ಫೋಬಿಯಾ ಇರುವ ಗಂಡಂದಿರು ಅತ್ತೆ ಮನೆಗೆ ಹೋಗುವ ಮುನ್ನ ಲೈಫ್ ಇನ್ಶೂರೆನ್ಸ್ ಮಾಡಿಸಿಕೊಂಡೇ ಹೋಗುತ್ತಾರೆ. "ನಮ್ಮಮ್ಮ ಬರ್ತಿದ್ದಾರೆ" ಎನ್ನುವ ಹೆಂಡತಿಯ ಒಂದೇ ಒಂದು ವಾಕ್ಯ ಇವರ ಹಾರ್ಟ್ ಬೀಟ್ ಅನ್ನು ರಾಕೆಟ್ ವೇಗಕ್ಕೆ ಕೊಂಡೊಯ್ಯುತ್ತದೆ.

ಜೋಕ್‌ಗಳಲ್ಲಿ ಅತ್ತೆ–ಅಳಿಯನ ಸಮಾಚಾರ ಸಾಮಾನ್ಯ. ಆದರೆ ಈ ಫೋಬಿಯಾ ನಿಜಕ್ಕೂ ಇದೆ! ಅತಿಯಾಗಿ ನಿಯಂತ್ರಿಸುವ (Controlling) ಸ್ವಭಾವದ ಅಥವಾ ಅತಿಯಾಗಿ ನಕಾರಾತ್ಮಕವಾಗಿ ನಡೆದುಕೊಳ್ಳುವ ಅತ್ತೆಯಂದಿರನ್ನು ಎದುರಿಸಲು ಸಾಧ್ಯವಾಗದಿದ್ದಾಗ, ವ್ಯಕ್ತಿಯಲ್ಲಿ ತೀವ್ರ ಆತಂಕದ ಮಟ್ಟ ಹೆಚ್ಚಾಗಿ ಈ ಫೋಬಿಯಾ ಕಾಣಿಸಿಕೊಳ್ಳುತ್ತದೆ.

4. ಸುಂದರಿಯರನ್ನ ಕಂಡರೆ ಬೆವರುವ: ವೆನುಸ್ಟ್ರಾಫೋಬಿಯಾ

ದಾರಿಯಲ್ಲಿ ಒಬ್ಬ ಚಂದದ ಹುಡುಗಿ ನಡೆದು ಬಂದರೆ ಎಲ್ಲರೂ ಕಣ್ಣರಳಿಸಿ ನೋಡುತ್ತಾರೆ. ಆದರೆ ವೆನುಸ್ಟ್ರಾಫೋಬಿಯಾ (Venustraphobia) ಇದ್ದವರ ಕಥೆಯೇ ಬೇರೆ. ಇವರಿಗೆ ಸುಂದರವಾದ ಮಹಿಳೆಯರನ್ನು ಕಂಡರೆ ಮೈಯೆಲ್ಲಾ ನಡುಕ, ಕೈಯೆಲ್ಲಾ ಬೆವರು! ಇವರೇನಾದರೂ ಮಿಸ್ ಆಗಿ ಐಶ್ವರ್ಯಾ ರೈ ಅಥವಾ ಕತ್ರಿನಾ ಕೈಫ್ ಎದುರು ನಿಂತರೆ, ಅಲ್ಲಿಯೇ ಮೂರ್ಛೆ ಹೋಗುವುದು ಗ್ಯಾರಂಟಿ. ಪಾಪ, ಇವರು ಸುಂದರಿಯರನ್ನು ಕಂಡರೆ ಕಣ್ಣು ಕೆಳಗೇ ಇಟ್ಟುಕೊಂಡು ದಾರಿ ಬದಲಾಯಿಸುವವರಾಗಿಬಿಡುತ್ತಾರೆ!

ಇದಕ್ಕೆ ವೈದ್ಯಕೀಯ ಲೋಕದಲ್ಲಿ 'ಕ್ಯಾಲಿಗೈನೋಫೋಬಿಯಾ' ಎಂದೂ ಕರೆಯುತ್ತಾರೆ. ಇದು ಹೆಚ್ಚಾಗಿ ಪುರುಷರಲ್ಲಿ ಕಾಣಿಸಿಕೊಳ್ಳುತ್ತದೆ. ತಮಗಿಂತ ಸುಂದರವಾದ ಮಹಿಳೆಯರ ಎದುರು ಹೋದಾಗ ಕೀಳರಿಮೆ (Low self-esteem), ಅವರಿಂದ ತಿರಸ್ಕಾರಕ್ಕೊಳಗಾಗುವ ತೀವ್ರ ಭಯ (Fear of rejection), ಅಥವಾ ಹಿಂದೆ ಪ್ರೇಮ ವೈಫಲ್ಯದಿಂದ ಉಂಟಾದ ಆಘಾತ ಇದರ ಹಿಂದಿನ ಮುಖ್ಯ ಕಾರಣಗಳಾಗಿರುತ್ತವೆ.

5. ಗಡ್ಡದ ಗಮ್ಮತ್ತು ಕೆಡಿಸುವ: ಪೋಗೋನೋಫೋಬಿಯಾ

ಇತ್ತೀಚಿನ ದಿನಗಳಲ್ಲಿ ಯುವಕರೆಲ್ಲಾ 'ಬಿಯರ್ಡ್ ಲುಕ್' (ಗಡ್ಡ) ಬಿಟ್ಟು ಹೀರೋ ತರ ತಿರುಗಾಡುತ್ತಾರೆ. ಆದರೆ ಈ ಪೋಗೋನೋಫೋಬಿಯಾ (Pogonophobia) ಇರೋರಿಗೆ ಗಡ್ಡ ಕಂಡರೆ ಸಾಕು, ಭೂತ ಕಂಡಂತೆ ಹೆದರುತ್ತಾರೆ. ಇವರ ಎದುರು ಯಾರಾದರೂ ದಟ್ಟವಾದ ಗಡ್ಡ ಬಿಟ್ಟುಕೊಂಡು ಬಂದರೆ, ಇವರು ಹನುಮಂತನ ಜಪ ಮಾಡಲು ಶುರು ಮಾಡುತ್ತಾರೆ. ಅವರ ಮನಸ್ಸಿನಲ್ಲಿ ಗಡ್ಡಧಾರಿಗಳ ಬಗ್ಗೆ ಅಪಾಯದ ಭಾವನೆ ರೂಪುಗೊಳ್ಳಬಹುದು.

ಇದು ಇತಿಹಾಸದಿಂದಲೂ ನಡೆದುಬಂದಿರುವ ಒಂದು ಭಯ. ಹಿಂದೆ ಕೆಲವು ಸಂಸ್ಕೃತಿಗಳಲ್ಲಿ ಗಡ್ಡಧಾರಣೆ ಕಡ್ಡಾಯವಾಗಿತ್ತು ಅಥವಾ ಕೆಲವು ಕಟುಕರು, ದರೋಡೆಕೋರರು ಗಡ್ಡ ಬಿಟ್ಟಿರುತ್ತಿದ್ದರು ಎಂಬ ಕಲ್ಪನೆ ಇತಿಹಾಸದಲ್ಲಿದೆ. ಬಾಲ್ಯದಲ್ಲಿ ಗಡ್ಡವಿರುವ ಯಾರಾದರೂ ಮಗುವನ್ನು ತೀವ್ರವಾಗಿ ಹೆದರಿಸಿದ್ದರೆ, ಆ ಮಗು ದೊಡ್ಡದಾದ ಮೇಲೆಯೂ ಗಡ್ಡ ಕಂಡರೆ ತೀವ್ರವಾಗಿ ಬೆವರುತ್ತದೆ.

6. ಎಲ್ಲದಕ್ಕಿಂತ ದೊಡ್ಡ ಭಯ: ಫೋಬೋಫೋಬಿಯಾ

ಕೊನೆಯದಾಗಿ, ಎಲ್ಲಾ ಫೋಬಿಯಾಗಳಿಗೂ ಬಾಸ್ ಒಂದಿದೆ ಅದೇ ಫೋಬೋಫೋಬಿಯಾ (Phobophobia)! ಇದರ ಅರ್ಥವೇನು ಗೊತ್ತೇ "ನನಗೆ ಯಾವುದಾದರೂ ಫೋಬಿಯಾ ಬಂದುಬಿಡುತ್ತೇನೋ" ಎಂದು ಹೆದರುವುದು! ಅಂದರೆ ಭಯದ ಬಗ್ಗೆಯೇ ಭಯ ಪಡುವುದು. ಇವರ ಕಥೆ ಹೆಂಗಿರುತ್ತೆ ಅಂದರೆ, ಏನೂ ತೊಂದರೆ ಇಲ್ಲದಿದ್ದರೂ "ನನಗೆ ಯಾಕೆ ಏನೂ ತೊಂದರೆ ಆಗ್ತಿಲ್ಲ " ಅಂತ ಯೋಚನೆ ಮಾಡಿ ಹಾರ್ಟ್ ಅಟ್ಯಾಕ್ ಮಾಡಿಕೊಳ್ಳುವ ರೇಂಜ್ ಇವರದ್ದು!

ಇದು ವೈದ್ಯಕೀಯ ಜಗತ್ತಿನಲ್ಲಿ ಅತ್ಯಂತ ಗಂಭೀರವಾಗಿ ಪರಿಗಣಿಸಲ್ಪಡುವ ತೊಂದರೆ. ತೀವ್ರವಾದ 'ಆತಂಕದ ಕಾಯಿಲೆ' (Panic Disorder) ಇರುವವರಲ್ಲಿ ಇದು ಕಾಣಿಸಿಕೊಳ್ಳುತ್ತದೆ. "ನನಗೆ ಮತ್ತೆ ಎಲ್ಲಿ ಆ ಪ್ಯಾನಿಕ್ ಅಟ್ಯಾಕ್ (Panic Attack) ಆಗಿಬಿಡುತ್ತದೋ, ನಾನು ಎಲ್ಲರೆದುರು ಅವಮಾನಕ್ಕೆ ಈಡಾಗುತ್ತೇನೋ" ಎಂದು ದಿನದ 24 ಗಂಟೆಯೂ ಹೆದರುತ್ತಾ ಬದುಕುವ ಪರಿಸ್ಥಿತಿ ಇದು.

ಅತ್ತೆಗೆ ಹೆದರುವುದಕ್ಕೆ ಒಂದು ಫೋಬಿಯಾ ಇರುವಾಗ, ದಿನದ 24 ಗಂಟೆಯೂ ಜೊತೆಗೇ ಇರಬೇಕಾದ ಗಂಡ ಅಥವಾ ಹೆಂಡತಿಗೆ ಹೆದರುವುದಕ್ಕೆ ಫೋಬಿಯಾ ಇರಲೇಬೇಕಲ್ಲವೇ

ಖಂಡಿತವಾಗಿಯೂ ಇದೆ! ವೈದ್ಯಕೀಯ ಮತ್ತು ಮನೋವಿಜ್ಞಾನ ರಂಗದಲ್ಲಿ ಗಂಡ ಮತ್ತು ಹೆಂಡತಿಯ ಪರಸ್ಪರ ಭಯಕ್ಕೂ ಪ್ರತ್ಯೇಕವಾದ ಹೆಸರುಗಳಿವೆ. ಆದರೆ, ಇಲ್ಲಿ ಒಂದು ಸಣ್ಣ ಟ್ವಿಸ್ಟ್ ಇದೆ. ಮನೋವಿಜ್ಞಾನದಲ್ಲಿ ಇವುಗಳನ್ನು ಕೇವಲ ವೈವಾಹಿಕ ಭಯ ಎನ್ನುವುದಕ್ಕಿಂತ, ವಿಶಾಲವಾದ ಅರ್ಥದಲ್ಲಿ ಗುರುತಿಸಲಾಗುತ್ತದೆ:

1. ಗಂಡ ಹೆಂಡತಿಗೆ ಹೆದರುವುದು (Fear of Wife)

ಸಾಮಾನ್ಯವಾಗಿ ಹಾಸ್ಯ ನಾಟಕಗಳಲ್ಲಿ, ಜೋಕ್‌ಗಳಲ್ಲಿ ಗಂಡ ಹೆಂಡತಿಗೆ ಹೆದರುವ 'ಪುಕ್ಕಲು ಗಂಡ'ನ ಕಥೆಗಳನ್ನು ನಾವು ಕೇಳಿರುತ್ತೇವೆ. ಆದರೆ ಇದು ನಿಜವಾದ ಫೋಬಿಯಾ ಆದಾಗ ಅದನ್ನು ಗೈನೋಫೋಬಿಯಾ (Gynophobia) ಅಥವಾ ಅತ್ಯಂತ ನಿರ್ದಿಷ್ಟವಾಗಿ ಫೆಮಿನಿಫೋಬಿಯಾ (Feminiphobia) ಎಂದು ಕರೆಯಬಹುದು. ಇದು ಕೇವಲ ಸ್ವಂತ ಹೆಂಡತಿಗೆ ಮಾತ್ರವಲ್ಲದೆ, ಒಟ್ಟಾರೆ ಮಹಿಳೆಯರ ಬಗ್ಗೆ ಇರುವ ತೀವ್ರವಾದ ಭಯ.

ವೈದ್ಯಕೀಯ ಹಿನ್ನೆಲೆ: ಮದುವೆಯಾದ ಮೇಲೆ ಹೆಂಡತಿಯ ಅತಿಯಾದ ಕೋಪ, ನಿರಂತರ ಜಗಳ, ಅಥವಾ ಮಾನಸಿಕವಾಗಿ ದೌರ್ಜನ್ಯ ಎದುರಿಸುವ ಪುರುಷರಲ್ಲಿ ತಮಗರಿವಿಲ್ಲದಂತೆಯೇ ಹೆಂಡತಿಯನ್ನು ಕಂಡರೆ ಒಂದು ರೀತಿಯ ತೀವ್ರ ಆತಂಕ (Anxiety) ಶುರುವಾಗುತ್ತದೆ. ಮನೆಗೆ ಹೋಗಲು ಹೆದರುವುದು, ಹೆಂಡತಿಯ ಫೋನ್ ಕರೆ ಬಂದರೆ ಕೈ ನಡುಗುವುದು ಇದರ ಲಕ್ಷಣಗಳು!

2. ಹೆಂಡತಿ ಗಂಡನಿಗೆ ಹೆದರುವುದು (Fear of Husband)

ಹೆಂಡತಿ ಗಂಡನಿಗೆ ಹೆದರುವುದನ್ನು ವೈದ್ಯಕೀಯ ಲೋಕದಲ್ಲಿ ಆಂಡ್ರೋಫೋಬಿಯಾ (Androphobia) ಎಂದು ಕರೆಯುತ್ತಾರೆ.ಇದು ಒಟ್ಟಾರೆಯಾಗಿ ಪುರುಷರನ್ನು ಕಂಡರೆ ಆಗುವ ವಿಪರೀತ ಭಯ.

ವೈದ್ಯಕೀಯ ಹಿನ್ನೆಲೆ: ಪುರುಷ ಪ್ರಧಾನ ಸಮಾಜದಲ್ಲಿ ಅಥವಾ ಬಾಲ್ಯದಲ್ಲಿ ತಂದೆಯ ಕ್ರೂರ ವರ್ತನೆಯನ್ನು ನೋಡಿ ಬೆಳೆದ ಹೆಣ್ಣುಮಕ್ಕಳಲ್ಲಿ ಇದು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಮದುವೆಯಾದ ನಂತರ ಗಂಡನ ಕುಡಿತ, ದೈಹಿಕ ಅಥವಾ ಮಾನಸಿಕ ದೌರ್ಜನ್ಯ (Domestic Violence), ಕೋಪದ ಕೈಗೆ ಬುದ್ಧಿ ಕೊಡುವ ಸ್ವಭಾವದಿಂದಾಗಿ ಹೆಂಡತಿಯಲ್ಲಿ ಗಂಡನ ಪ್ರತಿಯೊಂದು ನಡವಳಿಕೆಯೂ ತೀವ್ರ ಭಯವನ್ನು ಹುಟ್ಟಿಸುತ್ತದೆ.

3. ಮದುವೆ ಮತ್ತು ದಾಂಪತ್ಯಕ್ಕೇ ಹೆದರುವ ಮಹಾ ಫೋಬಿಯಾ!

ಗಂಡ–ಹೆಂಡತಿಯ ಭಯ ಒಂದೆಡೆಯಾದರೆ, ಈ ಮದುವೆ ಎನ್ನುವ ವ್ಯವಸ್ಥೆಯ ಹೆಸರನ್ನು ಕೇಳಿದರೆನೇ ಮೈಲುದ್ದ ಓಡುವ ಜನರಿಗಾಗಿಯೇ ಒಂದು ಫೋಬಿಯಾ ಇದೆ. ಅದೇ ಗ್ಯಾಮೋಫೋಬಿಯಾ (Gamophobia)!

ಗ್ಯಾಮೋಫೋಬಿಯಾ (Fear of Marriage/Commitment): ಮದುವೆಯಾಗಿ ಜವಾಬ್ದಾರಿಗಳನ್ನು ಹೊರಬೇಕಲ್ಲಾ, ವೈವಾಹಿಕ ಜೀವನಕ್ಕೆ ಕಾಲಿಟ್ಟರೆ ನನ್ನ ಸ್ವಾತಂತ್ರ್ಯ ಹೊರಟುಹೋಗುತ್ತದೆ, ಅಥವಾ ಹೆತ್ತವರ ದಾಂಪತ್ಯ ವಿರಸವನ್ನು ನೋಡಿ "ನನಗೂ ಮದುವೆ ಬೇಡಪ್ಪಾ" ಎಂದು ಮದುವೆಯ ಹೆಸರೆತ್ತಿದರೆನೇ ಬೆವರುವ ಯುವಜನಾಂಗಕ್ಕೆ ಈ ಫೋಬಿಯಾ ಇರುತ್ತದೆ.ಇತ್ತೀಚೆಗೆ ಇವರ ಸಂಖ್ಯೆ ವಿಪರೀತವಾಗಿ ಹೆಚ್ಚಿದೆ ಎನ್ನಲೇಬೇಕು.

ದಾಂಪತ್ಯದಲ್ಲಿ ಪರಸ್ಪರ ಗೌರವ ಮತ್ತು ಪ್ರೀತಿಯಿಂದ ಇರುವ ಹೆದರಿಕೆ (ಮರ್ಯಾದೆ) ಆರೋಗ್ಯಕರ. ಆದರೆ ಅದುವೇ 'ಫೋಬಿಯಾ' ಆಗಿ ಬದಲಾಗಿ, ಒಬ್ಬರನ್ನು ಕಂಡರೆ ಇನ್ನೊಬ್ಬರ ಹೃದಯ ಬಡಿತ ಹೆಚ್ಚಾಗುವಂತಾದರೆ ಖಂಡಿತವಾಗಿಯೂ ಅಲ್ಲಿ ಕೌನ್ಸಲಿಂಗ್ (Couples Counseling) ಅಗತ್ಯವಿರುತ್ತದೆ!

ಇಷ್ಟಲ್ಲದೇ, ಪಾಪ ಮತ್ತು ಪುಣ್ಯದ ಪರಿಕಲ್ಪನೆಗಳಿಗೆ ವಿಪರೀತವಾಗಿ ಹೆದರುವ ಜನ ಜಗತ್ತಿನಲ್ಲಿ ಇದ್ದಾರೆ. ಇವುಗಳನ್ನು ಕೇವಲ ಧಾರ್ಮಿಕ ನಂಬಿಕೆ ಅಥವಾ ಕಲ್ಪನೆ ಎಂದು ನಾವು ಭಾವಿಸಿದರೆ, ಮನೋವಿಜ್ಞಾನ ಲೋಕದಲ್ಲಿ ಇವುಗಳ ಹಿನ್ನೆಲೆಯಲ್ಲಿ ಕಾಡುವ ತೀವ್ರವಾದ ಫೋಬಿಯಾಗಳನ್ನು ಗುರುತಿಸಲಾಗಿದೆ.

1. ಪಾಪಕ್ಕೆ ಹೆದರುವಿಕೆ: ಪೆಕಟೋಫೋಬಿಯಾ (Peccatophobia)

ತಾವು ಏನಾದರೂ ತಪ್ಪು ಮಾಡಿಬಿಡುತ್ತೇನೋ, ತಮ್ಮಿಂದ ಯಾರಿಗಾದರೂ ಅನ್ಯಾಯವಾಗಿಬಿಡುತ್ತೇನೋ ಅಥವಾ ತಾವು ಮಾಡಿದ ಸಣ್ಣ ತಪ್ಪಿಗೂ ದೇವರ ಕೋಪಕ್ಕೆ ತುತ್ತಾಗಿ ನರಕ ಸೇರಬೇಕಾಗುತ್ತದೋ ಎನ್ನುವ ವಿಪರೀತ ಭಯಕ್ಕೆ ಪೆಕ'ಟೋಫೋಬಿಯಾ/ಪೆಕಾಟೋಫೋಬಿಯಾ ಎನ್ನುತ್ತಾರೆ.

ಈ ಫೋಬಿಯಾ ಇರುವವರು ದಿನದ 24 ಗಂಟೆಯೂ ತಾವು ಆಡುವ ಮಾತು, ಮಾಡುವ ಕೆಲಸಗಳನ್ನು ಅತಿಯಾಗಿ ಪರೀಕ್ಷಿಸಿಕೊಳ್ಳುತ್ತಾರೆ. ನಡೆದಾಡುವಾಗ ಸಣ್ಣ ಇರುವೆ ಸತ್ತರೂ ತಮಗೆ ಮಹಾಪಾಪ ಅಂಟಿಕೊಂಡಿತು ಎಂದು ತೀವ್ರವಾಗಿ ಕೊರಗುತ್ತಾರೆ.

ಮನೋವಿಜ್ಞಾನದಲ್ಲಿ ಇದು OCD (Obsessive-Compulsive Disorder) ನ ಒಂದು ರೂಪವಾಗಿ ಕಾಣಿಸಿಕೊಳ್ಳುತ್ತದೆ. ಇದನ್ನು 'ಸ್ಕ್ರುಪ್ಯುಲಾಸಿಟಿ' (Scrupulosity) ಎಂದೂ ಕರೆಯುತ್ತಾರೆ. ಇಲ್ಲಿ ವ್ಯಕ್ತಿಗೆ ಧಾರ್ಮಿಕ ಮತ್ತು ನೈತಿಕ ವಿಚಾರಗಳಲ್ಲಿ ತೀವ್ರವಾದ ಅಪರಾಧ ಪ್ರಜ್ಞೆ (Guilt) ಕಾಡುತ್ತಿರುತ್ತದೆ.

2. ಪುಣ್ಯಕ್ಕೆ ಅಥವಾ ಒಳ್ಳೆಯದಕ್ಕೆ ಹೆದರುವಿಕೆ: ಚೆರೋಫೋಬಿಯಾ (Cherophobia)

ಇದು ಕೇಳಲು ವಿಚಿತ್ರ ಎನಿಸಬಹುದು "ಒಳ್ಳೆಯದಕ್ಕೆ ಅಥವಾ ಪುಣ್ಯದ ಕೆಲಸಕ್ಕೆ ಯಾರಾದರೂ ಹೆದರುತ್ತಾರಾ " ಎಂದು. ಆದರೆ ವೈದ್ಯಕೀಯ ಜಗತ್ತಿನಲ್ಲಿ ಚೆರೋಫೋಬಿಯಾ ಎಂದರೆ "ಸಂತೋಷ ಅಥವಾ ಒಳ್ಳೆಯ ಘಟನೆಗಳ ಬಗ್ಗೆ ಇರುವ ಅತಿಯಾದ ಭಯ" (Fear of Happiness).

ಇವರ ಜೀವನದಲ್ಲಿ ಏನಾದರೂ ಒಳ್ಳೆಯದಾದರೆ ಅಥವಾ ತಾವು ಯಾವುದಾದರೂ ಪುಣ್ಯದ/ಶುಭ ಕೆಲಸದಲ್ಲಿ ಭಾಗಿಯಾದರೆ ಇವರಿಗೆ ಸಂತೋಷವಾಗುವ ಬದಲು ಭಯ ಶುರುವಾಗುತ್ತದೆ! "ಈಗ ನನಗೆ ತುಂಬಾ ಒಳ್ಳೆಯದಾಗುತ್ತಿದೆ, ಇದರ ಬೆನ್ನಲ್ಲೇ ನನಗೆ ಯಾವುದಾದರೂ ದೊಡ್ಡ ಕಷ್ಟ ಅಥವಾ ಕೆಟ್ಟದ್ದು ಕಾದಿದೆ" ಎಂದು ಇವರು ನಂಬುತ್ತಾರೆ.

ಈ ಹಿಂದೆ ಜೀವನದಲ್ಲಿ ತುಂಬಾ ಸಂತೋಷವಾಗಿದ್ದ ಸಂದರ್ಭದಲ್ಲೇ ಹಠಾತ್ತನೆ ದೊಡ್ಡ ದುರಂತ ಅಥವಾ ಆಘಾತವನ್ನು ಎದುರಿಸಿದ ಜನರಲ್ಲಿ ಈ ಫೋಬಿಯಾ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

3. ದೇವರಿಗೆ ಹೆದರುವಿಕೆ: ಥಿಯೋಫೋಬಿಯಾ (Theophobia)

ಪಾಪ–ಪುಣ್ಯಗಳ ಲೆಕ್ಕ ಇಡುವ ಆ ದೇವರಿಗೇ ಹೆದರುವ ಜನರಿಗೂ ಒಂದು ಫೋಬಿಯಾ ಇದೆ, ಅದೇ ಥಿಯೋಫೋಬಿಯಾ. ಇವರಿಗೆ ದೇವರ ಹೆಸರು ಕೇಳಿದರೆ ಅಥವಾ ಧಾರ್ಮಿಕ ಸ್ಥಳಗಳಿಗೆ ಹೋದರೆ ತೀವ್ರ ಆತಂಕ ಕಾಡುತ್ತದೆ. ದೇವರು ತಮಗೆ ತಕ್ಷಣವೇ ಶಿಕ್ಷೆ ನೀಡಿಬಿಡುತ್ತಾನೆ ಎಂಬ ಅದೃಶ್ಯ ಭಯ ಇವರನ್ನು ಕಾಡುತ್ತದೆ.

ನಮ್ಮ ಸಮಾಜದಲ್ಲಿ "ಪಾಪಕ್ಕೆ ಹೆದರಿ ಬದುಕು" ಎಂದು ಹಿರಿಯರು ಹೇಳುತ್ತಾರೆ. ಆದರೆ ಈ ಪೆಕಟೋಫೋಬಿಯಾ ಇರುವವರು ಎಷ್ಟು ಹೆದರುತ್ತಾರೆ ಎಂದರೆ, ಮಿಸ್ ಆಗಿ ಸುಳ್ಳು ಹೇಳಿದರೆ ನಾಲಿಗೆ ಸೀಳಿಹೋಗುತ್ತದೆ ಎಂದೋ ಅಥವಾ ಪಕ್ಕದ ಮನೆಯವರ ಗಿಡದಿಂದ ಒಂದು ಹೂವು ಕಿತ್ತರೂ ಮುಂದಿನ ಜನ್ಮದಲ್ಲಿ ಹುಳವಾಗಿ ಹುಟ್ಟುತ್ತೇವೆಂದೋ ನಡುಗುತ್ತಿರುತ್ತಾರೆ!

ಪಾಪ–ಪುಣ್ಯದ ಭಯ ನಿಯಂತ್ರಣದಲ್ಲಿದ್ದರೆ ಅದು ಮನುಷ್ಯನನ್ನು ಸನ್ಮಾರ್ಗದಲ್ಲಿಡುತ್ತದೆ, ಆದರೆ ಅದುವೇ ಫೋಬಿಯಾ ಆದಾಗ ಬದುಕೇ ನರಕವಾಗಿಬಿಡುತ್ತದೆ!

ಕೊನೆಯದಾಗಿ ಹೇಳಬೇಕೆಂದರೆ, ಭಯ ಎನ್ನುವುದು ಮನುಷ್ಯನ ಮನಸ್ಸಿನ ಒಂದು ಅದೃಶ್ಯ ಗೋಡೆ. ಜಗತ್ತಿನ ಜನ ಇಂತಹ ವಿಧವಿಧದ ವಿಚಿತ್ರ ಭಯಗಳ ಜೊತೆ ನಿತ್ಯವೂ ಕುಸ್ತಿ ಆಡುತ್ತಾ ಸಂಸಾರ ಮಾಡುತ್ತಿದ್ದಾರೆ. ಕೆಲವರಿಗೆ ಗಡ್ಡ ಕಂಡರೆ ಭಯವಾದರೆ, ಇನ್ನು ಕೆಲವರಿಗೆ ಅತ್ತೆಯ ದರ್ಶನವೇ ಅನಿವಾರ್ಯ ಯುದ್ಧದಂತೆ ಭಾಸವಾಗುತ್ತದೆ! ನಮ್ಮ ಅದೃಷ್ಟಕ್ಕೆ ನಮಗೆ ಇಂತಹ ವಿಚಿತ್ರ ಫೋಬಿಯಾಗಳಿಲ್ಲ ಎಂದು ನಾವು ನಿಟ್ಟುಸಿರು ಬಿಡಬಹುದು.ಆದರೆ, ಮಧ್ಯಮವರ್ಗದ ನಮಗೆಲ್ಲಾ ಒಂದೇ ಒಂದು ಸಾರ್ವಕಾಲಿಕ ಫೋಬಿಯಾ ತಿಂಗಳ ಕೊನೆಯಲ್ಲಿ ಜೇಬು ಖಾಲಿಯಾಗುವ ನೋ–ಮನಿ ಫೋಬಿಯಾ !

ಆದರೆ ಈ ಎಲ್ಲಾ ಫೋಬಿಯಾಗಳಿಗೂ ಪ್ರಕೃತಿ ಕೊಟ್ಟಿರುವ ಅತ್ಯಂತ ದೊಡ್ಡ ಮತ್ತು ಉಚಿತವಾದ ಚಿಕಿತ್ಸೆ ಎಂದರೆ ಅದು ನಗು .ನಗು ಮನಸ್ಸನ್ನು ಹಗುರಗೊಳಿಸಲು ಸಹಾಯ ಮಾಡುತ್ತದೆ. ಆದರೆ ತೀವ್ರ ಫೋಬಿಯಾ ಇದ್ದರೆ ಮನೋವೈದ್ಯರು ಅಥವಾ ಮನೋವಿಜ್ಞಾನಿಗಳ ಸಲಹೆ ಪಡೆಯುವುದು ಅತ್ಯುತ್ತಮ.ಯಾರಿಗೆ ಗೊತ್ತು, ದಿನೇ ದಿನೇ ಹೆಚ್ಚಾಗುತ್ತಿರುವ ಈ ವಿಚಿತ್ರ ಫೋಬಿಯಾಗಳನ್ನು ನೋಡಿ, ನಾಳೆ ಸರ್ಕಾರ ಕೆಲಸ ಮಾಡದವರಿಗೆ (ಅರ್ಗೋಫೋಬಿಯಾ) ಅಥವಾ ಅತ್ತೆಗೆ ಹೆದರುವವರಿಗೆ (ಪೆಂತೆರಾಫೋಬಿಯಾ) "ಫೋಬಿಯಾ ಕೋಟಾ" ಅಂತ ಏನಾದರೂ ಹೊಸ ರಿಸರ್ವೇಶನ್ ಕೊಟ್ಟರೂ ಕೊಡಬಹುದು! ಅಲ್ಲಿಯವರೆಗೆ ಮನಸಾರೆ ನಗುತ್ತಾ, ಭಯವನ್ನು ದೂರವಿಟ್ಟು ನೆಮ್ಮದಿಯಿಂದ ಬದುಕೋಣ, ಅಲ್ವೇ ವಂದನೆಗಳು.





# ಅಪರೂಪದ ಪುಷ್ಪ ಬ್ರಹ್ಮಕಮಲ



ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಹಿಂದೂಧರ್ಮದಲ್ಲಿ ಬ್ರಹ್ಮಕಮಲವು ಅತ್ಯಂತ ಪವಿತ್ರವಾದ ಮತ್ತು ದೈವಿಕವೆಂದು ಪರಿಗಣಿಸಲ್ಪಟ್ಟ ಅಪರೂಪದ ಹೂವೆಂದು ಹೇಳಬಹುದು.ಇದು ಸಾಮಾನ್ಯವಾಗಿ ರಾತ್ರಿಯ ಸಮಯದಲ್ಲಿ ಮಾತ್ರ ಅರಳುತ್ತದೆ.ಸೂರ್ಯೋದಯದ ಮೊದಲು ಬಾಡುತ್ತದೆ

ವೈಜ್ಞಾನಿಕವಾಗಿ ಹಿಮಾಲಯದ ಮೂಲದ ಅಲ್ಪೆನ್ ಹೂವನ್ನು 'ಸಸೆರಿಯಾ ಒಬೋವೆಲ್ಟಾ' ಎನ್ನುತ್ತಾರೆ. ಅಲ್ಲದೇ 'ಕ್ವೀನ ಆಫ ದಿ ನೈಟ' ನಿಶಾಗಂಧಿ,ಬ್ರಹ್ಮಕಮಲವೆಂದೂ ಕರೆಯಲಾಗುತ್ತಿದೆ.ಈ ಹೂವು ಬ್ರಹ್ಮನಿಗೆ ಹಾಗೂ ಶಿವನಿಗೆ ಪ್ರೀಯವಾದದ್ದಾಗಿದೆ. ಇದನ್ನು ರಾತ್ರಿಯ ವೇಳೆ ಅರಳುವದನ್ನು ನೋಡುವದು ಅತ್ಯಂತ ಶುಭ ಹಾಗೂ ಅದೃಷ್ಟದ ಸಂಕೇತವೆಂದು ಹೇಳಲಾಗುತ್ತದೆ. ಹೂವು ಅರಳಿದಾಗ ಪೂಜಿಸುವದರಿಂದ ಇಷ್ಟಾರ್ಥಗಳು ನೆರವೇರುತ್ತವೆ ಎಂಬ ನಂಬಿಕೆ ನಮ್ಮಲ್ಲಿದೆ.ಇದರ ಸೌಂದರ್ಯ ಮತ್ತು ಪರಿಮಳ ಮನಸ್ಸಿಗೆ ಮುದ ನೀಡುತ್ತದೆ.ಸುಂದರವಾದ ಬಿಳಿಬಣ್ಣ ಹಾಗೂ ಸುವಾಸನೆ ಹೊಂದಿದ ಇದು ಹಿಂದೂಧರ್ಮದಲ್ಲಿ ಬ್ರಹ್ಮದೇವರಿಗೆ ಅರ್ಪಿತವಾದ ವಿಶೇಷ ಹೂವೆಂದು ನಂಬಲಾಗಿದೆ.ಬದ್ರಿನಾಥದಲ್ಲಿ ಅಲ್ಲದೇ ಹಿಮಾಲಯದ ಪುಣ್ಯ ಕ್ಷೇತ್ರಗಳಲ್ಲಿ ಇದನ್ನು ವಿಶೇಷ ಪೂಜೆಗೆ ಬಳಸಲಾಗುತ್ತದೆ.ಬ್ರಹ್ಮ ಕಮಲವು ಹೆಚ್ಚಾಗಿ ಹುಣ್ಣಿಮೆ ರಾತ್ರಿ ಅರಳುತ್ತದೆ. ಶಿವನು ಗಣೇಶನಿಗೆ ಮರುಜೀವ ನೀಡಿದಾಗ ಬ್ರಹ್ಮದೇವ ಸಂತಸಗೊಂಡು ಆನಂದಭಾಷ್ಪ ಸುರಿಸಿದಾಗ ಅದರಿಂದ ಸೃಷ್ಟಿಯಾದ ಹೂವೇ ಈ ಬ್ರಹ್ಮಕಮಲವಾಗಿದೆ.ಈ ಅಧ್ಯಾತ್ಮಿಕ ಪುಷ್ಪವನ್ನು ಕೇದಾರನಾಥದಲ್ಲಿ ಶಿವನಿಗೆ ,ಬದರಿನಾಥದಲ್ಲಿ ವಿಷ್ಣುವಿಗೆ ಅರ್ಪಿಸಲಾಗುತ್ತದೆ.ಈ ಹೂವಿಗೆ ನಮ್ಮ ಅದೃಷ್ಟವನ್ನು ಬದಲಾಯಿಸುವ ಸಮೃದ್ಧಿಯನ್ನು ಕರುಣಿಸುವ ಶಕ್ತಿಯಿದೆ.

ಪೌರಾಣಿಕ ಹಿನ್ನೆಲೆ


ಋಗ್ವೇದದಲ್ಲಿ ಬ್ರಹ್ಮಕಮಲ ಹೂವನ್ನು ಶುದ್ಧತೆಯ ಸಂಕೇತವೆಂದು ಗುರುತಿಸಲಾಗಿದೆ.ಒಮ್ಮೆ ಬ್ರಹ್ಮದೇವರು ಕಮಲದ ಮೇಲೆ ಮಲಗಿ ವಿಶ್ರಾಂತಿ ಪಡೆದುಕೊಳ್ಳುತ್ತಿರುವಾಗ ಎಚ್ಚರವಾದ ಬಳಿಕ ಆ ಹೂವನ್ನು ನೋಡಿದಾಗ ಬಿಳಿಬಣ್ಣದಲ್ಲಿ ಕಾಣಿಸತೊಡಗಿತು.ರಾಕ್ಷಸರು ವಿಷ್ಣುವಿನ ಪತ್ನಿ ಲಕ್ಷ್ಮಿ ದೇವಿಯನ್ನು ಕೊಂದ ನಂತರ ವಿಷ್ಣು ಲಕ್ಷ್ಮಿ ಯನ್ನು ರಕ್ಷಿಸಲು ಬ್ರಹ್ಮಕಮಲ ಬಳಸಿದನು ಎನ್ನುವ ನಂಬಿಕೆಯಿದೆ.ಈ ಹೂವನ್ನು ಅನೇಕ ಅಧ್ಯಾತ್ಮಿಕ ಜನರು ದೈವಿಕ ಉಪಸ್ಥಿತಿ ಸ್ವಾಗತಿಸಲು ಈ ಸಸ್ಯವನ್ನು ತಮ್ಮ ಮನೆಯಲ್ಲಿ ಇಟ್ಟುಕೊಂಡಿರುತ್ತಾರೆ. ಮನೆಯಲ್ಲಿ ಬ್ರಹ್ಮಕಮಲ ಹೂವನ್ನು ಇಟ್ಟುಕೊಳ್ಳುವದರಿಂದ ದೇವರ ಆಶೀರ್ವಾದವನ್ನು ಮನೆಗೆ ಆಹ್ವಾನಿಸುತ್ತದೆ ಎಂಬ ನಂಬಿಕೆ ಇದೆ. ಅನೇಕ ವಿಷ್ಣು ದೇವಾಲಯದಲ್ಲಿ ,ಯಜ್ಞ ಮತ್ತು ಸಮಾರಂಭಗಳಿಗೆ ಬ್ರಹ್ಮಕಮಲ ಹೂ ಅಗತ್ಯವೆಂದು ಋಗ್ವೇದದಲ್ಲಿ ಉಲ್ಲೇಖಿಸಲಾಗಿದೆ. ಇದು ಸಕಾರಾತ್ಮಕತೆ,ಸಮೃದ್ಧಿಯನ್ನು ಆಹ್ವಾನಿಸುತ್ತದೆ.ಈ ಅಪರೂಪದ ಹೂ ನಮ್ಮ ಆತ್ಮ ಶುದ್ಧೀಕರಿಸುವ ಮತ್ತು ಆಂತರಿಕ ಶಾಂತಿಯನ್ನು ಉತ್ತೇಜಿಸುವ ಶಕ್ತಿ ಹೊಂದಿದೆ ಎಂಬ ನಂಬಿಕೆ ನಮ್ಮಲ್ಲಿದೆ.

ಸರ್ವೇ ಜನ ಸುಖಿನೋ ಭವಂತು.

# ಹದಿಹರೆಯ



ಸೋಮೇಶ್ ಕಣದೂರ್ ಬೆಂಗಳೂರು



ಹದಿಹರೆಯ ಎಲ್ಲೋ ಕೇಳಿದ ಪದ ಅಂದುಕೊಳ್ಳುವ ಬದಲಿಗೆ ನಾವು ನೀವೆಲ್ಲ ಬಾಲ್ಯ ಜೀವನ ದಿಂದ ಪ್ರೌಢವಸ್ಥೆಗೆ ಪರಿವರ್ತನೆ ಹೊಂದಿದ ಸಮಯ ಈ ಸಮಯದಲ್ಲಿ ಮಕ್ಕಳ ದೇಹದಲ್ಲಿ ಮಾನಸಿಕ ವೃದ್ಧಿಯ ಜೊತೆಗೆ ಮೆದುಳಿನ ಬೆಳವಣಿಗೆ, ಹಾಗೂ ಮಕ್ಕಳ

ವಯಕ್ತಿಕ ಜೀವನದಲ್ಲಿ ಬದಲಾವಣೆ ಕಾಣುವ ಸಮಯ 13ರಿಂದ 19 ವಯಸ್ಸಿನ ನಡುವೆ ನಡೆಯುವ ಪ್ರಕ್ರಿಯೆ ಇದು ಮಕ್ಕಳ ಬದುಕಿನಲ್ಲಿ ಸಾಮಾಜಿಕ ಜೀವನಕ್ಕೆ ಒಳಪಡುವ ಬದಲಾವಣೆ ಕಾಣಬಹುದು ಜೊತೆಗೆ ನಡತೆಯಲ್ಲಿ ಪರಿವರ್ತನೆಯ ಸಮಯ,

ಮಕ್ಕಳ ಬದುಕಿನಲ್ಲಿ ಹೊಸತನಕ್ಕೆ ತವಕಿಸುವ ಹೊಸ ಅಲೆಯ ಹುಟ್ಟುವ ವಸಂತ ಕಾಲ....

ಈಗಿನ ಕಾಲಘಟ್ಟಕ್ಕೆ ಹೇಳಬೇಕೆಂದರೆ ಸಮಾಜದಲ್ಲಿ ದಿನೇ ದಿನೇ ಹೊಸ ಯುಗ ಸೃಷ್ಟಿಯಂತೆ ನೋಡಬಹುದಾಗಿದೆ, ಮನಸ್ಸನು ಮರುಳು ಮಾಡುವ ವಿವಿಧ ಸಾಮಾಜಿಕ ಮಾಧ್ಯಮಗಳು ಸರ್ವೇಸಾಮಾನ್ಯ...

ಮಕ್ಕಳು ಅಮ್ಮ ಅಪ್ಪನ ಅರಿವಿಗೆ ಬಾರದಂತೆ ಯಾಕೆ ಬೇಗ ಹೊಸ ಆಕರ್ಷಣೆಗೆ ಒಳಪಡುತ್ತಾರೆ, ಹೊಸ ಚಿಂತನೆಯ ಪ್ರಯತ್ನ ಮಾಡಿದಾಗ ತಿಳಿದ ವಿಷಯ ನಿಮ್ಮ ಮುಂದೆ ಹೇಳುವ ಸಣ್ಣ ಪ್ರಯತ್ನ ಅಷ್ಟೇ.

ವಿಶೇಷವಾಗಿ ನಗರ ಪ್ರದೇಶದಲ್ಲಿರುವ ಮಕ್ಕಳ ಪೋಷಕರು ಯಾತ್ರಿಕ ಜೀವನ ಶೈಲಿಗೆ ಮಾರುಹೋಗಿ ಮಕ್ಕಳನ್ನು ಪರೀಕ್ಷೆಯಲ್ಲಿ ಅಂಕ ಪಡೆಯಲು ಸೀಮಿತವಾಗಿಸಿ ಅವರಿಗೆ ಪೋಷಕರಿಂದ ಮಕ್ಕಳು ನಿರೀಕ್ಷಿಸುವ ಪ್ರೀತಿ ಸ್ನೇಹ ಕಾಳಜಿ ಜವಾಬ್ದಾರಿ ಮರೆತಿರುವುದು ಸಹ ಕಾರಣ ,

ಅಪ್ಪ ಅಮ್ಮ ಮಕ್ಕಳಲ್ಲಿ ಸಾಮಾಜಿಕ ಜವಾಬ್ದಾರಿಯ ಅರಿವನ್ನು ತಿಳಿಸದಿರುವುದು, ಮಕ್ಕಳಿಗೆ ಸಂಸ್ಕಾರದ ಕಲಿಸಿ ಕಲಿಕೆಯ ಜೊತೆಗೆ ಅವನ ಜವಾಬ್ದಾರಿಯನ್ನು ತಿಳಿಸಿ,ಮಕ್ಕಳು ಪೋಷಕರಿಗೆ ಹೊಸ ವಿಷಯದ ಬಗ್ಗೆ ಕೇಳಿದಾಗ ಸರಿಯಾಗಿ ಸ್ಪಂದಿಸದೆ,

ತಮ್ಮ ಕೀಲಿ ಗೊಂಬೆಯಂತೆ ಅವರನ್ನು ಕಾಣುವುದು ಸಹ ಸೇರಿದೆ,

ಮಕ್ಕಳಿಗೆ ಯಾವುದು ಸರಿ ಯಾವುದು ತಪ್ಪು, ಜನರೊಂದಿಗೆ ಗೆಳೆಯರೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂಬುವ ಜ್ಞಾನ ತಿಳಿಸದಿರುವು ಸಹ ಕಾರಣ,ಪೋಷಕರು/ ಶಿಕ್ಷಕರು ಮಕ್ಕಳಿಗೆ

ಒಳ್ಳೆ ಹವ್ಯಾಸದ ಜೊತೆಗೆ ಕೆಟ್ಟ ಹವ್ಯಾಸದ ಪರಿಣಾಮ ಹಾಗೂ ವಯಕ್ತಿಕ ಬದುಕಿನ ಜೊತೆಗೆ ಸಾಮಾಜಿಕ ಜೀವನದ ಮೇಲೆ ಹೇಗೆ ಪರಿಣಾಮದ ಕುರಿತು ತಿಳಿಸುವ ಜವಾಬ್ದಾರಿಯನ್ನು ಮರೆತಂತಿದೆ..

ಉದಾಹರಣೆ ಮೊಬೈಲ್ ಬಳಸಬೇಡಿ ಎಂದು ಹೇಳಿ ಸುಮ್ಮನಾಗಿ ಅವರಿಂದ ಕಸಿದುಕೊಂಡು ಮೊಬೈಲ್ ನ ಬಗ್ಗೆ ಅವರಲ್ಲಿ ಹೊಸ ಕೌತುಕ ಹುಟ್ಟಿಸುವ ಬದಲು ಅದನ್ನು ಮಿತವಾಗಿ ಉಪಯೋಗಿಸಿ ಅದರಿಂದ ಶೈಕ್ಷಣಿಕಹಾಗೂ ಬೌಧಿಕವೃದ್ಧಿಗೆ ಅನುಕೂಲ ವಾಗುವ ವಿಷಯದ ಬಗ್ಗೆ ನಾವು ಮಕ್ಕ ಳಲ್ಲಿ ಅರಿವು ಹೆಚ್ಚಿಸುವ ಪ್ರಧಾನ್ಯತೆ ಕೊಡಬೇಕು

ಜ್ಞಾನ ಸಂಪಾದನೆಗೆ ಈಗ ಪ್ರಚಲಿತ ಇರುವ ಮಾಧ್ಯಮಗಳನ್ನು ಬಳಸಿ ಉತ್ತಮ ರೀತಿ ಬದುಕಿನ ಅರಿವು ಮೂಡಿಸುವ ಜವಾಬ್ದಾರಿ ನಮ್ಮದು, ಜೊತೆಗೆ

18 ವಯಸ್ಸು ದಾಟದಿರುವವರಿಗೆ ವಾಹನ ಚಲಾವಣೆ ಮಾಡುವ ಆತುರ ಹೆಚ್ಚು ಅದು ಸ್ವಭಾವಿಕ ಕೂಡ ನಿಜ ಕಲಿಕೆ ಬೇಕು ಆದರೆ ಅವರಿಗೆ ಜವಾಬ್ದಾರಿ ಮರೆತು ವಾಹನ ಕೈಗೆ ಕೊಟ್ಟು ಮುಂದೆ ದುರದೃಷ್ಟವಾಗಿ ನಡೆಯುವ ಕೆಲವು ಅಪಘಾತಕ್ಕೆ ಅಪ್ಪ ಅಮ್ಮ ಎದುರಿಸುವ ಅತೀ ಕಠಿಣ ಶಿಕ್ಷೆಯ ಮಾಹಿತಿಯನ್ನು ದಯವಿಟ್ಟು ಮಕ್ಕಳಿಗೆ ವಾಹನ ಕಲಿಸುವ ಮೊದಲು ತಿಳುವಳಿಕೆ ಮೂಡಿಸುವುದು ಸಹ ಅತೀ ಮುಖ್ಯ ಜವಾಬ್ದಾರಿ,

ಮಕ್ಕಳಿಗೆ ಉತ್ತಮ ಹವ್ಯಾಸ ಜೀವನಕ್ಕೆ ಯಾಕೆ ಬೇಕು ಮತ್ತು ಅದಕ್ಕೆ ಪೂರಕವಾಗಿ ಅವರಿಗೆ ಹೊಸ ಕಲಿಕೆಯ ಚಟುವಟಿಕೆಯಲ್ಲಿ ತೊಡಗಿಸಿ ಉತ್ಸಾಹ ತುಂಬಿ ನೋಡಿಕೊಳ್ಳಬೇಕು ಶಾಲೆ/ ಕಾಲೇಜಿಗೆ ಸುರ್ಪ್ರೈಸ್ ವಿಸಿಟ್ ಕೊಟ್ಟು ಮಕ್ಕಳ ಬಗ್ಗೆ ವಿಚಾರಿಸಿ ಅದು ಸಹ ಉತ್ತಮ ಜವಾಬ್ದಾರಿಯ ನಡವಳಿಕೆ,

ಮಕ್ಕಳಲ್ಲಿ ಅಪ್ಪ ಅಮ್ಮನ ದುಡಿಮೆಯ ಕುರಿತು ಮಾಹಿತಿ ಇರಬೇಕು ನಮ್ಮ ಹಿರಿಯರ ಬದುಕು ನಮಗೆಷ್ಟು ಮಾರ್ಗದರ್ಶಕ ಎನ್ನುವ ತಿಳುವಳಿಕೆ ಕೊಡಬೇಕು,

ದೇಶಪ್ರೇಮ , ಭಾಷೆ, ನಾಡು ನುಡಿ,ರೈತರ ಬಗ್ಗೆ ಹೆಮ್ಮೆ ಪಡುವಂತಹದ್ದು ವಿಷಯ ತಿಳಿಸಬೇಕು ಮಕ್ಕಳು

ಕೇಳಿದ್ದನೆಲ್ಲ ಕೊಡದೆ ಅವಶ್ಯಕತೆ ಇದ್ದರಷ್ಟೇ ಕೊಡಿಸಿ.. ಜೊತೆಗೆ ಕಷ್ಟ ಪಟ್ಟು ದುಡಿದ ಹಣವನ್ನು ಬಗ್ಗೆಯೂ , ಆಹಾರವನ್ನು ಹಿತ ಮಿತವಾಗಿ ಉಪಯೋಗಿಸುವ ಬಗ್ಗೆ ತಿಳಿ ಹೇಳಬೇಕು ದೈಹಿಕವಾಗಿ ಸದೃಢವಾಗಿ ಯಾಕಿರಬೇಕು, ಮಾನಸಿಕ ಆರೋಗ್ಯದ ಬಗ್ಗೆಯು ತಿಳುವಳಿಕೆ ನೀಡುವುದು ಹಾಗೆ ಮನೆಯಲ್ಲಿ ಕಲಿಕೆ ಜೊತೆಗೆ ಉತ್ತಮ ಹವ್ಯಾಸವಿರುವ ಚಟುವಟಿಕೆಗೆ ಪೂರಕ ವಾತಾವರಣ ಕಲ್ಪಿಸಿ ಕೊಟ್ಟು ಮಕ್ಕಳ ಶ್ರೇಯಭಿವೃದ್ಧಿಗೆ ಜೊತೆಯಾಗಿ ನಿಂತು ಒಳ್ಳೆಯ ಜೀವನ ಕಲ್ಪಿಸುವುದು ಪೋಷಕರ ಕರ್ತವ್ಯ... ಹದಿಹರೆಯದ ಮಕ್ಕಳಿಗೆ ಬದುಕಲು ಸಣ್ಣ ದಾರಿ ತೋರಿಸಿದರು ಸಾಕು ಅವರ ವಿವೇಚನೆ ಸೇರಿ ಉತ್ತಮ ಗುಣಮಟ್ಟದ ರಹದಾರಿ ಮಾಡಿಕೊಂಡು ಜೀವನ ನಡೆಸುವರು, ಹಾಗೆ ಅಪ್ಪ,ಅಮ್ಮ,ಒಳ್ಳೆಯ ಗೆಳೆಯ, ಗೆಳತಿಯರು, ಗುರುಗಳ ಮಾರ್ಗದರ್ಶನ, ಪ್ರೀತಿ ವಾತ್ಸಲ್ಯ ಜೊತೆಗೆ ಪ್ರೋತ್ಸಾಹತುಂಬಿ ಜವಾಬ್ದಾರಿ ತಿಳಿಸಿ, ಮಕ್ಕಳ ಬದುಕಿನಲ್ಲಿ ವಿಶ್ವಾಸ ಮೂಡಿಸುವ ಕೆಲಸ ಅವಿರತವಾಗಿರಬೇಕು...



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,